CALLING ATTENTION TO MATTERS OF URGENT PUBLIC IMPORTANCE

re: **Violation of Guest control order and Electricity Restrictions by the Minister of Public Works and Electricity and Demonstration by the Youth Congress**

Sri S. M. SHEERNALY CHANDRASEKHAR (Hosanagar).—On a point of order Sir Rule 63 of the Rules of Procedure says that the matter must be of urgent public importance. In what way the Opposition members are concerned with the demonstration of Youth Congress ? That is purely a party matter. I feel, Madam Speaker, it is only just to place the Chief Minister in an irksome position that they have tabled this Call Attention Notice.

Sri M. S. KRISHNA (Malleswaram).—How can the hon. member raise a point of order on a matter which has been accepted and put in the List of Business ? Even if it means some amount of embarassment to the Minister, it has got to be taken up because it is put in the List of Business.

MADAM SPEAKER.—According to rules a notice has been given and I have allowed it. There is no point of order.

2-00 P.M

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕರೆ).—ನನ್ಮಾನ್ಯ ಅಧ್ಯಕ್ಷಣಿಯವರೇ, ಲೋಕೋಪಯೋಗಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು 8-2-1973 ರಂದು ಅವರ ಮನೆಯಲ್ಲಿ ನಡೆದ ವಿವಾಹದ ಸಂಬಂಧದಲ್ಲಿ ಉಂಟಾದ ಗಲಭೆ ಮತ್ತು ಯುವಕ ಕಾಂಗ್ರೆಸ್ಸಿಗರ ದನ್ನಗಿರಿ ಇವುಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

Sri D. DEVARAJ URS (Chief Minister).—I state as follows : — Sri H. M. Channabasappa Minister for Public Works celebrated the marriage of his daughter on 8-2-1973. The marriage was celebrated in pendals put up in the official residnce of the Minister. There have been comments in the press about the alleged ostentation and also of the alleged breach of the Electricity cut and Guest Control Order. Some call attention motions have also been admitted in this House. I propose to make a comprehensive statement on the subject which will cover incidentally the points raised in the there call attention motions tabled by Sri H. S. Siddappa. I hope this will set at rest further controversy on the subject.

There have been some comments that the Minister should not have celebrated the marriage of his daughter in his official residence. There is nothing unusual in a Minister or Chief Minister celebrating the marriage of his daughter in the house which he is occupying for the time being as the official residence. There is nothing contrary in the rules. Not only Ministers but also Government servants perform marriages and other similar functions in their official residences. The

(SRI D. DEVARAJ URS)

Minister has explained that he made attempts to secure a public Kalyana Mantapa in Bangalore but found that they had already been booked in advance. It has also been verified that the official machinery was not used for any of the purposes connected with the marriage.

Use of electricity was strictly limited to permissible limits. Excess power for decoration and lighting was met by private arrangement with a small Diesel unit.

There have been wild allegations that several thousard persons were fed in contravention of the Guest Control Order. The lunch was served in a dining hall of 3,600 sq. ft. in area and in appandal of 3,200 sq.ft. in area. Having regard to the fact that tables and chairs were used and there had to be space between the tows to enable the movement of the servers, the maximum number that could be accomocdated in this area was about 450 persons. Sri Channabasappa had obtained permission from the Food supplies Department to feed 500 persons. It may be mentioned in this connection that in 16 cases permits have been issued to feed between 501 to 1000 persons in Bangalore and in two cases permits were given for entertaining 1,500 persons, one of which was in Coorg and the other in Bangalore. Tho permit given to Sri Channabasappa to feed 500 persons on the occasion of the marriage of his daughter is one of the many issued in such cireumstances and no special favour has been shown to Sri Channabasappa in view of the position the occupies as a Minister.

The members of the Youth Congress (R) numbering about 50-60 (under the leadership of Sri F.M. Khan, General Secretary of the Youth Congress (R)) demonstrated in front of the residence of the Minister at about 11-00 a.m protesting against the alleged "Ostentatious Celebration" by the Minister for his daughter's marriage.

They had hampered the free movement of the traffic, and were also endeavouring to enter the Minister's residence which would have disturaed the peaceful atmosphere of the marriage, Consequently, although their agitation was peaceful, they had to be removed to the Police station. They were released at 9.00 p.m.

ಶ್ರೀ ಎಚ್. ಎಸ್. ಸಿದ್ದಪ್ಪ.—ಮಾನ್ಯ ಸಚಿವರಿಗೆ ವಿವಾಹದ ಸಂದರ್ಭದಲ್ಲಿ ಉಪಯೋಗಿಸು ಪುದಕ್ಕೆ ಕೊಟ್ಟಿದ್ದ ವಿದ್ಯುಚ್ಛಕ್ತಿ ಎಷ್ಟು, ಅವರು ಉಪಯೋಗಿಸಿದ್ದು ಎಷ್ಟು ಮತ್ತು ಮಂತ್ರಿಗಳು ಎಂದು ಅವರಿಗೇನಾದರೂ ಸ್ಪೆಷಲ್ ಪ್ರಿವಿಲೆಜ್ ಕೊಟ್ಟಿದ್ದರೇ ?

ಶ್ರೀ ಡಿ. ದೇವರಾಜ ಅರಸ್.—ಮದುವೆಗಳಲ್ಲಿ ಮತ್ತು ಇತರ ಶುಭ ಕಾರ್ಯಗಳಲ್ಲಿ ಯಾವು ದಕ್ಕಾದರೂ ಖಾಸಗಿ ಜನರು ವಿದ್ಯುಚ್ಛಕ್ತಿಯನ್ನು ಬೇಡಿದಾಗ ಯಾವರೀತಿ ಸರ್ಕಾರ ಕೊಡಬಹುದು ಎನ್ನುವುದಕ್ಕೆ ರೂಲ್ಸ್ ಮಾಡಿದ್ದಾರೆ. ಆ ರೂಲ್ಸ್ ಪ್ರಕಾರ ಶ್ರೀಮಾನ್ ಚನ್ನಬಸಪ್ಪನವರಿಗೆ, ಮಂತ್ರಿಗಳಾಗಿ ಅಲ್ಲ, ಒಬ್ಬ ನಾಗರಿಕರಾಗಿ ಒಟ್ಟು 5.4 ಕಿಲೋವಾಟ್ ಪವರ್ ಕೊಡಬಹುದು ಎಂದು ಕಾನೂನು ಪ್ರಕಾರ ಇತ್ತು. ಅದನ್ನು ಅವರು ಪಡೆದುಕೊಂಡರು. ಅವರು ಉಪಯೋಗ ಮಾಡಿದ್ದು 4.4 ಕಿಲೋವಾಟ್.

ಶ್ರೀ ಕಾಗೋಡು ತಿಮ್ಮಪ್ಪ.—9-2-1973ರ ಪತ್ರಿಕೆಯಲ್ಲಿ ಶ್ರೀ ಎಫ್. ಎಂ. ಖಾನ್ ಅವರು ಕೊಟ್ಟ ಹೇಳಿಕೆಯ ಪ್ರಕಾರ ಖಚಿತವಾಗಿ ಆರು ಸಾವಿರ ಜನಗಳಿಗೆ ಊಟವನ್ನು ಹಾಕಲಾಗಿದೆ, ಸರ್ಕಾರಿ ಸಿಬ್ಬಂದಿ ವರ್ಗವನ್ನು ಬಳಸಿಕೊಳ್ಳಲಾಗಿದೆ, ವಾಹನಗಳನ್ನು ಬಳಸಿಕೊಳ್ಳಲಾಗಿದೆ, ಅದಕ್ಕೆ ಬೇಕಾದ ಸಾಕ್ಷಿ ಆಧಾರಗಳನ್ನು ಕೊಟ್ಟು ರುಜುವಾತುಪಡಿಸುತ್ತೇನೆ ಎಂದು ಹೇಳಿಕೆ ಕೊಟ್ಟಿದ್ದಾರೆ. ಅದರ ಆಧಾರದ ಮೇಲೆ ಇದನ್ನು ಪೋಲೀಸರಿಗೇನಾದರೂ ವಹಿಸಿಕೊಟ್ಟು ತನಿಖೆ ಏನಾದರೂ ಮಾಡಿಸಿದ್ದೀರಾ ?

ಶ್ರೀ ಡಿ. ದೇವರಾಜ ಅರಸ್.—ಅವರು ಹೇಳಿದ್ದಾರೆ ಎಂದೇ ನಾವು ವರಿಷ್ಠೆ ಮಾಡಿಸಿದ ಮೇಲೆ ನಾನು ಈಗ ಹೇಳಿದಂಥ ವಿಚಾರ ಹೊರಗೆ ಬಂದಿದೆ.

Sri KAGODU THIMMAPPA.—He has made a complaint and that complaint could have been investigated by the police.

Sri D. DEVARAJ URS.—Investigation has revealed that the Guest Control Order was not violated.

Sri C. M. ARUMUGHAM.—Is it a fact that for marriage purposes a separate kitchen was constructed and if so, at whose cost it was constructed; was the permission of the Corporation or the Town Planning Director obtained; and whether it was not also a fact that the servants from Kumara Krupa Guest House were used for removing the leaves; and that official cars were used and whether all the Assistant Engineers who attended the marriage were fed or not ?

ಶ್ರೀ ಡಿ. ದೇವರಾಜ್ ಅರಸ್.—ನಿಮ್ಮನ್ನು ಬಿಟ್ಟು ನಾವು ಊಟ ಮಾಡುವುದು ಬೇಡ ಎಂದು ನಾವು ಊಟ ಮಾಡಲಿಲ್ಲ.

ಶ್ರೀ ಪುಟ್ಟಸ್ವಾಮಯ್ಯ.—ನಾನು ಮನೆಯಲ್ಲಿ ಊಟ ಮಾಡಿದೆ. ಅವರು ನಮಗೆ ಅನ್ನ ಎಲ್ಲಿ ಕೊಡುತ್ತಾರೆ ?

ಶ್ರೀ ಡಿ. ದೇವರಾಜ್ ಅರಸ್.—ನೀವು ಎಲ್ಲಾ ಅನ್ನ ಕೇಳುವುದಕ್ಕೆ ಶುರು ಮಾಡಿರುವುದರಿಂದ ದೇಶಕ್ಕೆ ಅನ್ಯಾಯ ಬಂದಿರುವುದು. ಸ್ವಲ್ಪ ದಿವಸ ಅನ್ನ ಇಲ್ಲದೇ ಇದ್ದರೂ ಪರವಾಯಿಲ್ಲ. ನಿಮಗೆ ತಡೆದುಕೊಳ್ಳುವ ಶಕ್ತಿ ಇದೆ. Madam Speaker, I am not in a position to give the names of all those who took dinner on that day. It is not correct to say that a special kitchen for this purpose was constructed and no such thing has come to my knowledge. Regarding the other point that Kumarakrupa Guest House people were made use of and all that, I do not think it is correct. Whenever marriages take place, we use either banana leaves or Muthaga leaves, and after the dinner leaves ought to be thrown out; nobody keeps them inside. This is usual.

Sri C. M. ARUMUGAM.—You want to make use of government servants for this purpose ! How does the Chief Minister say that the kitchen was not coustucted ? I say it was constructed.

Sri D. DEVARAJ URS.—The question was: was there a kitchen constructed for this purpose ? I said, it is not so, because there was already a building. If it was done, it does hot belong to Sri Channabasappa; it is Government property. Even if a government servant was employed for the purpose of throwing out the leaves, he will have been paid, or if they were employed, the question does ont arise. About departmental officers attending the function, should not the officers come to the marriage Madam ? They must have attended.

MADAM SPEAKER.—It is a social function.

ಶ್ರೀ ಹೆಚ್. ಡಿ. ದೇವೇಗೌಡ.—ಮುಖ್ಯ ಮಂತ್ರಿಗಳು ಪತ್ರಿಕೆಯಲ್ಲಿ ಒಂದು ಹೇಳಿಕೆಯನ್ನು ಕೊಡುತ್ತಾ ನಾನು ಆಗಿದ್ದರೆ ಮದುವೆಯನ್ನು ಸರಕಾರಿ ವತಿಯಲ್ಲಿ ಮಾಡುತ್ತಾ ಇರಲಿಲ್ಲ ಎಂದು ಹೇಳಿದ್ದಾರೆ. ಈಗ ಹೇಳುತ್ತಿದ್ದಾರೆ ಇವೊತ್ತು ಮಂತ್ರಿಗಳು ಗವರ್ನಮೆಂಟ್ ರೆಸಿಡೆನ್ಶಿಯಲ್ ಕ್ವಾರ್ಟರ್ಸ್‌ನಲ್ಲಿ ಇರುವಾಗ ಅಲ್ಲಿ ಮದುವೆ ಮಾಡುವುದು ಕಾನೂನಿಗೆ ವಿರೋಧವಲ್ಲ ಎಂದು. ಪತ್ರಿಕೆಗೆ ಹೇಳಿಕೆ ಕೊಡುವಾಗ ಅವರಿಗೆ ಅದರ ಅರಿವು ಇತ್ತೋ ?

ಶ್ರೀ ಡಿ. ದೇವರಾಜ್ ಅರಸ್.—ಅದರ ಅರಿವು ಈಗಲೂ ಇದೆ. ಪತ್ರಿಕೆಯಲ್ಲಿ ಹೇಳಿಕೆ ಕೊಡುವಾಗ ನೀವು ಆಗಿದ್ದರೆ ಮಾಡುತ್ತಿದ್ದಿರಾ ಎಂದು ಕೇಳಿದ್ದಕ್ಕೆ ನಾನು ಮಾಡುತ್ತಾ ಇರಲಿಲ್ಲ ಎಂದು ಹೇಳಿದೆ. ಕಾನೂನಿನಲ್ಲಿ ಅವಕಾಶ ಇರಬಹುದು. ಅದನ್ನು ಉಪಯೋಗಿಸುವುದು ಬಿಡುವುದು ಅವರ ಇಚ್ಛೆ. ಚನ್ನಬಸಪ್ಪನವರು ಊಟಕ್ಕೆ ಆಹ್ವಾನಿಸಿರಬಹುದು. ನಾನು ಏನಾದರೂ ಮದುವೆ ಮಾಡಿದರೆ ಹಳ್ಳಿಯೊಳಗೆ ಹೋಗಿ ಮಾಡಿಕೊಂಡು ಬರುತ್ತಿದೆ ಎಂದು ಹೇಳಿದೆ ಅಷ್ಟೇ.

ಶ್ರೀ ಕಾಗೋಡು ತಿಮ್ಮಪ್ಪ.—ಸಾಮಾನ್ಯ ಜನರ ಮೇಲೆ ಆದರೆ ಆಪಾದನೆ ಬಂದ ತಕ್ಷಣ ಪುಡ್ ಕಂಟ್ರೋಲ್ ಆಕ್ಟ್ ಪ್ರಕಾರ ಇನ್‌ವೆಸ್ಟಿಗೇಷನ್ ಮಾಡುತ್ತಾರೆ. ಆದೇ ರೀತಿಯಲ್ಲಿ ಇಲ್ಲಿ ಆಪಾದನೆ ಬಂದಿರುವಾಗ ಇದನ್ನ ಪೋಲೀಸ್ ಇಲಾಖೆಗೆ ಒಳಪಡಿಸಿ ಅದರ ಮುಖಾಂತರ ತನಿಖೆ ಮಾಡಿದ್ದಾರೆಯೇ ?

ಶ್ರೀ ಡಿ. ದೇವರಾಜ್ ಅರ್ಸ್.—ಇದೆಲ್ಲಾ ಬಂದಿರುವಂಥದ್ದು ಪೋಲೀಸ್ ಇಲಾಖೆಯಿಂದ. ಅವರು ವೆರಿಫೈ ಮಾಡಿ ಇದು ಕಂಟ್ರೋಲ್ ಆರ್ಡರ್‌ನ್ನು ಮೀರಿಲ್ಲ ಎಂದು ಹೇಳಿದ್ದನ್ನು ತಮ್ಮ ಮುಂದೆ ಇಟ್ಟಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಇವರು ಮಾಜಿ ಪೋಲೀಸ್ ಮಂತ್ರಿಗಳು ಆಗಿದ್ದರಿಂದ ಪೋಲೀಸ್ ನವರು ಅವರಿಗೆ ಹೆದರಿಕೊಂಡು ಎನ್‌ಕ್ವೈರಿ ಮಾಡಲಿಲ್ಲ ಎಂದು ಕಾಣುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ಹಾಗೆ ಹೇಳುವುದಾದರೆ ಮಾನ್ಯ ದೇವೇಗೌಡರನ್ನು ಯಾರಿದರೂ ಅನೇಕ ಜನ ಹೆದರಿಕೊಳ್ಳುತ್ತಾರೆ. ಯಾಕೆಂದರೆ ಅವರು ಅಪೋಜಿಷನ್ ಲೀಡರ್ ಆಗಿದ್ದಾರೆ, ಅಸೆಂಬ್ಲಿಯಲ್ಲಿ ಕ್ವೆಶ್ಚನ್ ಹಾಕುತ್ತಾರೆ, ಆಪಾದನೆ ಮಾಡುತ್ತಾರೆ ಎಂದು ಹೆದರಿಕೆ ಇದ್ದೇ ಇರುತ್ತದೆ. ಅದಕ್ಕೆ ಏನು ಮಾಡುವುದಕ್ಕೆ ಆಗುತ್ತದೆ ?

ಶ್ರೀ ಎಂ. ಎಸ್. ಕೃಷ್ಣನ್.—ನಾನು ಆಗಿದ್ದರೆ ಆ ರೀತಿ ಮಾಡುತ್ತಾ ಇರಲಿಲ್ಲ ಎಂದು ಪತ್ರಿಕೆಯಲ್ಲಿ ಹೇಳಿದ್ದೀರಿ. ಪರೋಕ್ಷವಾಗಿ ಅದರೂ ಆ ರೀತಿ ಮಾಡಿದ್ದು ತಪ್ಪು ಎಂದು ಅರ್ಥವಾಗುತ್ತದೆ. ಮುಖ್ಯ ಮಂತ್ರಿಗಳಾಗಿರುವವರು ಇನ್ನೊಬ್ಬರು ಮಾಡಿದ್ದು ತಪ್ಪು ಎಂದು ತಿಳಿದ ಮೇಲೆ ಅವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಡಿ. ದೇವರಾಜ್ ಅರಸ್.—ನಾನು ಮಾಡದೆ ಇರುವುದನ್ನು ಬೇರೆಯವರು ಮಾಡಿದರೆ ಅದನ್ನು ತಪ್ಪು ಎಂದು ಹೇಗೆ ಹೇಳಲಿ ? ಇನ್ನೊಂದು ವಿಷಯ ಅಧ್ಯಕ್ಷರ ಗಮನಕ್ಕೆ ತರುತ್ತೇನೆ ಲಗ್ನ ಮಾಡುವವರು ಅವರವರ ಅನುಕೂಲ, ಅವಕಾಶ ಮತ್ತು ಸನ್ನಿವೇಶಕ್ಕೆ ತಕ್ಕಂತೆ ಏರ್ಪಾಡು ಮಾಡಿಕೊಳ್ಳಬೇಕಾಗುತ್ತದೆ. 25 ರೂಪಾಯಿನಲ್ಲಿ ಲಗ್ನ ಮಾಡುವವರು ಇದ್ದಾರೆ, 15—20 ಜನ ಸೇರಿಕೊಂಡು ದೇವರ ಮುಂದೆ 5 ರೂಪಾಯಿ ಪೂಜಾರಿಗೆ ಕೊಟ್ಟು ಮದುವೆ ಮಾಡಿಕೊಳ್ಳುವವರು ಇದ್ದಾರೆ. ರಿಜಿಸ್ಟರ್ಡ್ ಮ್ಯಾರೇಜ್ ಮಾಡಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿದ್ದೇವೆ. 25 ರೂಪಾಯಿ ಕೊಟ್ಟು ರಿಜಿಸ್ಟ್ರೇಷನ್ ಮೂಲಕ ಲಗ್ನ ಮಾಡುವವರು ಇದ್ದಾರೆ. 5 ಸಾವಿರ ರೂಪಾಯಿಗಳು ಖರ್ಚುಮಾಡುವವರು ಇದ್ದಾರೆ, 5 ಲಕ್ಷ ರೂಪಾಯಿಗಳನ್ನು ಖರ್ಚುಮಾಡುವವರು ಇದ್ದಾರೆ, ಕೆಲವರು ಕೋಟಿ ರೂಪಾಯಿ ಖರ್ಚುಮಾಡುವವರು ಇದ್ದಾರೆ. ಅವರ ಸನ್ನಿವೇಶಕ್ಕೆ ತಕ್ಕಂತೆ ಮಾಡಿಕೊಂಡರೆ ನೀವು ಏನು ಮಾಡುವುದಕ್ಕೆ ಆಗುತ್ತದೆ ? ಯಾರಿಗೆ ಯಾವುದು ಸುಲಭವಾಗಿ ಕಾಣುತ್ತದೆಯೋ ಅದರಂತೆ ಮಾಡಿಕೊಳ್ಳುತ್ತಾರೆ ಎಂದು ಹೇಳುತ್ತೇನೆ. ಈಗಲೂ ಮತ್ತೆ ಅದನ್ನೇ ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಎಷ್ಟೋ ಮಂತ್ರಿಗಳು ಲಗ್ನ ಮಾಡಬೇಕಾಗಿದೆ. ನಾರಮ್ಸ್ ಫಿಕ್ಸ್ ಮಾಡಿ.

ಶ್ರೀ ಎಚ್. ಎಸ್. ಸಿದ್ದಪ್ಪ.—ತಾವು ಈಗ ಕೊಟ್ಟಂಥ ಅಭಿಪ್ರಾಯವನ್ನು ಗಮನದಲ್ಲಿ ಇಟ್ಟುಕೊಂಡರೆ ಯುವಕ ಕಾಂಗ್ರೆಸ್ಸಿನವರು ಮಾಡಿದಂಥ ಪ್ರದರ್ಶನ ಸರಿ ಎಂದು ಅಭಿಪ್ರಾಯ ಪಡುತ್ತೀರಾ ಅಥವಾ ಸರಿ ಅಲ್ಲ ಎಂದು ಅಭಿಪ್ರಾಯ ಪಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಅಭಿಪ್ರಾಯ ನಮಗೆ ಬೇಕಾಗಿಲ್ಲ. ಅವರು ಆ ಸಂದರ್ಭದಲ್ಲಿ ಆ ರೀತಿ ಆಗಿರಬಹುದು ಎಂದು ಅನುಮಾನವನ್ನು ಪಟ್ಟು ಆ ರೀತಿ ಮಾಡಿದರು.

ಶ್ರೀ ಕೋಣಂದೂರು ಲಿಂಗಪ್ಪ.— ಪ್ರಚಾರಕ್ಕೋಸ್ಕರ ಹಾಗೆ ಮಾಡಿದರು ಎಂದು ಒಪ್ಪಿಕೊಳ್ಳುತ್ತಿರಾ ?

ಶ್ರೀ ಡಿ. ದೇವರಾಜ ಅರಸ್.—ಯಾರಿಗೆ ಪ್ರಚಾರ ಬೇಕಿಲ್ಲ ? ಶ್ರೀ ಲಿಂಗಪ್ಪನವರಿಗೆ ಬೇಕಿಲ್ಲವೇ ?

ಶ್ರೀ ಕೋಣಂದೂರು ಲಿಂಗಪ್ಪ.—ನುಳ್ಳು ವಿಷಯದ ಮೇಲೆ ನಮಗೆ ಪ್ರಚಾರ ಬೇಕಿಲ್ಲ.

ಶ್ರೀ ಡಿ. ದೇವರಾಜ ಅರಸ್.— ಇದು ನುಳ್ಳು, ದಿಟದ ಪ್ರಶ್ನೆ ಅಲ್ಲ. ಫ್ಯಾಕ್ಟ್ಸ್ ಅಲಗೇಷನ್ಸ್ ಹಾಗೆ ಇರುತ್ತದೆ ಅಲಗೇಷನ್ಸ್ ಮೇಲೆ ಹಾಗೆ ಆಗಿರಬಹುದು ಎಂದು ತಿಳಿದು ಕೊಂಡಿದ್ದೇನೆ. ಅದು ಇಲ್ಲ ಎಂದ ಮೇಲೆ ಸರಿ ಎಂದು ಒಪ್ಪುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಇದು ಕಾನೂನು ಪ್ರಕಾರ ಸರಿ ಇದೆ ಎಂದು ಸಮಾಜಪರವಾದ ಪ್ರತಿಪಾದನೆ ಮಾಡುವ ಜನಕ್ಕೆ ಗೊತ್ತಾಗಲಿ.

ಶ್ರೀ ಡಿ. ದೇವರಾಜ ಅರಸ್.—ನೀವು ಅದರಲ್ಲಿ ಪ್ರವೀಣರು, ಅದು ದೇಶಕ್ಕೆ ಗೊತ್ತಿದೆ

(*ii*) *re* : Fixing of Advertisement by the M.S.R.T.C.

Sri KAGODU THIMMAPPA (Sagar).—I call the attention of the Hon. Minister for Transport with regard to the fixing of advertisement by the M.S.R.T.C.

Sri AZEEZ SAIT (Minister for Transport).—I state as follows :

Madam Speaker, the Corporation accepted the recommendations of the Committee appointed resolution No. 2279 and has resolved that the work of securing advertisements for display on M.S.R.T.C., buses, Bus Stations, Bus Shelters etc, be taken up departmentally by the Corporation and that the scheme be tried for a period of one year.

In pursuance of the above, action has been taken to contact the parties who had displayed the boards previously on our buses, bus stations and bus shelters. While doing so, some of the new firms were also contacted. As on today business worth about Rs. 2,55,095/-has been promised by the parties.

Action bas been taken to invite tenders and a panel of commercial artists have also been selected. Chief Mechanical Engineer has been requested to fabricate about 800 boards so start with. Immediately the boards are ready, the same will be released for painting.

Departments of the Directorate of advertising and visual publicity, Ministry of Information and Brodcasting, Government of India, has addressed a letter enpuiring the details about advertisement with this Corporation as the contract between this Corporation and M/s. Ennar Syndicate expired. Necessary information as desired by them has been furnished and we are awaiting the order to an extent of about Rs. 1 to 2 lakhs. (Nirodh Boards).

(SRI AZEEZ SAIT)

Similarly the Director, Department of Health and Family Planning Services had been addressed soliciting orders for the display of family planning boards, besides making personal contacts. If this contract materialises the advertisement business will be to an extent of Rs. 3 to 4 lakhs as they are interested in propaganda in regard to family planning...Before the end of this month, we may be in a position to execute most of the contracts and during the year 1973—1974 we may be able to secure business worth about Rs. 5 lakhs.

ಶ್ರೀ ಕಾಗೋಡು ತಿಮ್ಮಪ್ಪ.—ಸರಕಾರದ ತೀರ್ಮಾನದ ವಿರೋಧವಾಗಿ ಈ ಕಾರ್ಪೊರೇಶನ್ನಿನವರು ಖಾಸಗಿ ಜನರಿಗೆ ಅನುಕೂಲವಾಗುವ ಹಾಗೆ ಕೆಲಸ ಮಾಡುತ್ತಿರುವುದರಿಂದ ಇದನ್ನು ಇನ್ನೂ ಹೆಚ್ಚು ಲಾಭದಾಯಕವಾಗಿ ಮಾಡಲು ಸರಕಾರ ಮಧ್ಯ ಪ್ರವೇಶಿಸುವುದು ಉಚಿತವಲ್ಲವೇ ?

Sri AZEEZ SAIT.—The view of this Government is that the MSRTC should work economically and on commercial basis. We want that our Corporation should work just like the Maharashtra Corporation. It is true that in recent years there has been a decline in the advertisement charges recovered by the Corporation. At one stage I have said that we should call for tenders and then fix up the agency. The previous man was giving us Rs. 3,25,000. There was a good deal of competition. Another man come forward offering Rs. 12,00,000. The feeling of the Government is that we might get much more money if we call the tenders. The Corporation will work on a clean slate and there may not be any loss in the coming years.

Expiry of the term of the Local Candidate

ಶ್ರೀ ಎಸ್. ಬಂಗಾರಪ್ಪ.- ಮಾನ್ಯ ಅಧ್ಯಕ್ಷರೇ, ಇದೇ ತಿಂಗಳು 28ನೇ ತಾರೀಖಿನ ವೇಳೆಗೆ ಲೋಕಲ್ ಕ್ಯಾಂಡಿಡೇಟುಗಳ ಅವಧಿ ಮುಗಿಯುತ್ತದೆ. ಇದರ ಬಗ್ಗೆ ನಾನು ತಮಗೆ ಒಂದು ಸೂಚನೆ ಕಳುಹಿಸಿದ್ದೇನೆ. ಇದರ ಬಗ್ಗೆ ಸರಕಾರದ ಉತ್ತರ ಜರೂರು ತರಿಸಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು.—ತಮ್ಮ ಸೂಚನೆಯನ್ನು ನಾನು ಸರಕಾರಕ್ಕೆ ಕಳುಹಿಸಿಕೊಡುತ್ತೇನೆ.

Ill-treatment to the Public by a Minister

Sri H. S. SIDDAPPA.—I had given notice of a subject matter to be raised regarding the illtreatment to the public by one of the Ministers of the Cabinet. The Hon. Chief Minister is present in the House. He will be knowing it.

MADAM SPEAKER.—We shall take up the matter after a reply is received by Government.

Notice regarding the Statement of the Finance Minister.

ಶ್ರೀ ಕಾಗೋಡು ತಿಮ್ಮಪ್ಪ.–ರೂಲು 312 ರ ಪ್ರಕಾರ ನಾನು ಮಾನ್ಯ ಶ್ರೀ ಫೋರ್ಪಡೆಯವರು ಕೊಟ್ಟ ಹೇಳಿಕೆಯ ಬಗ್ಗೆ ಒಂದು ಸೂಚನೆ ಕಳುಹಿಸಿ ಅದರ ಚರ್ಚೆಗೆ ಇಲ್ಲಿ ಅವಕಾಶ ಮಾಡಿಕೊಡ ಬೇಕೆಂದು ತಮ್ಮನ್ನು ಕೇಳಿದ್ದೆ. ಇದರ ಬಗ್ಗೆ ಏನಾಯಿತೋ ತಿಳಿಯಲಿಲ್ಲ.

ಅಧ್ಯಕ್ಷರು.—ಇದನ್ನು ವೆರಿಫೈ ಮಾಡಿ ನೋಡಿ ಹೇಳುತ್ತೇನೆ.

Furnishing Accounts etc. of the Mysore Dasara Exhibition as promised by the Labour Minister

ಶ್ರೀ ಎಚ್. ಡಿ. ದೇವೇಗೌಡ.—ಕಳೆದ ಅಧಿವೇಶನದಲ್ಲಿ ಇಲ್ಲಿ ದಸರ ಎಕ್ಸ್‌ಬಿಷನ್ ವಿಚಾರದಲ್ಲಿ ಚರ್ಚೆ ಬಂದಾಗ ಇದರ ಎಲ್ಲ ವಿವರಗಳು ಮತ್ತು ಲೆಕ್ಕ ಪತ್ರಗಳ ಸಂಪೂರ್ಣ-ಪಟ್ಟಿಯನ್ನು ಸಭೆಗೆ ಕಾರ್ಮಿಕ ಮಂತ್ರಿಗಳು ಒದಗಿಸಿಕೊಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದರು. ಅದರಂತೆ ಇದನ್ನು ಮಾನ್ಯ ಸರಕಾರದವರು ಇಲ್ಲಿ ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಕೇಳುತ್ತೇನೆ.

ಅಧ್ಯಕ್ಷರು.—ಸರಕಾರದ ಕಡೆಗೆ ತಮ್ಮ ಸೂಚನೆ ಕೊಟ್ಟು ಕಳುಹಿಸುತ್ತೇನೆ.

Motion of Thanks to the Governor's Address [Debate Contd]

† ಶ್ರೀ ಬಿ. ಪುಟ್ಟಸ್ವಾಮಯ್ಯ (ಸಿರಾ).—ಸ್ವಾಮಿ ರಾಜ್ಯದಲ್ಲಿ ದಿನ ನಿತ್ಯ ಬಳಕೆಯ ವಸ್ತುಗಳ ಬೆಲೆ ದಿನೇ ದಿನೇ ಏರುತ್ತಿದೆ, ಇದರಿಂದ ದಿನ ನಿತ್ಯ ಜೀವನ ಮಾಡುವವರಿಗೆ ಬಹಳ ತೊಂದರೆಯಾಗುತ್ತಿದೆ. ಇಂದು ರಾಜ್ಯದಲ್ಲಿ ಆಹಾರ ಪದಾರ್ಥಗಳ, ದವನಗಳ ಮೇಲೆ, ಸಿಮೆಂಟು, ಕಬ್ಬಿಣ ಮತ್ತು ಇತರ ಬಾಬುಗಳ ಮೇಲೆ ಈ ರೀತಿ ಬೆಲೆ ಏರುತ್ತಿರುವುದರಿಂದ ಕಾಳಸಂತೆಕೋರರಿಗೆ ಹೆಚ್ಚು ರಾಭ ಸಂಪಾದನೆ ಮಾಡಲು ಒಂದು ಅವಕಾಶವಾಗುತ್ತಿದೆ. ಇಂತಹ ಒಬ್ಬ ಕಾಳಸಂತ ಕೋರರನ್ನು ಹಿಡಿದು ಸರಕಾರ ಇದುವರೆಗೆ ಶಿಕ್ಷೆ ಮಾಡಿದೆ ಇರುವುದನ್ನು ನೋಡಿದರೆ ನಮ ರಾಜ್ಯದಲ್ಲಿರುವ ಆಹಾರ ಮಂತ್ರಿಗಳಿಗೆ ದಕ್ಷತೆ ಅಷ್ಟಾಗಿ ಸಾಲದು ಎಂದು ನನಗನಿಸುತ್ತದೆ.

2–30 P. M.

ಈ ಬಗ್ಗೆ ಈ ಸಭೆಯ ಮಾನ್ಯ ಸದಸ್ಯರಾದ ಶ್ರೀ ನಾಗಣ್ಣನವರು ಒಂದು ಪತ್ರಿಕಾ ಹೇಳಿಕೆಯನ್ನು ಕೊಡುತ್ತಾ, ಆಹಾರ ಖಾತೆಯನ್ನು ವಹಿಸಿಕೊಂಡಿರತಕ್ಕ ಮಂತ್ರಿಗಳಿಗೆ ಲವಲೇಶವೂ ಅನುಭವ ಸಾಲದು, ಇದನ್ನು ಮುಖ್ಯಮಂತ್ರಿಗಳು ಪುನರ್ವಿಮರ್ಶೆ ಮಾಡಿ ಬೇರೆಯವರಿಗೆ ವಹಿಸ ಬೇಕೆಂದು ಹೇಳಿದ್ದರು. ಆದರೆ ಮುಖ್ಯಮಂತ್ರಿಗಳು ಯಾವ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಈಗರಾದರೂ ಮುಖ್ಯಮಂತ್ರಿಗಳು ಈ ಖಾತೆಯನ್ನು ಒಬ್ಬ ಚೈತನ್ಯಶಾಲಿಯಾದ ಗಂಡಿಗೋ ಆಥವಾ ಹೆಣ್ಣು ಮಗಳಿಗೋ ವಹಿಸಿದರೆ ಉತ್ತಮ ಎಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ಈ ಮೈಸೂರು ರಾಜ್ಯದಲ್ಲಿ 13 ಜಿಲ್ಲೆಗಳಲ್ಲಿ ಅಭಾವ ಇದೆ ಎಂದು, ಈ ಪ್ರದೇಶಗಳಲ್ಲಿ ತ್ವರಿತ ರೀತಿಯಿಂದ ಕಾಮಗಾರಿಗಳನ್ನು ತೆಗೆದುಕೊಳ್ಳರಾಗುವುದೆಂದು ಮಾನ್ಯ ರೆವಿನ್ಯೂ ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳು ಈ ಸದನದಲ್ಲಿ ಹೇಳಿಕೆ ಕೊಟ್ಟಿದ್ದರು. ಅದರಂತೆ ಒಂದೊಂದು ಜಿಲ್ಲೆಗೆ ಒಬ್ಬೊಬ್ಬ ಮಂತ್ರಿಗಳನ್ನು ನೇಮಕ ಮಾಡಿದರು. ಆ ಮಂತ್ರಿಗಳು ಸಂಬಂಧಪಟ್ಟ ಜಿಲ್ಲೆಗಳಿಗೆ ಬಂದು, ಆ ಜಿಲ್ಲೆಗೆ ಸೇರಿದ ಪ್ರತಿ ಗ್ರಾಮದ ಮುಖಂಡರನ್ನೂ ಮತ್ತು ಅಧಿಕಾರಿಗಳನ್ನು ಕರೆಸಿ ಅಭಾವವಿರುವ ಕಡೆ ಕಾಮಗಾರಿ ಕೆಲಸಗಳನ್ನು ಕೈಕೊಳ್ಳಬೇಕೆಂದು ಸೂಚನೆ ಕೊಟ್ಟರು. ಅದೇ ರೀತಿಯಲ್ಲಹಳೆಯ ಮೈಸೂರಿನಲ್ಲಿ 64ನೇ ಫ್ಯಾಮಿನ್ ರಿಲೀಫ್ ಕೆಳಗೆ ಕಾಮಗಾರಿ ಕೆಲಸಗಳು ಪ್ರಾರಂಭವಾದವು. ನಮ್ಮ ದುರದೃಷ್ಟವಶಾತ್, ನಮ್ಮ ಹಳೆಯ ಮೈಸೂರಿನವರೇ ಆದ ಶ್ರೀಮಾನ್ ಹುಚ್ಚಮಾಸ್ತಿಗೌಡರು ಏಕಾಏಕಿ, ಏನಾಕಾರಣ ಪರಿಶೀಲನೆಯನ್ನು ಸಹ ಮಾಡದೆ ಮಾಡುತ್ತಿರುವ ಕೆಲಸಗಳನ್ನು ಅರ್ಧಕ್ಕೆ

(ಶ್ರೀ ಬಿ. ಪುಟ್ಟಸ್ವಾಮಯ್ಯ)

ನಿಲ್ಲಿಸಬೇಕೆಂದು ಹಳೆಯ ಮೈಸೂರಿನ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಯವರಿಗೆ ಸೂಚನೆಕೊಟ್ಟರು. ಈಗ ಕೆಲಸ ಕುಂಠಿತವಾಗಿದೆ. ತಮ್ಮ ಮೂಲಕ ಸರ್ಕಾರದವರನ್ನು ಕೇಳಿಕೊಳ್ಳುವುದೇನೆಂದರೆ, ಈ ಒಂದು ಪಕ್ಷಪಾತ ನೀತಿ ತರವಲ್ಲ. ಒಂದು ಭಾಗದ ಜನರನ್ನು ಸಮಾಧಾನ ಮಾಡುವ ದೃಷ್ಟಿಯಿಂದ ಇನ್ನೊಂದು ಭಾಗಕ್ಕೆ ಅನ್ಯಾಯ ಮಾಡಿ ರಾಜ್ಯಭಾರ ಮಾಡುವುದು ಸರಿಯಲ್ಲ. ಕೇಂದ್ರದಿಂದ ಹಳೆಯ ಮೈಸೂರಿನ ಭಾಗದ ಬರಗಾಲವನ್ನು ಹೋಗಲಾಡಿಸಲು ಹಣ ತರುವುದಕ್ಕೆ ಸಾಮರ್ಥ್ಯವಿಲ್ಲವೆ ನಿರ್ವೀರ್ಯರಾಗಿದ್ದಾರೆಂದು ಸ್ಪಷ್ಟವಾಗಿ ಹೇಳುತ್ತೇನೆ. ನಾನು ಪೂನ್ನೆ ನೀಲಗಿರಿಗೆ ಹೋಗುವಾಗ ಗುಂಡ್ಲುಪೇಟೆಯ ಕೆಲವು ಗ್ರಾಮಗಳನ್ನು ನೋಡಿದೆ. ಅಲ್ಲಿ ಕುಡಿಯುವುದಕ್ಕೆ ನೀರು ಸಹ ಇಲ್ಲ. ಅಲ್ಲಿ ಕ್ಷಾಮ ಇರುವುದನ್ನು ನಾನು ಕಾಣ್ಣಾರೆ ನೋಡಿದ್ದೇನೆ. ಆದರೂ ಮಾನ್ಯ ಮಂತ್ರಿಗಳು ನಮ್ಮ ಭಾಗವನ್ನು ನಿರ್ಲಕ್ಷ ಮಾಡಿದ್ದಾರೆ ಮತ್ತು ಪಕ್ಷಪಾತ ಮಾಡುತ್ತಿದ್ದಾರೆಂದು ತಮ್ಮ ಮುಖಾಂತರ ಒಂದು ಎಚ್ಚರಿಕೆ ಕೊಡುತ್ತಿದ್ದೇನೆ. ಮಾನ್ಯ ದೇವರಾಜ ಅರಸ್ ಅವರ ಅಡಳಿತ ಇದೇ ರೀತಿ ಮುಂದುವರಿದರೆ, ಅಡಳಿತದ ಅವ್ಯವಸ್ಥೆಗೆ ಜನರನ್ನು ಪ್ರಚೋದನೆ ಮಾಡಿದ್ದೇ ಅದರೆ, ನಮ್ಮ ನೆರೆಯ ರಾಜ್ಯವಾದ ಆಂಧ್ರದಲ್ಲಿ ಇಂದು ಏನು ಆಂಧ್ರ ಮತ್ತು ತೆಲಂಗಾಣ ಎಂದು ಎರಡು ಭಾಗಗಳಾಗಬೇಕೆಂದು ಆಂಧ್ರೋಳನ ನಡೆಯುತ್ತಿದೆ, ಆದೇ ರೀತಿ ಇಲ್ಲಿಯೂ ನಡೆಯುವುದಕ್ಕೆ ನೀವೇ ಪ್ರಚೋದನೆ ಮಾಡಿದ ಹಾಗೆ ಆಗುತ್ತವೆ. ಮುಂದೆ ಏನಾದರು ಗಂಭೀರ ಪರಿಸ್ಥಿತಿ ಉದ್ಭವವಾದರೆ ಅದಕ್ಕೆ ಈಗಿನ ಸರ್ಕಾರವೇ ಹೊಣೆ ಎಂದು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುತ್ತಿದ್ದೇನೆ. ಹಳೆಯ ಮೈಸೂರಿನ ಭಾಗಗಳಲ್ಲಿರುವ ಬರಗಾಲ ಪ್ರದೇಶಗಳಲ್ಲಿ ಪರಿಹಾರ ಕಾಮಗಾರಿ ಕೆಲಸಗಳನ್ನು ಕೈಕೊಳ್ಳದಿದ್ದರೆ ಸತ್ಯಾಗ್ರಹ ಮಾಡುತ್ತೇವೆಂದು ನಮ್ಮ ಪಕ್ಷದ ಸದಸ್ಯರು ಆ ದಿನ ಹೇಳಿದಾಗ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾ ಸತ್ಯಾಗ್ರಹ ಮಾಡುವುದರಿಂದ ಹಣ ಬರುವುದಿಲ್ಲ, ಕೆಲಸ ಕೈಕೊಳ್ಳುವಂತೆ ಆಜ್ಞೆ ಮಾಡಿದ್ದೇವೆಂದು ಹೇಳಿದರು. ಆ ರೀತಿ ಆಜ್ಞೆ ಮಾಡಿ ಒಂದು ವಾರವಾದರೂ ಸಹ ಕೆಲಸ ಕೈಕೊಳ್ಳಲು ಇನ್ನೂ ಹಣ ಒದಗಿಸಲಲ್ಲ. ಎಲ್ಲ ಹಣವನ್ನು ಉತ್ತರ ಕರ್ನಾಟಕದ ಭಾಗಕ್ಕೆ ಒದಗಿಸದೆ, ಹಳೆಯ ಮೈಸೂರಿನ ಭಾಗಗಳಿಗೂ ಸಹ ಹಣ ಒದಗಿಬೇಕೆಂದು ಹೇಳುತ್ತೇನೆ. ಗೋರ್ಕಲ್ಲ ಮೇಲೆ ಮಳೆ ಸುರಿದರೆ ಯಾವ ರೀತಿ ಪ್ರಯೋಜನ ಇಲ್ಲವೋ, ಅನೇ ರೀತಿ ಈ ಕಲ್ಲಾಗಿರುವ ಮಂತ್ರಿಗಳಿಗೆ ಏನಾದರು ಹೇಳಬೇಕೆಂದರೆ ನನಗೆ ನೋವಾಗುತ್ತದೆ. ಪ್ರಪಂಚ ಎಂಬ ಪತ್ರಿಕೆಯಲ್ಲಿ ಬಂದಿರುವ ವಿಷಯವನ್ನು ನೋಡಿದರೆ ನನಗೆ ಸಂಕಟವಾಗುತ್ತದೆ. ಶ್ರೀ ಪಾಟೀಲ್ ಪುಟ್ಟಪ್ಪನವರು ಈ ಪತ್ರಿಕೆಯಲ್ಲಿ ಬರೆಯುತ್ತಾ, ಚಿಕ್ಕಮಗಳೂರಿನ ಟಿ. ಬಿ. ಯಲ್ಲಿ ಒಬ್ಬರು ಮಂತ್ರಿಗಳು ಬಚ್ಚೆ ಬಿಚ್ಚಿ, ಮೈಮೇಲೆ ಪ್ರಜ್ಞೆ ಇಲ್ಲದೆ ಟಿ. ಬಿ. ನುತ್ತಾ ಓಡಾಡುತ್ತಾ ವೀರೇಂದ್ರ ಪಾಟೀಲರಿಗೆ ಧಿಕ್ಕಾರ ಎಂದು ಹೇಳುತ್ತಿದ್ದರಂತೆ. ಈ ಪತ್ರಿಕೆಯನ್ನು ತಮಗೆ ಕಳಿಸಿಕೊಡುತ್ತೇನೆ. ತಾವು ಇದನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕಳಿಸಿಕೊಡಿ. ಇಂತಹವರಿಂದ ಗಂಧದಗುಡಿಯಾದ ನಮ್ಮ ರಾಜ್ಯದಲ್ಲಿ ದುರ್ವಾಸನೆ ಹೊಡೆಯುವುದಕ್ಕೆ ಪ್ರಾರಂಭವಾಗಿದೆ. ನಮ್ಮ ರಾಜ್ಯಕ್ಕೆ ಎಂತಹ ಮಂತ್ರಿಮಂಡಲ ಬಂತು ಎಂದು ಜನರು ಕಳವಳ ಪಡುವಂತಾಗಿದೆ. ಪ್ರಖ್ಯಾತಿ ಪಡೆದ ನಮ್ಮ ರಾಜ್ಯದಲ್ಲಿ ಇಂತಹ ಮಂತ್ರಿಗಳು ಸರ್ಕಾರದಲ್ಲಿ ಸೇರಿಕೊಂಡು ಜನರ ತಲೆ ಒಡೆಯುತ್ತಿದ್ದಾರೆ.

ಶ್ರೀ ಎಂ. ಮಲ್ಲಪ್ಪ.—ನಮ್ಮ ಜಿಲ್ಲೆಯ ಯಾವ ಟಿ. ಬಿ. ಯಲ್ಲಿಯೂ ಅಂತಹ ಕೆಲಸ ನಡೆದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಅಧ್ಯಕ್ಷರೇ, ಮಂತ್ರಿಗಳ ಬಗ್ಗೆ ನಾವು ಗೌರವ ಇಟ್ಟುಕೊಳ್ಳಬೇಕಾದರೆ, ಯಾವ ಮಂತ್ರಿಗಳು ಸಹ ಈ ರೀತಿ ಮಾಡದಿದ್ದರೆ, ಈ ಸರ್ಕಾರದವರು ಆ ಪತ್ರಿಕೆಯ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬೇಕು. ಮಂತ್ರಿಗಳ ಬಗ್ಗೆ ಅಪಪ್ರಚಾರ ಮಾಡುವುದು ನಮ್ಮ ವೃತ್ತಿಯಲ್ಲ. ಮಂತ್ರಿಗಳ ಬಗ್ಗೆ ನಮಗೆ ಭಕ್ತಿ ಇದೆ. ಅವರು ನಮ್ಮ ಅಣ್ಣ ತಮ್ಮಂದಿರು ಎಂಬ ಭಕ್ತಿ ಇದೆ. ಗುಣಶೀಲದ ಅಭಾವದಿಂದ ಈ ರೀತಿಯಾಗಿರಬಹುದೆಂದು ಕಾಣುತ್ತದೆ. ಮಂತ್ರಿಗಳಲ್ಲಿ ದಕ್ಷತೆ ಇದ್ದರೆ ಈ ರೀತಿಯೆಲ್ಲಾ ಏತಕ್ಕೆ ಬರೆಸಿಕೊಳ್ಳುತ್ತಾರೆ. ತಮ್ಮ ಕಡೆ 160 ಜನರು ಇದ್ದೇವೆಂದು ಹೇಳುವುದಾದರೆ, ಆ ಬಗ್ಗೆ ಬೇರೆ ರೀತಿ ಪ್ರಶ್ನೆ ಮಾಡಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರದವರು ಸ್ಪಷ್ಟವಾದ ವಿವರಣೆ ಕೊಡುವುದೇ ಆಗತ್ಯವಿದೆ.

ಶ್ರೀ ಆರ್ ಗುಂಡೂರಾವ್.—ಸುಮ್ಮನೆ ಕಥೆ ಕಟ್ಟಿ ಯಾರೋ ಮಂತ್ರಿಗಳು ಆ ರೀತಿ ಮಾಡಿದ್ದಾರೆಂದು ಹೇಳುವುದಕ್ಕಿಂತ, ಇಂತಹ ಮಂತ್ರಿಗಳು ಮಾಡಿದ್ದಾರೆಂದು ಧೈರ್ಯವಾಗಿ ಜವಾಬ್ದಾರಿಯುತವಾಗಿ ಹೇಳಿ.

ಶ್ರೀ ಪಾಟೀಳ್ ನಾಗರಾಜ್.—ಪ್ರಪಂಚ ಎಂಬ ಪತ್ರಿಕೆಯಲ್ಲಿ ಅದು ವರದಿಯಾಗಿದೆ. ತಮಗೆ ಧೈರ್ಯ ಇದ್ದರೆ ಆ ಪತ್ರಿಕೆಯ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ ಆರ್. ಗುಂಡೂರಾವ್.—ಇಂತಹ ಮಂತ್ರಿಗಳು ಆ ರೀತಿ ಮಾಡಿದರು ಎಂಬ ನಂಬಿಕೆ ಇದ್ದರೆ ಇಂತಹವರು ಮಾಡಿದರು ಎಂದು ಧೈರ್ಯವಾಗಿ ಹೇಳಿ.

ಶ್ರೀ ಪಾಟೀಳ್ ನಾಗರಾಜ್.—ಮುಖ್ಯ ಮಂತ್ರಿಗಳಿಗೂ ಆ ವಿಷಯ ಗೊತ್ತಿದೆ. ಪತ್ರಿಕೆಯವರು ಆರೋಪಣೆ ಮಾಡಿರುವುದು ನಿಜವಿಲ್ಲವಿದ್ದರೆ, ಆ ಪತ್ರಿಕೆಯ ಮೇಲೆ ಚಾರ್ಜ್ ಮಾಡಿ ?

ಅಧ್ಯಕ್ಷರು.—ಯಾವ ಕಾನೂನಿನ ಆಧಾರದ ಮೇಲೆ ತಾವುಗಳು ಮಾತನಾಡುತ್ತಿದ್ದೀರಿ? ತಮಗೆ ಗಂಟಲು ಇದೆ ಎಂದು, ದೊಡ್ಡ ಗಂಟಲಿನಿಂದ ಆ ರೀತಿ ಮಾತನಾಡುವುದು ನರಿಯೇ ?

ಶ್ರೀ ಪಾಟೀಳ್ ನಾಗರಾಜ್.—ಶ್ರೀ ಗುಂಡೂರಾಯರು ಮಾತನಾಡುವುದಕ್ಕೆ ಕಾನೂನು ಇದೆಯೇ ?

ಅಧ್ಯಕ್ಷರು.—ಒಬ್ಬರು ತಪ್ಪು ಮಾಡಿದರೆ, ಅದೇ ತಪ್ಪನ್ನು ಇನ್ನೊಬ್ಬರೂ ಸಹ ಮಾಡ ಬೇಕೆಂದಿದೆಯೇ ?

ಶ್ರೀ ಪಾಟೀಳ್ ನಾಗರಾಜ್.—ತಪ್ಪು ಮಾಡುವ ಉದ್ದೇಶವಲ್ಲ. ನಾನು ಅರಿಕೆ ಮಾಡಿ ಕೊಳ್ಳುವುದು ಇಷ್ಟೆ ? ಈ ಪ್ರಕರಣದಿಂದ ಸಂಬಂಧಪಟ್ಟ ಮಂತ್ರಿಗಳಿಗಾಗಲೀ, ಸರ್ಕಾರಕ್ಕಾಗಲೀ, ಮಂತ್ರಿಮಂಡಲಕ್ಕಾಗಲೀ ಅಗೌರವ ಉಂಟಾಗಿದ್ದರೆ ಅಥವಾ ಈ ಸಭೆಗೆ ಅಗೌರವ ಉಂಟಾಗಿದ್ದರೆ, ಆ ಪತ್ರಿಕೆಯವರ ಮೇಲೆ ಒಂದು ಪ್ರಿವಿಲೆಜ್ ಮೋಷನ್ ಮೂವ್ ಮಾಡಿ ಕ್ರಮ ಕೈಕೊಳ್ಳಬಹುದು. ನಮ್ಮನ್ನೇ ಪ್ರೂವ್ ಮಾಡಿ ಎಂದರೆ ಹೇಗೆ ? ತೆರೆಯ ಮರೆಯಲ್ಲಿ ಇದು ನಡೆದಿದ್ದರೆ ನಾವು ಹೇಗೆ ಕಂಡುಹಿಡಿಯೋಣ ?

ಅಧ್ಯಕ್ಷರು.—ಶ್ರೀ ಬಿ. ಪುಟ್ಟಸ್ವಾಮಯ್ಯನವರು ಅವರ ಭಾಷಣವನ್ನು ಜಾಗ್ರತೆ ಮುಗಿಸಬೇಕು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾನು ಸರಳ ರೀತಿಯಿಂದಲೇ ಮಾತನಾಡಿ ಮುಗಿಸುತ್ತೇನೆ.

ಅಧ್ಯಕ್ಷರು.—ಅಂದರೆ ಇದೇನು ಅಖಾಡವೇ ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳು ಹಾಲಿನಂತಹ ಜವಾಬ್ದಾರಿಯನ್ನು ಹೊಂದಿವೆ, ವ್ಯವಸ್ಥಿತವಾದಂಥ ಪತ್ರಿಕೆಗಳು ನಮ್ಮ ರಾಜ್ಯದಲ್ಲಿವೆ ಎಂದು ಭಾವಿಸಿದ್ದೆ, ಆದರೆ ಶ್ರೀ ಗುಂಡೂರಾಯರಿಗೆ ಪತ್ರಿಕೆಗಳ ಬಗ್ಗೆ ಏನಾದರು ಸಂಶಯವಿದ್ದರೆ ಅಥವಾ ಪತ್ರಿಕೆಗಳ ಬಗ್ಗೆ ಟೀಕೆ ಮಾಡುವುದಾದರೆ, ಮೊದಲು ಅವರ ಹೃದಯ ಮಾಪಾರ್ಡಾಗಬೇಕು.

ನಮ್ಮ ಮೈಸೂರು ರಾಜ್ಯದಲ್ಲಿ ಜನರು ದನದ ಮಾಂಸವನ್ನು ತಿನ್ನಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಮಾತನಾಡುವಾಗ ಪ್ರಕಟ ಮಾಡಿದ್ದಾರೆ. ಈಗ ನಮ್ಮ ರಾಜ್ಯದಲ್ಲಿ 0.19ರಷ್ಟು ಜನ ದನದ ಮಾಂಸ ತಿನ್ನುತ್ತಿದ್ದಾರೆ. ಇನ್ನೂ ಹೆಚ್ಚು ಜನರು ತಿನ್ನಬೇಕು ಎಂದು ಹೇಳಿದ್ದಾರೆ. ಇದರ ಬಗ್ಗೆ ಜೇಪ್-ರೆಕಾರ್ಡ್ ಆಗಿದೆ ಎಂದು ಕೇಳಿದ್ದೇನೆ. ಅದನ್ನು ತರಿಸಿ ಸಮಗ್ರವಾಗಿ ಹೇಳಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ನೋಡಬೇಕು. ಮೈಸೂರು ರಾಜ್ಯದ ಜವಾಬ್ದಾರಿ ಸ್ಥಾನವನ್ನು ಹೊತ್ತಿರುವ ವ್ಯಕ್ತಿ ಭಾರತದ ಸಂಸ್ಕೃತಿಗೆ ವಿರುದ್ಧವಾದ ವಿಷಯಗಳನ್ನು ಮಾತನಾಡತಕ್ಕದ್ದು ಒಳ್ಳೆಯದಲ್ಲ. ಇದರಿಂದ ರಾಷ್ಟ್ರದ ಗೌರವಕ್ಕೆ ಧಕ್ಕೆಯಾಗುತ್ತದೆಂದು ಹೇಳುತ್ತೇನೆ. ಅಲ್ಪ ಸಂಖ್ಯಾತರನ್ನು ಪ್ರತಿನಿಧಿಸತಕ್ಕಂಥ ಈ ಸರ್ಕಾರದ ಆಡಳಿತದಲ್ಲಿ ಬಿಜಾಪುರದಲ್ಲಿ ನಡೆದ ಒಂದೆರಡು ಘಟನೆಗಳನ್ನು ತಮ್ಮ ಮುಖಾಂತರ ಹೇಳುತ್ತೇನೆ. ಇಳಕಲ್ ಗ್ರಾಮದಲ್ಲಿ ನೇಕಾರರಿಗೆ ನೂಲನ್ನು ಹಂಚುವ ಒಂದು ಡಿಪೋ ಇದೆ. ತಾ : 15-2-1973ರಂದು ನೂಲು ಹಂಚುವ ಅಧಿಕಾರಿ ಸರ್ಕಾರದಿಂದ ಬಂದ ನೂಲನ್ನು ಪೂರ್ತಾ ಹಂಚದೆ, ಅರ್ಧ ಭಾಗ ಮಾತ್ರ ಹಂಚಿ ಇನ್ನುಳಿದ ಅರ್ಧ ಭಾಗವನ್ನು ತನ್ನ ಕಛೇರಿಯಲ್ಲಿ ಹಾಗೆಯೇ ಬಚ್ಚಿಟ್ಟರು. ಇದು ಬಡನೇಕಾರರಿಗೆ ಗೊತ್ತಾಗಿ ಅವರು ಸಹಸ್ರಾರು ಸಂಖ್ಯೆಯಲ್ಲಿ ಅದೇ ದಿವಸ ಅವರ ಕಛೇರಿಗೆ ಹೋಗಿ ಬಚ್ಚಿಟ್ಟಿರುವ ನೂಲನ್ನು ತೆಗೆಯಿರಿ ಎಂದು ಕೇಳಿದಾಗ, ಆ ಅಧಿಕಾರಿ ಮತ್ತು ಆಡಳಿತ ಕಾಂಗ್ರೆಸ್ಸಿನ ಸದಸ್ಯರಾದ ನಂಗಪ್ಪ ನಗರಾಳ್ ಅವರು ಸೇರಿಕೊಂಡು, ಇದು ಸರ್ಕಾರದ ನೂಲು ಅಲ್ಲ, ಹಂಚಿಕೆಗಾಗಿ ಇರುವ ನೂಲು ಅಲ್ಲ, ಇದು ಈ ಊರಿನಲ್ಲಿರುವ ಶ್ರೀ ಅರಳೀ ಕಟ್ಟೆಯವರದ್ದು, ಇದು ಡಿಪೋ ಸ್ವತ್ತಲ್ಲ ಎಂದು ಹೇಳಿದರು. ನಂತರ ಅವರು ಶ್ರೀ ಅರಳೀ ಕಟ್ಟೆಯವರ ಮನೆ ಹತ್ತಿರ ಹೋಗಿ ಕೇಳಿದ್ದಾರೆ. ನಿಜಾಂಶ ಗೊತ್ತಾದಾಗ 15ನೇ ತಾರೀಖು ಆ ಬಡ ನೇಕಾರರಿಗೆ ಇದ್ದಂತಹ ನೂಲನ್ನು ಪೋಲೀಸ್ ಇನ್‌ಸ್ಪೆಕ್ಟರ್ ಅಲ್ಲಿಗೆ ಹೋಗಿ ಅವರಿಗೆ ಹಂಚಿಕೆ ಮಾಡಿಸಿ ಕೊಟ್ಟಿದ್ದಾರೆ.

(ಶ್ರೀ ಬಿ. ಪುಟ್ಟಸ್ವಾಮಯ್ಯ)

ಆ ಮೇಲೆ 16ನೇ ತಾರೀಖು ಬೆಳಿಗ್ಗೆ ಬಿಜಾಪುರ ಜಿಲ್ಲಾ ಆಡಳಿತ ಕಾಂಗ್ರೆಸ್ ಜನರಲ್ ಸೆಕ್ರೆಟರಿಗಳಾದ ಇಲಕಲ್ಲಿನ ಬಿಜ್ಜಳ್ ಎನ್ನುವವರು ಇಂಡಾ ಕೆಲಸವನ್ನು ಮಾಡಿಸಿದ್ದಾರೆ ಎಂದು ಸುಮಾರು 500-600 ಜನಗಳು ಅವರ ಮನೆಯ ಮುಂದೆ ಹೋಗಿ ಅವರನ್ನು ಕರದುಕೊಂಡು ಬಂದು ಜನಗಳು ಗೌರವಯುತವಾಗಿ ಮಹಾತ್ಮಾಗಾಂಧೀಜಿಯವರ ಫೋಟೋವನ್ನು ಒಂದು ಕುರ್ಚಿಗೆ ಕಟ್ಟಿ, ಆ ಕುರ್ಚಿಯನ್ನು ಅಲಂಕಾರ ಮಾಡಿ ಅದರೊಡನೆ ಅವರನ್ನು ಮತ್ತು ಕೆಲವು ಆಡಳಿತ ಕಾಂಗ್ರೆಸ್ ನಾಯಕರನ್ನು ಆ ಊರಿನಲ್ಲಿ ಮೆರವಣಿಗೆ ಮಾಡಿದ್ದಾರೆ. ಆಗ ದೇವರಾಜ್ ಅರಸ್ ಅವರಿಗೆ ದಿಕ್ಕಾರ, ಆಡಳಿತ ಕಾಂಗ್ರೆಸ್ಸಿಗೆ ದಿಕ್ಕಾರ ಎಂದು ಜನಗಳು ಘೋಷಣೆ ಮಾಡಿದ್ದಾರೆ. ಆ ಊರಿನಲ್ಲಿ ಹೆಚ್ಚಿಗೆ ಸಂಸ್ಥಾ ಕಾಂಗ್ರೆಸ್ಸಿನವರು ಇರುವುದರಿಂದ ಸರ್ಕಾರದವರು ಈ ರೀತಿ ಮಾಡುತ್ತಿದ್ದಾರೆ. ನಾನು ಸರ್ಕಾರದಲ್ಲಿ ನಮ್ರತೆಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಂತ್ರಿಗಳು ಪಕ್ಷಾತೀತವಾಗಿ ಆಡಳಿತವನ್ನು ಮಾಡಬೇಕೆಂದು. ಸರ್ಕಾರದವರು ನೇಮಿನತಕ್ಕ ಸಮಿತಿಗಳಲ್ಲಿ ಆಡಳಿತ ಕಾಂಗ್ರೆಸ್ಸಿನ ಮುಖಂಡರು ದುರುಪಯೋಗ ಮಾಡಿಕೊಂಡು ಹಣವನ್ನು ಗಳಿಸುವುದಕ್ಕೆ ಹೊರಟಿದ್ದಾರೆ ಎಂದು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ.) ಬನಹಟ್ಟಿ ಮತ್ತು ರಬಕವಿ ಎನ್ನುವ ಊರಿನಲ್ಲಿ ಬಹಳ ಜನ ನೇಕಾರರು ಇದ್ದಾರೆ, ಅಲ್ಲಿ ನೇಕಾರರ ಯಾರು ಬಣ್ಣದ ಸೀರೆಯನ್ನು ನೇಯುಬಾರದು ಎಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಬಣ್ಣದ ಸೀರೆಯನ್ನು ನೇಯುಬಾರದು ಬಿಳಿ ಸೀರೆಯನ್ನು ನೇಯಬೇಕು ಎಂದು ಆಜ್ಞೆ ಮಾಡಿರುವವರು ಮೈಸೂರು ಸರ್ಕಾರದವರು ಅಲ್ಲ. ಕೇಂದ್ರ ಸರ್ಕಾರದವರು ಆ ರೀತಿ ಆಜ್ಞೆ ಮಾಡಿದ್ದಾರೆ. ಮತ್ತು ಆ ರೀತಿ ಯಾರಾದರೂ ಬಣ್ಣದ ಸೀರೆಯನ್ನು ನೇಯ್ದರೆ ಕಟ್ಟಲೆ ಹಾಕುತ್ತೇವೆ ಎಂದು ಕೇಂದ್ರ ಸರ್ಕಾರದವರು ತಿಳಿಸಿದ್ದಾರೆ. ಆದ್ದರಿಂದ ಆ ಬಗ್ಗೆ ರಾಜ್ಯ ಸರ್ಕಾರದವರು ಎಲ್ಲಾ ಕಡೆಗಳಿಗೂ ತಿಳಿಸಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಬಣ್ಣದ ಸೀರೆಯನ್ನು ನೇಯಬಾರದು ಎನ್ನುವ ಚೆಕ್ಸ್‌ಟೈಲ್ಸ್ ಕಮಿಷನರ ಆರ್ಡರನ್ನು ರಬಕವಿ ಮತ್ತು ಬನಹಟ್ಟಿಗೆ ಮಾತ್ರ ಇಂಪ್ಲಿಮೆಂಟ್ ಮಾಡಿದ್ದೀರಾ ಅಥವಾ ರಾಜ್ಯದ ಎಲ್ಲಾ ಕಡೆಗಳಲ್ಲೂ ಅದನ್ನು ಇಂಪ್ಲಿಮೆಂಟ್ ಮಾಡಿದ್ದೀರಾ ? ರಬಕವಿ ಗ್ರಾಮದವರು ಸೀರೆಯನ್ನು ನೆಯ್ಯುವ ವಿಷಯದಲ್ಲಿ ಇರತಕ್ಕಂಥಾ ಸರ್ಕಾರದ ಆಜ್ಞೆಯ ಬಗ್ಗೆ ಹೈಕೋರ್ಟಿನಿಂದ ಸ್ಟೇ ಆರ್ಡರ್ ತಂದಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಗದಗ್‌ನಲ್ಲಿ 4 ಸಾರಿ ಇನ್‌ಪೆಕ್ಷನ್ ಮಾಡಿದ್ದಾರೆ. ಅಲ್ಲಿ ಕೆಲವರನ್ನು ಪ್ರಾಸಿಕ್ಯೂಷನ್ ಮಾಡಬೇಕು ಎನ್ನುವ ಪ್ರಸಂಗ ಬಂದು ಅಲ್ಲಿ ಬಣ್ಣದ ಸೀರೆಗಳನ್ನು ನೇಯುವುದನ್ನು ಬಂದು ಮಾಡಿದ್ದಾರೆ. ರಬಕವಿ ಮತ್ತು ಬನಹಟ್ಟಿಯ ನೇಕಾರರ ಎಜಿಟೇಷನ್ ಬಹಳ ದಿವಸಗಳಿಂದ ಇದೆ. ಅದು ಚುನಾವಣೆಯ ಪೂರ್ವದಿಂದಲೂ ಅವರ ಎಜಿಟೇಷನ್ ಇತ್ತು ಅದ್ದರಿಂದ ಈಗ ಅಲ್ಲಿ ಬಣ್ಣದ ಸೀರೆಗಳನ್ನು ನೇಯುವುದನ್ನು ಬಂದ್ ಮಾಡಬೇಕೆಂದು ಮಾಡಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಚೆಕ್ಸ್‌ಟೈಲ್ಸ್ ಕಮಿಷನರ ಆರ್ಡರನ್ನು ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಅನ್ವಯಿಸುವುದು ಸರ್ಕಾರದ ಕರ್ತವ್ಯ. ಆದರೆ ಕೆಲವು ಕಡೆ ಅದನ್ನು ಇಂಪ್ಲಿಮೆಂಟ್ ಮಾಡಿ ಬಾಕಿ ಕಡೆ ಅದನ್ನು ನೀವು ಕೈಬಿಟ್ಟಿದ್ದೀರಿ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ರಬಕವಿ ಎನ್ನುವ ಗ್ರಾಮದಲ್ಲಿ ಅಲ್ಲಿನ ನೇಕಾರರು ಜೀವನ ಮಾಡುವುದು ಕಷ್ಟವಾಗಿದೆ. ಅಲ್ಲಿ ಸುಮಾರು 15 ಸಾವಿರ ಜನ ನೇಕಾರರು ಇದ್ದಾರೆ. ಅವರು ಇವೊತ್ತು ಭಿಕ್ಷಾಟನೆ ಮಾಡತಕ್ಕಂಥಾ ಪರಿಸ್ಥಿತಿ ಬಂದಿದೆ. ಅದ್ದರಿಂದ ಅವರು ಹೈಕೋರ್ಟಿಗೆ ಹೋಗಿ ಸರ್ಕಾರಿ ಆಜ್ಞೆಯ ಬಗ್ಗೆ ಹೈಕೋರ್ಟಿನಿಂದ ಸ್ಟೇ ಆರ್ಡರನ್ನು ತಂದು ಅವರು ತಮ್ಮ ಕೆಲಸವನ್ನು ಮಾಡಿಕೊಂಡು ಜೀವನ ಮಾಡಬೇಕಾದಂತಹ ಪರಿಸ್ಥಿತಿ ಬಂದಿದೆ.

ಕಡೆಯದಾಗಿ ರಬಕವಿಯಲ್ಲಿ ಸಂಸ್ಥಾ ಕಾಂಗ್ರೆಸ್‌ನವರು ಇದ್ದಾರೆ ಅಂತ ಈರೀತಿ ಮಾಡಿದರೆ ಈಗ ರಾಜ್ಯದಲ್ಲಿ ಹಾಲಿ ಇರತಕ್ಕ ಶ್ರೀಮತಿ ಇಂದಿರಾಗಾಂಧಿಯವರ ಕೃಪಾಪೋಷಿತ ನಾಟಕದ ಮಂಡಲಿ ಡೇರಾ ಚೂರು ಚೂರಾದೀತು. ನೇಕಾರರನ್ನು ನ್ಯಾಯ ದೃಷ್ಟಿಯಿಂದ ನೋಡತಕ್ಕ ಸದ್ಬುದ್ಧಿಯನ್ನು ಚಾಮುಂಡೇಶ್ವರಿಯು ನಿಮಗೆ ಕೊಡಲಿ ಎಂದು ನಾನು ಹೇಳುತ್ತೇನೆ.

ಮಂತ್ರಿಗಳು ವಿರೋಧಪಕ್ಷದವರ ಕ್ಷೇತ್ರಗಳಲ್ಲಿ ಪ್ರವಾಸ ಮಾಡುವಾಗ ಆ ಕ್ಷೇತ್ರದ ಸದಸ್ಯರಿಗೆ ತಿಳುವಳಿಕೆ ಇಲ್ಲದಂತೆ ಪ್ರವಾಸ ಮಾಡುವುದು ನನಗೆ ತುಂಬಾ ಸಂಕಟವಾಗುತ್ತದೆ. ತಮ್ಮತ್ತು ಆ ರೀತಿ ಪ್ರವಾಸ ಮಾಡುವಾಗ ಅವರು ಖಾಸಗೀ ಜನಗಳ ಜೊತೆಯಲ್ಲಿ ಉಟ್ಟೈಸಾಸ ಮಾಡುತ್ತಾರೆ. ಇದು ನ್ಯಾಯವೇ ಎಂದು ನಾನು ಸರ್ಕಾರದ ಗಮನಕ್ಕೆ ತಂದು ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಅವರಿಗೆ ಅತ್ಮೀಯವಾಗಿ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—

ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಅರ್ಪಿಸುವ ನಿರ್ಣಯವನ್ನು ನಮ್ಮ ಮಾನ್ಯ ಸ್ನೇಹಿತರಾದ ಶ್ರೀ ಸುಬ್ಬಯ್ಯಶೆಟ್ಟರು ಈ ಸಭೆಯಮುಂದೆ ಮಂಡಿಸಿದ್ದಾರೆ. ಇದನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ ಈ ಸಂದರ್ಭದಲ್ಲಿ ರಾಜ್ಯಪಾಲರು ನಮ್ಮ ಮುಂದೆ ವಿಮರ್ಶೆಗಾಗಿ ಇಟ್ಟಿರುವಕ್ಕಂಥಾ ಅನೇಕ ವಿಷಯಗಳ ಮೇಲೆ ಕೆಲವು ಅಭಿಪ್ರಾಯಗಳನ್ನು ಸರ್ಕಾರಕ್ಕೆ ಕೊಡಬೇಕೆಂದು ನಾನು ಯೋಚನೆ ಮಾಡಿದ್ದೇನೆ. ಈ ಒಂದು ಸಂದರ್ಭದಲ್ಲಿ ದೇಶದಲ್ಲಿ ಮಳೆ ಬೆಳೆ ಮತ್ತು ಸ್ವೈಸರ್ಗಿಕ ವಿಪತ್ತಿನ ವಿಷಯದಲ್ಲಿ ನಾವು ಯೋಚನೆ ಮಾಡುವುದಾದರೆ ಕ್ಷಾಮ ಪೀಡಿತ ಪ್ರದೇಶಗಳಿಗೆ ಸರ್ಕಾರದವರು ಸಾಕಷ್ಟು ಪರಿಹಾರ ಕೆಲಸಗಳನ್ನು ಮಾಡತಕ್ಕ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಮತ್ತು ಅಲ್ಲಿಯ ಜನರ ಕಷ್ಟವನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರದವರು ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ಮತ್ತು ಇದೇ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಕೆಲವು ಪ್ರದೇಶಗಳಲ್ಲಿ ಮಳೆ ಗಾಳಿಯಿಂದ ಅನಾಹುತಗಳು ನಡೆದಿವೆ. ಅಂಥಾ ಪ್ರದೇಶಗಳಿಗೂ ಕೂಡ ಅಭಾವ ಪೀಡಿತ ಪ್ರದೇಶಗಳಿಗೆ ಕೊಟ್ಟಷ್ಟು ಪ್ರಾಶಸ್ತ್ಯವನ್ನು ಕೊಡಬೇಕಾದ ಅಗತ್ಯ ಇತ್ತು. ಆದರೆ ಅಷ್ಟೊಂದು ಪ್ರಾಶಸ್ತ್ಯವನ್ನು ಆ ಪ್ರದೇಶಗಳಿಗೆ ಸರ್ಕಾರದವರು ಕೊಟ್ಟಿಲ್ಲ ಎಂದು ನಾನು ಸರ್ಕಾರದ ಗಮನಕ್ಕೆ ತರಬೇಕಾದುದು ನನ್ನ ಕರ್ತವ್ಯವಾಗಿದೆ. ಮತ್ತು ಇದಕ್ಕೆ ಒಂದು ಕಾರಣ ಅಜೆನ್ಷನ್ ನೋಟೀಸ್ ಕೂಡ ನಾನು ಕಳುಹಿಸಿ ನನ್ನ ಕ್ಷೇತ್ರದಲ್ಲಿ ಮಳೆ ಗಾಳಿಯ ಅನಾಹುತವಿಂದ ಆಗಿರತಕ್ಕ ಕೊಂದರೆ ನಷ್ಟ ಮತ್ತು ಆ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ವಿವರವನ್ನು ಕೇಳಿದ್ದೇನೆ. ಈ ರೀತಿ ತೊಂದರೆಯಾದವರಿಗೆ 200 ರೂಪಿಂದ 500 ರೂಗಳವರೆಗೆ ತಾತ್ಕಾಲಿಕ ಬಹುಮಾನ ಕೊಡುವುದಾಗಿ ಭರವಸೆ ಕೊಡಿದ್ದೀರಿ. ಮಳೆ ಗಾಳಿಯ ಅನಾಹುತವಿಂದ ತೊಂದರೆಯುಂಟಾಗಿರತಕ್ಕ ಪ್ರದೇಶಗಳಲ್ಲಿ ಸರ್ಕಾರದವರು ಅವರಿಗೆ ಯಾವ ಪರಿಹಾರವನ್ನು ಕೊಡತಕ್ಕಂಥಾ ಕೆಲಸಗಳನ್ನು ಮಾಡಿಲ್ಲ. ಕ್ಷಾಮ ನಿವಾರಣೆಯ ಯೋಜನೆಯನ್ನು ತೆಗೆದುಕೊಳ್ಳುವಾಗ ಸ್ವಾಭಾವಿಕವಾಗಿ ಯಾವ ಪ್ರದೇಶದಲ್ಲಿ ನೀರಾವರಿಯಿಂದ ಜಾಸ್ತಿ ಬೆಳೆಯುವುದಕ್ಕೆ ಅವಕಾಶ ಇದೆ ಅಲ್ಲಿರುವರಿಗೆ ಅವಕಾಶಗಳನ್ನು ಕಲ್ಪಿಸಿಕೊಟ್ಟು ಬೆಳೆ ಬೆಳೆದುಕೊಡುವುದಕ್ಕೆ ಅವಕಾಶ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈಗ ಸ್ವಾಭಾವಿಕವಾಗಿ ಒಣಗಿರತಕ್ಕ ವಾರ ಚಿಗುರುವ ಹಾಗೆ ಪ್ರಯತ್ನ ಮಾಡುತ್ತಾರೆ. ಚಿಗುರು ಬರತಕ್ಕ ವಾರವನ್ನು ಒಣಗಿಸುವುದಕ್ಕೆ ಪ್ರಯತ್ನ ಮಾಡತಕ್ಕದ್ದೂ ಕೂಡ ದೇಶಕ್ಕೆ ಹಾನಿಯಾಗುತ್ತದೆ ಎಂದು ಸರ್ಕಾರದವರು ತಿಳಿದುಕೊಳ್ಳಬೇಕಾಗುತ್ತದೆ. ಒಂದು ದೃಷ್ಟಿಯಲ್ಲಿ ಸಣ್ಣ ನೀರಾವರಿ ಯೋಜನೆಗೆ ಸಾಕಷ್ಟು ಪ್ರಾಮುಖ್ಯತೆಯನ್ನು ಕೊಡಬೇಕೆಂದು ನಾವೆಲ್ಲರೂ ಮಾತನಾಡಿದ್ದೇವೆ. ಈಗ ಮಲೆನಾಡಿನಲ್ಲಿ ಸಣ್ಣ ನೀರಾವರಿಗೆ ಅವಕಾಶ ಜಾಸ್ತಿ ಇದೆ.

ಅಲ್ಲಿ ಗುಡ್ಡಗಳಿಂದ ಬರತಕ್ಕಂತಹ ಸಣ್ಣ ಹಳ್ಳಗಳೇನು ಇವೆ ಅವುಗಳನ್ನು ಕಟ್ಟಲು ಮಂತ್ರಿಯವರು ಮನಸ್ಸು ಮಾಡಿದರೆ 2-3 ತಿಂಗಳಲ್ಲಿ ನೀರಾವರಿ ಒದಗಿಸಿ ಅವರಿಂದ ಅಪಷ್ಟು ಹೆಚ್ಚು ಬೆಳೆ ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಇವತ್ತು ಯಾರ್ಯಾರು ಎಲ್ಲೆಲ್ಲ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಾರೋ ಅಲ್ಲಿ ಒಂದು ಫೌಂಡೇಶನ್ ಸ್ಟೋನ್ ಹಾಕಿಬಿಡುತ್ತಾರೆ. ಅದು ಸರಿಯಾದ ನೀತಿಯಲ್ಲ. ಯಾವುದಾದರೂ ಒಂದು ಪ್ರೊಜೆಕ್ಟನ್ನು ತೆಗೆದುಕೊಂಡರೆ ಅದನ್ನು ಪೂರಾ ಪೂರ್ತಿಮಾಡಬೇಕು. ಅದರಿಂದಾ ಉತ್ಪತ್ತಿ ಬರಲು ಪ್ರಾರಂಭವಾಗಬೇಕು ಅವರ ಬದಲು ಒಂದೇ ಸಾರೀ ಅನೇಕ ಪ್ರೊಜೆಕ್ಟುಗಳನ್ನು ತೆಗೆದುಕೊಂಡರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಕೆಲವು ಕಡೆ ರಾಜಕೀಯ ಒತ್ತಡಕ್ಕೋಸ್ಕರ ಒಂದು ಫೌಂಡೇಶನ್ ಹಾಕಿಬಿಟ್ಟಿರೆ. ಅದರಿಂದ ಇವನು ಒಳ್ಳೆಯ ಹೆಸರನ್ನು ಪಡೆಯಬಹುದು ಎಂದು ತಿಳಿದುಕೊಂಡಿರಬಹುದು. ಆದರೆ ಅದರಿಂದ ಯಾವ ಒಂದು ಪ್ರತಿಫಲವೂ ಸರ್ಕಾರಕ್ಕೆ ಬರುವುದಿಲ್ಲ ನಾನು ಪಬ್ಲಿಕ್ ಅಕೌಂಟ್ ಕಮಿಟೀಮೆಂಬರಾಗಿ ಅನೇಕ ಕಡೆ ನೋಡಿದ್ದೇನೆ. ಎಲ್ಲಾ ಕಡೆ ಅದೇ ಅರ್ಧ ಕೆಲಸ

(ಶ್ರೀ ಕೆ. ಎನ್. ವೀರಪ್ಪಗೌಡ)

ಮಾಡಿ ನಿಂತಿದೆ. ಬರುವುದಿಲ್ಲ ಇದನ್ನು ಸರ್ಕಾರದವರು ಸಾಕಷ್ಟು ವಿಮರ್ಶೆ ಮಾಡಿ ಸರ್ಕಾರದಿಂದ ಖರ್ಚಾಗುತಕ್ಕ ಹಣದಿಂದ ಸಾಕಷ್ಟು ಪ್ರತಿಫಲ ಬೇಗ ಬರುವಂತೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಆಡಳಿತ ವ್ಯವಸ್ಥೆಯ ವಿಷಯದಲ್ಲಿ ಹೇಳುವುದಾದರೆ, ಇದು ಅಷ್ಟು ಸಮರ್ಪಕವಾಗಿ ನಡೆಯುತ್ತಾ ಇಲ್ಲ. ಇದಕ್ಕೆ ಕಾರಣ ಆಡಳಿತ ವಹಿಸಿಕೊಂಡ ಸರ್ಕಾರ ಅಥವಾ ಆಡಳಿತ ಪಕ್ಷ ಮಾತ್ರವಲ್ಲ. ಅದೂ ಅಲ್ಲದೆ ಇದರಲ್ಲಿ ಸಾರ್ವಜನಿಕ ಪ್ರತಿನಿಧಿಗಳ ಪಾತ್ರ ಬಹಳವಾಗಿದೆ ಇವೊತ್ತಿನ ದಿವಸ ಅನೇಕ ಕಡೆ ಸಾರ್ವಜನಿಕ ಪ್ರತಿನಿಧಿಗಳು ಟ್ರಾನ್ಸ್‌ಫರ್ ವಿಚಾರದಲ್ಲಿ ಕೈಹಾಕುವ ಸಂದರ್ಭವನ್ನು ನಾವು ಕಾಣುತ್ತಿದ್ದೇವೆ. ಒಬ್ಬ ಅಧಿಕಾರಿಗೆ 5—6 ತಿಂಗಳು ಒಂದು ಜಾಗದಲ್ಲಿ ಸರ್ವಿಸ್ ಆಗಿದ್ದರೂ, ಆತನನ್ನು ಬೇರೆ ಕಡೆಗೆ ವರ್ಗಾಯಿಸುತ್ತಾರೆ. ಇನ್ನು ಕೆಲವು ಸಂದರ್ಭಗಳಲ್ಲಿ ಒಬ್ಬನಿಗೆ ಟ್ರಾನ್ಸ್‌ಫರ್ ಆಗಿ 5—6 ತಿಂಗಳು ಆಗಿದ್ದರೂ ಆತನನ್ನು ಬೇರೆ ಕಡೆಗೆ ವರ್ಗ ಮಾಡಬೇಕೆಂಬ ಒತ್ತಾಯ ತರುತ್ತಾರೆ. ಹೀಗೆ ಆಗಿ ಆಡಳಿತ ವ್ಯವಸ್ಥೆ ಸರಿಯಾಗಿ ಸಮರ್ಪಕವಾಗಿ ನಡೆಯುತ್ತಿಲ್ಲ. ಇನ್ನು ಅನೇಕ ಕಡೆ ಆಫೀಸುಗಳಲ್ಲಿ ಕಳ ಅಧಿಕಾರಿಗಳು ಮೇಲಧಿಕಾರಿಗಳ ಕಂಟ್ರೋಲಿಗೆ ಸಿಗುವುದೇ ಇಲ್ಲ. ಮೇಲಧಿಕಾರಿಗಳು ಏನಾದರೂ ಮಾಡಿದರೆ, ಇವರು ನೇರವಾಗಿ ಶಾಸನಕರ್ತನ್ನ ಹಿಡಿದು ಮಂತ್ರಿಯವರನ್ನೂ ಭೇಟಿ ಮಾಡಿ ಅವಕ್ಕೆ ವಿರುದ್ಧವಾಗಿ ಏನಾದರೂ ಮಾಡಿಕೊಂಡು ಬರುತ್ತಾರೆ. ಟ್ರಾನ್ಸ್‌ಫರ್ ಏನಾದರೂ ಆಗಿದ್ದರೆ, ಅದನ್ನು ಕ್ಯಾನ್ಸಲ್ ಮಾಡಿಸಿಕೊಂಡು ಬಿಡುತ್ತಾರೆ. ಹೀಗಾಗಿ ಮೇಲಿನ ಅಧಿಕಾರಿಗಳಿಗೆ ಇವರ ಮೇಲೆ ಹತೋಟಿಯೇ ಇಲ್ಲದಂತೆ ಆಗಿದೆ. ಇದನ್ನು ನಾವು ಅನೇಕ ಅಧಿಕಾರಿಗಳ ಬಾಯಿಂದ ಕೇಳಿದ್ದೇವೆ. ಉದಾಹರಣೆಗೆನಮ್ಮ ಪ್ಯಾಂಟ್ ಸೆರೆಕ್ಟ್ ಕಮಿಟಿಯ ಜೊತೆಗೆ ನಾನು ನಿನ್ನೆ ಹೊಸಕೋಟೆ ತಾಲೂಕು ಆಫೀಸಿಗೆ ಹೊಗಿದ್ದೇ. ಅಲ್ಲಿ ಹೋದಾಗ ಸಹ ಇದೇ ರೀತಿಯ ಅನುಭವ ನಮಗೆ ಆಯಿತು. ಅಲ್ಲಿ ಯಾವ ರೀತಿ ಆಫೀಸು ನಡೆಯುತ್ತಿದೆ, ಮತ್ತು ಎಷ್ಟು ಕುರ್ಚಿಗಳು ಖಾಲಿ ಇವೆ ಎಂಬುದನ್ನು ನಾವು ನೋಡಿದ್ದೇವೆ. 5 ಜನ ಇರುವಲ್ಲಿ ಒಬ್ಬರು ಮಾತ್ರ ಇದ್ದರು ಹೀಗೆ ಪರಿಸ್ಥಿತಿ ಇರುವಾಗ ಮೇಲಿನವರು ಏನಾದರೂ ಕ್ರಮ ತೆಗೆದುಕೊಂಡರೆ, ಅದಕ್ಕೆ ವಿರುದ್ಧವಾಗಿ ಏನಾದರೂ ಇವರು ಮಾಡಿಸಿಕೊಂಡು ಬಿಡುತ್ತಾರೆ. ಹೀಗೆ ಆಗಿದೆ ನಮ್ಮ ಆಡಳಿತ. ನಮ್ಮ ಶ್ಯಾಂಗೇರಿಯ ವಿಷಯವನ್ನು ಹೇಳುವುದಾದರೆ, ಅದನ್ನು ನಾನು ಹಿಂದೆ ಬಜೆಟ್ ಭಾಷಣದಲ್ಲಿಯೂ ಹೇಳಿದ್ದೆ. ಹಿಂದೆ ಅಲ್ಲಿ ಚಂದ್ರಶೇಖರ ಭಾರತಿ ಸ್ವಾಮಿಗಳು ಇದ್ದರು. ಆಗ ಇಂಥ ಯಾವ ರಾಜಕೀಯ ಸಮಾರಂಭಗಳೂ ನಡೆಯುತ್ತಾ ಇರಲಿಲ್ಲ. ಆದರೆ ಈಗ ಅವರಿಂದಾ ಆಡಳಿತ ಹೇಗೆ ಕೆಟ್ಟು ಹೋಗುತ್ತಿದೆ. ಎಂಬುದನ್ನು ಹೇಳುತ್ತೇನೆ. ಅಲ್ಲಿ ಒಬ್ಬ ರೆವೆನ್ಯೂ ಇನ್ಸ್‌ಪೆಕ್ಟರ್ ಇದ್ದಾರೆ. ಅಲ್ಲಿ ಯಾವುದಾದರೂ ಸಮಾರಂಭ ನಡೆಯಬೇಕಾದರೆ, ಈ ಇನ್ಸ್‌ಪೆಕ್ಟರ್ ಹೈಕೋರ್ಟ್ ಜಡ್ಜಿಗಳನ್ನು ಪ್ರತೀ ವರ್ಷ ಒಬ್ಬೊಬ್ಬರನ್ನು ಕರೆಸಿಕೊಳ್ಳುವ ಏರ್ಪಾಡು ಮಾಡುತ್ತಿದ್ದಾರೆ. ಅವರ ಜೊತೆಗೆ ಸರ್ಕಲ್ ಜಡ್ಜ್, ಮುನ್ಸಿಪ್ ಇತ್ಯಾದಿ ಮಹಾನೀಯರುಗಳು ಸಹ ಬರುತ್ತಿದ್ದಾರೆ. ಹೀಗೆ ಜಡ್ಜ್‌ಗಳನ್ನು ಸಮಾರಂಭಗಳಿಗೆ ಕರೆಸಿ, ಸನ್ಮಾನ ಮಾಡಿ ಅವರು ಸಾರ್ವಜನಿಕ ಸಭೆಯಲ್ಲಿ ಇವರನ್ನು ಹೊಗಳಿ ಮಾತನಾಡಿಕೊನೆಗೆ ಕೋರ್ಟುಗಳಲ್ಲಿ ಸಹ ಇವರು ಪ್ರವೇಶ ಮಾಡುವುದಕ್ಕೆ ಪ್ರಾರಂಭ ಮಾಡುತ್ತಿದ್ದಾರೆ. ಈ ವರ್ಷ ಒಬ್ಬರು ಜಡ್ಜ್‌ನ್ನು ಕರೆಸಿದರೆ, ಇನ್ನೊಂದು ವರ್ಷ ಇನ್ನೊಬ್ಬರನ್ನು ಕರೆಸುತ್ತಾರೆ. ಮೊನ್ನೆ ಒಬ್ಬ ಹೈಕೋರ್ಟು ಜಡ್ಜ್‌ನ್ನು ಮತ್ತು ಒಬ್ಬ ಕವಿಯನ್ನು ಕರೆಸಿದ್ದರು. ಹೈ ಕೋರ್ಟುಜಡ್ಜ್ ಯವರು ಅಧ್ಯಕ್ಷತೆ ವಹಿಸಿದ್ದರು. ಆ ಕವಿಗಳು ಭಾಷಣ ಮಾಡುತ್ತಿದ್ದರು. ಅವರು ಭಾಷಣ ಮಾಡುತ್ತಾ, ಈ ಹುಚ್ಚರ ಸರ್ಕಾರದಲ್ಲಿ ಹೇಳುವವರು ಮತ್ತು ಕೇಳುವವರೇ ಇಲ್ಲವೆಂದು ಹೇಳುತ್ತಿದ್ದರು. ನಾನು ಸಹ ಅಲ್ಲೇ ಇದ್ದೆ. ಆರೆವೆನ್ಯೂ ಇನ್ಸ್‌ಪೆಕ್ಟರವರು ಅನೇಕ ಸಲ ಅಲ್ಲಿಯ ಜನರಿಗೆ ಮತ್ತು ಇತರರಿಗೆ ಹೈಕೋರ್ಟಿನಲ್ಲಿ ಅಥವಾ ಇನ್ನಿತರ ಕೋರ್ಟುಗಳಲ್ಲಿ ಏನಾದರೂ ಕೆಲಸಗಳು ಆಗಬೇಕಾದರೆ ನಾನು ಮಾಡಿಸಿಕೊಡುತ್ತೇನೆಂದು ಹೇಳುತ್ತಿದ್ದಾರಂತೆ. ಹೀಗಾಗಿ ಕೋರ್ಟುಗಳಲ್ಲಿಯೂ ಸಹ ಈ ರೀತಿ ಆಡಳಿತದಲ್ಲಿ ಕೈಹಾಕುವುದಕ್ಕೆ ಪ್ರಾರಂಭವಾದರೆ ಇದು ಎಲ್ಲಿಗೆ ಮುಟ್ಟುತ್ತದೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಮೊನ್ನೆ 5—2—1973 ನೇ ದಿವಸ ಯಾವುದೋ ಒಂದು ಸಂತಾಪ ಸೂಚಕ ಸಭೆಯಲ್ಲಿ ಸಮ್ಮಂಧ ವಿಲ್ಲದೆ ನಾನು ಅರಸ್ ರವರನ್ನು ನೋಡಿದೆ. ಅವರಿಗೆ ಹೈಸ್ಕೂಲ್ ಕೊಡುವಂತೆ ಕೇಳಿದೆ, ಪ್ರತಿನಿಧಿಗಳು ಬೇಡವೆನ್ನುತ್ತಾರೆ ಎಂದೆ ಈ ಪ್ರಜಾಪ್ರಭುತ್ವದಲ್ಲಿ ಅಂತವರು ಇದ್ದಾರೆಯೇ ಎಂದು ಮುಖ್ಯ ಮಂತ್ರಿಗಳು ನಾನು ಮಂಜೂರು ಮಾಡುತ್ತೇನೆಂದು ಮಾಡಿದರು ನಾನು ಏನೂ ಬೇಕಾದರೂ ಮಾಡಲಿ

ಎಂದು ಭಾಷಣ ಮಾಡುತ್ತಿದ್ದರು. ಹೀಗೆರಾ್ಲ ಮಾಡಿ ಹೈಕೋರ್ಟ್ ಜಡ್ಜ್‌ಗಳನ್ನು ಹೇಗೆ ನಾವು ಹತ್ತಿರದಲ್ಲಿ ಇಟ್ಟುಕೊಂಡಿದ್ದೇವೆಂದು ತೋರಿಸಿಕೊಂಡು ಇತರ ಮುನ್ಸಿಫ್ ಮತ್ತು ಸೆಶನ್ಸ್ ಜಡ್ಜ್‌ಗಳ ಹತ್ತಿರ ಬೇಕಾದ ಕೆಲಸಗಳನ್ನು ಮಾಡಿಕೊಳ್ಳುತ್ತೇವೆಂದು ಪ್ರಾಚಾರ ಮಾಡುತ್ತಿದ್ದಾರೆ. ಹೈಕೋರ್ಟಿನಲ್ಲಿ ನಹ ಏನಾದರೂ ಮಾಡುತ್ತೇವೆಂದು ಪ್ರಚಾರ ಮಾಡುತ್ತಿದ್ದಾರೆ ಒಬ್ಬ ಮುನ್ಸಿಫರನ್ನು ಎರಡು ಸಾರಿ ಟ್ರಾನ್ಸ್‌ಫರ್ ಮಾಡಿದಾಗ N.R. ಪುರದಲ್ಲಿ ಕ್ಯಾನ್ಸಲ್ ಆಯಿತು. ಅವರು ಈಗ ಧಾರವಾಡ ಕಡೆ ಇದ್ದಾರೆ ಈಗ ಅಲ್ಲಿಂದ ಬದಲಾವಣೆಯಾಗಿದೆಯಂತೆ ಅದನ್ನು ಕ್ಯಾನ್ಸಲ್ ಮಾಡಿಸಿ ಕೊಳ್ಳಲು ಶೃಂಗೇರಿಗೆ ಬೊನ್ನೆ ಬಂದಿದ್ದರು. ಅವರು ಈಗ ಅಲ್ಲಿಗೆ ಬಂದು ನನ್ನನ್ನು ಹಿಂದೆ ಇದ್ದ ಜಾಗದಲ್ಲಿಯೇ ಇಟ್ಟುಕೊಳ್ಳುವುದಕ್ಕೆ ಏನಾದರೂ ಮಾಡಬೇಕೆಂದು ಹೇಳುತ್ತಿದ್ದಾರಂತೆ. ಈ ರೀತಿಯ ಇನ್ಸ್‌ಪೆಕ್ಟರು ಕುಂಕುಮದ ಪಟ್ಟಣ ಇಟ್ಟುಕೊಂಡು ಸ್ವಾಮಿಗಳು ಆಶೀರ್ವಾದ ಮಾಡಿ ಪ್ರಸಾದ ಕಳಿಸಿದ್ದಾರೆಂದು ಎಲ್ಲಾ ಅಧಿಕಾರಿಗಳನ್ನು ನೋಡುತ್ತಾರೆ. ಆದ್ದರಿಂದ ನಾವು ಆಡಳಿತದಲ್ಲಿ ಅಧಿಕಾರ ವಹಿಸಿಕೊಂಡಿರತಕ್ಕ ಜನ ಇದರ ಬಗ್ಗೆ ಎಚ್ಚರಿಕೆಯಿಂದ ಇರದಿದ್ದರೆ ನಾವು ಯಾವ ಒಂದು ಸ್ಕೀಮನ್ನಾಗಲಿ ಅಥವಾ ಪ್ಲಾನಾಗಲಿ ಮಾಡಿದರೆ, ಅದು ಸರಿಯಾದ ರೀತಿಯಲ್ಲಿ ನಡೆಯುವುದಕ್ಕೆ ಸಾಧ್ಯವಿಲ್ಲ.

ಇನ್ನು ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ, ಇಷ್ಟರವರೆಗೆ ಯಾರು ಖಾಸಗೀ ಶಾಲೆಗಳ ಮೈನೇಜ್‌ಮೆಂಟ್ ನಡೆಸುತ್ತಿದ್ದರೋ ಅಂಥವರೇ ವಿದ್ಯಾ ಮಂತ್ರಿಗಳಾಗಿ ಬಂದಿದ್ದಾರೆ. ಹಿಂದೆ ಕಂಠಿಯವರು ಇದ್ದರು ; ಆ ಮೇಲೆ ಶಂಕರ ಗೌಡರು ಇದ್ದರು ; ಈಗ ಬೆದರೀನಾರಾಯಣರವರು ಬಂದಿದ್ದಾರೆ. ಇವರೆಲ್ಲರೂ ಅನೇಕ ಅನೇಕ ವಿದ್ಯಾ ಸಂಸ್ಥೆಗಳು ಆಡಳಿತಗಾರರಾಗಿದ್ದವರು ಇವತ್ತು ಖಾಸಗಿ ಸಂಸ್ಥೆಗಳಲ್ಲಿ ಲಾಗಟ್ಟಿರೆ ದುರುಪಯೋಗವಾಗುತ್ತಿದೆ ; ಕ್ಲಾಸ್ ಇಲ್ಲದೆ, ಬಿಲ್ಡಿಂಗ್ಸ್ ಇಲ್ಲದೆ, 2—3 ಲ ರೂಪಾಯಿ ಹಣವನ್ನು ಡಬ್ಬ ಮಾಡುತ್ತಿದ್ದಾರೆಂದು ದೂರುಗಳು ಇವೆ. ಆದರೂ ನಹ ಒಂದು ಹೈಸ್ಕೂಲು ಒಂದು ಕಡೆ ಇದ್ದರೆ, ಅಲ್ಲಿಯೇ ಇನ್ನೊಂದು ಹೈಸ್ಕೂಲಿಗೆ ಅನುಮತಿ ಕೊಡುತ್ತಿದ್ದಾರೆ. ಅವರಿಗೆ ಒಂದು ರಸೀಟ್ ಪ್ರಿಂಟ್ ಮಾಡುವುದಕ್ಕೆ ಅವಕಾಶ ಸಿಕ್ಕಿದರೆ ಸಾಕು-ಸಾರ್ವಜನಿಕರಿಂದ ಎಷ್ಟು ಬೇಕಾದರೂ ಹಣವನ್ನು ಸಂಗ್ರಹ ಮಾಡುತ್ತಾರೆ ಆ ಪದ್ಧತಿ ಇನ್ನೂ ನಡೆದುಕೊಂಡು ಹೋಗುತ್ತಿದೆ. ಅದೇ ರೀತಿ ಶೃಂಗೇರಿ ಮಠದವರು ಒಂದು ಹೈಸ್ಕೂಲ್ ಬೇಕೆಂದು ಮಾಡಿಕೊಂಡರು. ಹಿಂದೆ ಶೃಂಗೇರಿ ಮಠದಲ್ಲಿ ಒಬ್ಬಳು ಹೆಣ್ಣು ಮಗಳ ಮರ್ಡರ್ ಆಯಿತೆಂದು ಗಲಾಟೆಯಾಗಿ, ಅದರ ಬಗ್ಗೆ ಎನ್‌ಕ್ವಾಯರಿ ಎಲ್ಲಾ ಆಗಿತ್ತು. ಆ ಮೇಲೆ ಆದರಲ್ಲಿ ಏನಾಯಿತು ಎಂದು ಯಾರಿಗೂ ಗೊತ್ತಾಗಿಲ್ಲ. ಆದರೆ ಅಲ್ಲಿ ಯಾವ ಸಂದರ್ಭದಲ್ಲಿಯೂ ಹಿಂದೆಂದೂ ಎಸ್‌ಪಿಯವರಿಗೆ ಸತ್ಕಾರವನ್ನು ಮಾಡಿರಲಿಲ್ಲ. ಆದರೆ ಮರ್ಡರ್ ಆದ ವರ್ಷ ಅಲ್ಲಿಯ ಎಸ್‌ಪಿಯವರು ಟ್ರಾನ್ಸ್‌ಫರ್ ಆಗಿ ಹೋಗುವಾಗ ಅವರಿಗೆ ಸತ್ಕಾರ ಮಾಡಿ ಕಳಿಸಿದರು. ಅದೇ ರೀತಿ ಅಲ್ಲಿಯ ಸಬ್ ಇನ್ಸ್‌ಪೆಕ್ಟರಿಗೂ ಸಹ ಒಂದು ಬಂಗಾರದ ಉಂಗುರವನ್ನು 400-500ರೂ ಬೆಲೆ ಬಾಳುವುದನ್ನು ಕೊಟ್ಟು ಸತ್ಕಾರ ಮಾಡಿ ಕಳಿಸಿದ್ದಾರೆ. ಇದಕ್ಕೆ ನಾವು ಯಾವ ಹೆಸರಿಂದ ಕರೆಯೋಣ ? ಇನ್‌ಫ್ಲುಯೆನ್ಸ್ ಎಂದು ಕರೆಯೋಣವೇ ! ಅಥವಾ ಹೇವರಿಟಿಸಂ ಎಂದು ಕರೆಯೋಣವೆ ! ಹಿಂದೆ ಒಂದು ಸಲ ಒಬ್ಬ ಮುಖ್ಯ ಅಧಿಕಾರಿಗಳು 25 ರೂಪಾಯಿ ಮೇಲೆ ಸರ್ಕಾರೀ ಅಧಿಕಾರಿಗೆ ಯಾರಾದರೂ ಬಹುಮಾನ ಕೊಟ್ಟರೆ ಅದನ್ನು ಸರ್ಕಾರಕ್ಕೆ ಕೊಡಬೇಕೆಂದು ಕಾನೂನು ಇದೆ ಎಂದು ಹೇಳುತ್ತಿದ್ದರು. ಆದರೆ ಇವತ್ತು ಆಡಳಿತದಲ್ಲಿ ಏನಾಗುತ್ತಿದೆ. ಆಡಳಿತ ಇವತ್ತು ಯಾವ ಮಟ್ಟಕ್ಕೆ ಹೋಗುತ್ತಿದೆ ಎಂಬುದನ್ನು ನಾನು ಹೇಳುತ್ತಿದ್ದೇನೆ. ಸರ್ಕಾರದವರು ಈ ಬಗ್ಗೆ ಎಚ್ಚರಿಕೆ ವಹಿಸಬೇಕೆಂದು ಹೇಳುತ್ತಿದ್ದೇನೆ. ಆ ವಿಷಯದಲ್ಲಿ ಬೇರೆ ಯಾವುದಾದರೂ ಸಮಯವನ್ನು ಉಪಯೋಗಿಸಿಕೊಂಡು ಆಗ ಮಾತನಾಡುತ್ತೇನೆ. ಕುಟುಂಬ ಯೋಜನೆಯ ವಿಷಯದಲ್ಲಿ ಹೇಳುವುದಾದರೆ, ಅದು ಅಷ್ಟೊಂದು ಯಶಸ್ವಿಯಾಗುತ್ತಾ ಇಲ್ಲ. ಇದು ಯಾರಿಗೆ ಯಶಸ್ವಿಯಾಗುತ್ತಾ ಇಲ್ಲವೆಂದು ಹೇಳಿದರೆ ತಿಳಿವಳಿಕೆ ಇಲ್ಲದ ಜನರಿಗೆ. ಬಡವರು ಕೂಲಿಕಾರರಿಗೆ ಈ ಯೋಜನೆ ಇಲ್ಲವೋ ಅಂತಹವರಿಗೆ ಎಷ್ಟು ಜನ ಮಕ್ಕಳಾಗಲೀ ಅವರನ್ನು ಯಾರೂ ಕೇಳುವವರು, ಹೇಳುವವರು, ಮತ್ತು ಕಂಟ್ರೋಲ್ ಮಾಡುವವರು ಇಲ್ಲ. ಆಡಳಿತದಲ್ಲಿ ನಡೆಸಿರತಕ್ಕ ಪ್ರಚಾರ ಸರಿಯಾಗಿದೆ. ಅನೇಕರು ಇವರ ಬಗ್ಗೆ ಸರಿಯಾದ ಕಾನೂನು ಮಾಡದೇ ಇದ್ದರೆ, ಈ ಯೋಜನೆ ಯಶಸ್ವಿ ಆಗಲಾರದೆಂಬ ಅಭಿಪ್ರಾಯ ಹೊಂದಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಬಗ್ಗೆ ಒಂದು ಅಧಿಕೃತವಾದ ವಿಶೇಷವಾದಂಥ ಕಾನೂನನ್ನು ತರುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡಬೇಕು. ಈ ಕುಟುಂಬ ಯೋಜನೆಯನ್ನು ಆದಷ್ಟು ಜಾಗ್ರತೆಯಾಗಿ ಹೆಚ್ಚಿನ ಪ್ರಗತಿಗೆ ತೆಗೆದುಕೊಂಡು ಬಂದು, ಈ ರಾಜ್ಯದಲ್ಲಿ ಆಗಾಗ್ಗೆ ಮೇಲಿಂದ ಮೇಲೆ ಆಗತಕ್ಕ ಆರ್ಡಿಕ ನುಧಾರಣೆಗಳನ್ನು ತಪ್ಪಿಸಿ ಯಾವುದಾದರೂ ನಿರ್ದಿಷ್ಟವಾದ ಒಂದು ರೀತಿಯ ಸುಧಾರಣೆಯಾದರೆ, ಯೋಜನೆ ಯಶಸ್ವಿಯಾಗುತ್ತದೆಂಬುದನ್ನು ತಿಳಿದು ಮಾಡಬೇಕೆಂದು. ಸರ್ಕಾರದವರಿಗೆ ತಿಳಿಸಿ ನನ್ನ ಮಾತನು ಮುಗಿಸುತ್ತೇನೆ.

3-00 P.M.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ). —ಸನ್ಮಾನ್ಯ ಅಧ್ಯಕ್ಷಣಿಯವರೇ, ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸಲಿಕ್ಕೆ ಒಂದು ನಿರ್ಣಯವನ್ನು ನಮ್ಮ ಸ್ನೇಹಿತರಾದ ಹಾಗೂ ಈ ಮಾನ್ಯ ಸಭೆಯ ಸದಸ್ಯರಾದ ಶ್ರೀ ಸುಬ್ಬಯ್ಯಶೆಟ್ಟಿಯವರು ಮುಂದನೆ ಮಾಡಿದ್ದಾರೆ. ಅದಕ್ಕೆ ಮಾನ್ಯ ಶ್ರೀ ಶೆಟ್ಟರ್ ಅವರು ಅನುಮೋದನೆಯನ್ನು ಕೊಟ್ಟಿದ್ದಾರೆ. ಇವರಿಬ್ಬರೂ ಈ ಸ್ಥಿತಿಗೆ ಇಳಿಯುತ್ತಾರೆಂದು ನಾನು ತಿಳಿದಿರಲಿಲ್ಲ. ಅದೇನೇ ಇರಲಿ, ರಾಜ್ಯಪಾಲರ ಭಾಷಣ ನಮ್ಮ ಸರ್ಕಾರದ ಬಗ್ಗೆ ಯಥಾಪ್ರಕಾರ ಇದುವರೆಗೂ ಆಡಳಿತ ಪಕ್ಷದವರು ಹಿಂದಿನಿಂದ ಏನು ನಡೆದು ಕೊಂಡು ಬಂದಿದ್ದಾರೋ ಅದೇ ನಡೆಯ, ನುಡಿಯ ವರದಿಯಾಗಿದೆಯೇ ಹೊರತು ಇದರಲ್ಲಿ ವಿಶೇಷವಾಗಿ ಎತ್ತಿ ತೋರಿಸುವ ಯಾವ ಸಂಕೇತವೂ ಇಲ್ಲ. ರಾಜ್ಯಪಾಲರ ಭಾಷಣದಲ್ಲಿ ಅವರ ಸರ್ಕಾರ ಏನೇನು ಸಾಧನೆಯನ್ನು ಮಾಡಿದೆಯೆಂಬುದನ್ನು ಹೇಳಲಿಕ್ಕೆ ಮಾತ್ರ ಪ್ರಯತ್ನ ಮಾಡಿದ್ದಾರೆ. ಆದರೆ ಅವರ ಎಲ್ಲಾ ಸಾಧನೆಗಳನ್ನು ಕೇವಲ ಒಂದು ಕಲ್ಪನೆ ಎನ್ನುವ ರೀತಿಯಲ್ಲಿ ನಾವು ಭಾವಿಸ ಬೇಕಾಗಿದೆ. ಏಕೆಂದರೆ ಅವರ ಸಾಧನೆಗಳು ಯಾವುದೂ ಸಫಲವಾಗಲಿಲ್ಲ. ಎನ್ನುವುದರ ಬಗ್ಗೆ ನನ್ನಲ್ಲಿ ಸಾಕಷ್ಟು ಸಾಕ್ಷಿ ಇದೆ. ನಾನು ಈಗ ಬರೀ ಪೀಠಿಕೆಯನ್ನೇ ಹೆಚ್ಚಿಗೆ ಮಾಡುವುದಕ್ಕೆ ಹೋಗುವುದಿಲ್ಲ. ಮೂಲಭೂತ ವಿಷಯಗಳನ್ನು ಮಾತ್ರ ನಾನು ಪ್ರಸ್ತಾಪ ಮಾಡುವುದಕ್ಕೆ ಇಷ್ಟ ಪಡುತ್ತೇನೆ. ನಾನು ಈಗ ಕ್ಷಾಮದ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಭಾರತದೇಶದಲ್ಲಿ ಆಡಳಿತ ಕಾಂಗ್ರೆಸ್ಸಿನವರು ಒಂದು ಪ್ರಚಾರವನ್ನು ಮಾಡುತ್ತಿದ್ದಾರೆ. ಮಳೆ ಬಂದರೆ ಶ್ರೀಮತಿ ಇಂದಿರಾ ಗಾಂಧಿಯವರನ್ನು ಹೊಗಳುತ್ತಾರೆ. ಮಳೆ ಬಾರದೇ ಇದ್ದರೆ ಇಂದ್ರ ನನ್ನ ತೆಗಳುತ್ತಾರೆ ಇದು ಕಾಂಗ್ರೆಸ್ ಮಾಡುತ್ತಾ ಇರತಕ್ಕ ಮುಖ್ಯವಾದಂಥ ಕೆಲಸವಾಗಿದೆ. ನೆಹರೂ ಯುಗದಿಂದ ಈ ಯುಗದವರೆಗೂ ಯೋಜನೆಗಳ ಮೇಲೆ ಯೋಜನೆಗಳು ಆಗುತ್ತಿವೆ. ಆದರೆ ಬಡಜನರಿಗೆ ಯಾವುದೇ ರೀತಿಯ ಸೌಕರ್ಯಗಳು ತಲುಪದೇ ಇರುವಂತಹ ಯೋಜನೆಗಳನ್ನು ಮಾಡಿಕೊಂಡು ಬಂದಿದ್ದಾರೆ. 25 ವರ್ಷಗಳ ಯೋಜನೆಗಳ ವ್ಯಾಪ್ತಿ ಕೇವಲ 11 ತಿಂಗಳಲ್ಲಿ ಮಾತ್ರ ಆಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಆಡಳಿತ ಪಕ್ಷದವರು ನನಗೇನೋ ಹೊಸಬರಾಗಿ ಏನೇನೂ ಕಾಣುತ್ತಾ ಇಲ್ಲ. ಆದ್ದರಿಂದ ಈ 25 ವರ್ಷಗಳ ಚರಿತ್ರೆ ಏನಿದೆಯೋ ಅದರಂತೆ ಇವರು ನಡೆದಿರುವುದಕ್ಕೂ, ನುಡಿದಿರುವುದಕ್ಕೂ ಈ ನಾಲ್ಕು ಪಂಚವಾರ್ಷಿಕ ಯೋಜನೆಗಳು ವಿಫಲವಾಗಿರುವುದರಿಂದ ಈಗ ನಾವು ಬರಗಾಲ ಪರಿಸ್ಥಿತಿಗೆ ಬಂದು ಮುಟ್ಟಿದ್ದೇವೆ. ಅವರ ಒಂದು ಅಧ್ಯಕ್ಷತೆಗಾಗಿ ನೈಸರ್ಗಿಕವನ್ನು ದೂರುತ್ತಿದ್ದಾರೆ. ದೇವರು ಮಾಡಿಸಿದ್ದು, ನ್ಯಾಚುರಲ್ ಕಲಾಮಿಟಿ ಎಂದು ಹೇಳಿ ನಮ್ಮನೆ ದೇವರನ್ನು ಬೈಯ್ಯಬೇಡಿ. ಮೊದಲೇ ನಮ್ಮ ದೇಶದಲ್ಲಿ ನೀರಾವರಿಗೆ ಸಂಬಂಧಪಟ್ಟ ಯೋಜನೆಗಳನ್ನು ಇವರು ಆರಂಭಮಾಡಿದ್ದರೆ, ಇಷ್ಟು ದುಸ್ಥಿತಿಗೆ ಬರುತ್ತಿರಲಿಲ್ಲ. ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು, ಬಾವಿಗಳನ್ನು ಎಲ್ಲಾ ಕಡೆಗಳಲ್ಲಿಯೂ ತೋಡಿ ಕೊಟ್ಟಿದ್ದರೆ, ಇವತ್ತು ಇಷ್ಟು ನೀರಿಗಾಗಿ ಪರದಾಡುವ ಸ್ಥಿತಿಗೆ ನಾವು ಬರುತ್ತಿರಲಿಲ್ಲ. ಈಗ ಅನೇಕ ಜನರಿಗೆ ಬಹಳ ಅತ್ಯಪ್ಪಿಯಾಗಿ ಖಾಲಿ ನಿವೇಶನಗಳನ್ನು ಕೊಡುತ್ತಿದ್ದೀರಿ. ಬಹಳ ಹಿಂದಿನಿಂದಲೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಟ ಮಾಡಿದವರಿಗೆ ಈಗ ಖಾಲಿ ನಿವೇಶನಗಳನ್ನೂ ಮತ್ತು ತಾಮ್ರ ಪತ್ರಗಳನ್ನು ಕೊಡುತ್ತಿದ್ದೀರಿ. ಇವೆರಡನ್ನೂ ಕೊಟ್ಟು ಕೇವಲ ಮಾನಸಿಕವಾದಿಂದ ಒಂದು ರೀತಿ ಅವರಿಗೆ ಭ್ರಮೆ ಹುಟ್ಟಿಸಿ ಸಂತೋಷಪಡುವ ವ್ಯವಸ್ಥೆಯನ್ನು ಮಾಡುತ್ತಿದ್ದೀರಿ. ನಿಜಕ್ಕೂ ಅವರನ್ನು ಆರ್ಥಿಕವಾಗಿ ಮುಂದಕ್ಕೆ ತರದೆ ಅವರನ್ನು ಉದ್ಧಾರ ಮಾಡುವ ಪ್ರಯತ್ನವನ್ನೇನೋ ಮಾಡುತ್ತಾ ಇಲ್ಲವೆನ್ನುವುದು ನಿಮಗೂ ಗೊತ್ತಿದೆ. ನನಗೂ ಗೊತ್ತಿದೆ. ಆದರೆ ನೀವು ಹೇಳುವುದಿಲ್ಲ, ನಾವು ಹೇಳುತ್ತೇವೆ.

ಇನ್ನು ಶಿಕ್ಷಣದ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳುತ್ತೇನೆ. ರಾಜ್ಯಮಟ್ಟದಲ್ಲಿ ಜಿಲ್ಲಾಮಟ್ಟದಲ್ಲಿ ಕನ್ನಡವನ್ನು ರಾಜ್ಯದ ಆಡಳಿತ ಭಾಷೆಯನ್ನಾಗಿ ಮಾಡುವುದಕ್ಕೆ ಎಲ್ಲಾ ಸಿದ್ಧತೆಗಳನ್ನು ಮಾಡಿದ್ದೇವೆಂದು ರಾಜ್ಯಪಾಲರು ಅವರ ಭಾಷಣದಲ್ಲಿ ಹೇಳಿದ್ದಾರೆ. ಬಹಳ ಸಂತೋಷ. ಈ ಮಾತನ್ನು ಸ್ವಾತಂತ್ರ ಬಂದು 25 ವರ್ಷಗಳ ನಂತರ ಅವರು ಹೇಳುತ್ತಿದ್ದಾರೆ. ಆದರೆ ನಮ್ಮ ಅಕ್ಕಪಕ್ಕದ ರಾಜ್ಯಗಳು ಅಂದರೆ, ತಮಿಳುನಾಡಿನಲ್ಲಿ, ಆಂಧ್ರದಲ್ಲಿ, ಮಹಾರಾಷ್ಟ್ರದಲ್ಲಿ, ಉತ್ತರ ಪ್ರದೇಶದಲ್ಲಿ ಹಾಗೂ ಬಿಹಾರ ಮುಂತಾದ ರಾಜ್ಯಗಳಲ್ಲಿ ಆಯಾ ರಾಜ್ಯಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಈಗಾಗಲೇ ಕಾನೂನು ಪ್ರಕಾರ ಕ್ರಮಬದ್ಧವಾಗಿ ಮಾಡಿದ್ದಾರೆ. ಆದರೆ ಇಲ್ಲಿ ಮೊದಲು ನಿಂದಲೂ ಅಂದಿನಿಂದ ಇಂದಿನವರೆಗೆ ಬಂದಂಥ ಎಲ್ಲಾ ಸರ್ಕಾರಗಳು ಇಲ್ಲಿ ಕನ್ನಡದ ಬಗ್ಗೆ ಅದೇನೋ ಇವರಿಗೆ ಏನಾಗುತ್ತದೋ ಅದರ ಬಗ್ಗೆ ಒಂದು ರೀತಿಯ ನಿರ್ಲಕ್ಷ್ಯ ಭಾವನೆ ಬಂದಿದೆ. ಅವರಿಗೆ ಕನ್ನಡದಲ್ಲಿ ಮಾತನಾಡುವುದು ಕನ್ನಡ ಭಾಷೆಯನ್ನು ಅಭಿವೃದ್ಧಿಗೆ ತಂದು ಕನ್ನಡ ಭಾಷಾ ಪ್ರಭಾವ ಅಥವಾ ಮಟ್ಟವನ್ನು ಏರಿಸುವುದು ಇದರಲ್ಲಿ ಅವರಿಗೆ ಏನೋ ಮುಳ್ಳು ಚುಚ್ಚಿಕೊಳ್ಳುವಂತಾಗಿದೆ.

ಕಾರಣ ಇಷ್ಟೇ. ಇವತ್ತು ನಮ್ಮ ಮಂತ್ರಿ ಮಂಡಲ ಪ್ರಜಾಪ್ರಭುತ್ವದ ಪ್ರಕಾರ ನಡೆಯುತ್ತಾ ಇಲ್ಲ. ಇವತ್ತು ಈ ಸರ್ಕಾರ ಕಾರ್ಯದರ್ಶಿಗಳ ಸರ್ಕಾರವಾಗಿದೆ. ಏಕೆಂದರೆ ಕಾರ್ಯದರ್ಶಿ ಹಾಕಿ ಕೊಟ್ಟಂತೆ, ಅವರು ಏನು ಹೆಜ್ಜೆ ಹಾಕುತ್ತಾರೋ ಅದಕ್ಕೆ ಸರಿಯಾಗಿ ಮಂತ್ರಿಮಂಡಲ ತಾಳ ಕುಟ್ಟುತ್ತಾರೆ. ಅವರ ತಾಳಕ್ಕೆ ಸರಿಯಾಗಿ ಹೆಜ್ಜೆ ಇವರು ಹಾಕುತ್ತಾರೆ. ಇದು ಅಧಿಕಾರಿಶಾಹಿ ಸರ್ಕಾರವೇ ಹೊರತು ಪ್ರಜಾಪ್ರಭುತ್ವ ಸರ್ಕಾರವೆಂದು ನಾನು ಕರೆಯುವುದಕ್ಕೆ ನನಗೆ ಇಷ್ಟವಿಲ್ಲ. ಆದ್ದರಿಂದ ಕನ್ನಡವನ್ನು ಪ್ರಭುತ್ವ ಮಟ್ಟದ ವಿಧಾನಸೌಧಮಟ್ಟಕ್ಕೆ ತರದೇ ಇರುವುದಕ್ಕೆ ಇದೇ ಕಾರಣ ಇವತ್ತು ಸರ್ಕಾರದವರು ಸರಿಯಾಗಿ ಘೋಷಣೆ ಮಾಡಿದರೆ ಈ ಸರ್ಕಾರದಲ್ಲಿ ಏನೇನು ಆಗಬೇಕೋ ಆವೆಲ್ಲವೂ ಆಗುತ್ತದೆ. ಯಾವಾಗ ಅಧಿಕಾರತನದಿಂದ ಅವನ್ನು ಬಳಕೆಗೆ ತರುವುದಕ್ಕೆ ಸಾಧ್ಯವಿಲ್ಲವೋ ಆಗ ಶಾಸನಗಳ ಮೂಲಕ ನೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ. ಹಾಗೆಯೇ ನಮ್ಮ ಶಿಕ್ಷಣದಲ್ಲಿ ನಿಜವಾಗಿಯೂ ಮಧ್ಯಮ ಪಠ್ಯ ಪುನ್ತಕಗಳ ಕೊರತೆ ನಮಗೆ ಈಗ ಏನೇನೂ ಇಲ್ಲವೆಂದು ಹೇಳಬಹುದು. ಏಕೆಂದರೆ, ನಮ್ಮಲ್ಲಿ ಪ್ರೊಫೆಸರ್ಸ್, ರೆಡ್ಡರರ್ಸ್ ಬೇಕಾದಷ್ಟು ಜನರು ಇದ್ದಾರೆ. ಬೇಸಿಗೆ ರಜದ ಸಮಯದಲ್ಲಿ ಇಂತಿಂಥ ಸಬ್ಜೆಕ್ಟ್‌ಗಳನ್ನು ಕನ್ನಡಕ್ಕೆ ಅನುವಾದ ಮಾಡಿಕೊಡಬೇಕೆಂದು ಸರ್ಕಾರ ಘೋಷಣೆ ಮಾಡಬೇಕು. ಮೂರು ತಿಂಗಳು ಅವರಿಗೆ ರಜದಲ್ಲಿ ಸಂಬಳ ಕೊಡುತ್ತಾರೆ. ಸುಮಾರು 10 ಸಾವಿರ ಹೊಸ ಪಠ್ಯ ಪುನ್ತಕಗಳು ಹೊರಗೆ ಬರುವುದಕ್ಕೆ ಅವಕಾಶವಿದೆ. ಈ ಕೆಲಸವನ್ನು ಸರ್ಕಾರದವರು ಮಾಡುತ್ತಾ ಇಲ್ಲ. ಅಧ್ಯಾಪಕರುಗಳೂ ಸಹ ಮಾಡುತ್ತಾ ಇಲ್ಲ. ಹಾಗೆಯೇ ಇನ್ನು ಮುಂದೆ ನ್ಯಾಯಾಲಯ ಭಾಷೆಯೂ ಕನ್ನಡ ಆಗಬೇಕು. ನಮ್ಮ ಜನರ ಭಾಷೆಯಲ್ಲಿ ಜನರಿಗೆ ನ್ಯಾಯ ದೊರಕದೆ ಹೋದರೆ, ಇನ್ನು ಯಾವ ಭಾಷೆಯಲ್ಲಿ ನ್ಯಾಯ ತೀರ್ಮಾನವನ್ನು ಕೊಡುತ್ತಾರೆ? ನಿಜವಾಗಿಯೂ ಈ ದೇಶದಲ್ಲಿ ಪ್ರಜಾಪ್ರಭುತ್ವ ಇದೆಯೆಂದು ತಾವು ಒಪ್ಪುವದಾದರೆ ನಮ್ಮ ಜನರ ಭಾಷೆಯಾದ ಕನ್ನಡದಲ್ಲಿಯೇ ನ್ಯಾಯಾಲಯಗಳಲ್ಲಿ ನ್ಯಾಯ ದೊರಕಬೇಕು. ನಮ್ಮ ಜನರ ಭಾಷೆಯಾದ ಕನ್ನಡವೇ ರಾಜ್ಯದ ಆಡಳಿತ ಭಾಷೆಯಾಗಬೇಕು. ಇದರ ಬಗ್ಗೆ ಸರ್ಕಾರ ನಿಷ್ಠೆಯಿಂದ ಪ್ರಾಮಾಣಿಕತೆಯಿಂದ ನಡೆದುಕೊಳ್ಳುತ್ತಾ ಇಲ್ಲ. ಇವರಿಗೆ ಅಂಬಾಸಡರ್ ಹಾಗೂ ಫಿಯಟ್ ಕಾರ್ ತಯಾರು ಮಾಡುವವರು ಸಿಗುವಾಗ ನಮಗೆ ಕನ್ನಡ ಟೈಪ್‌ರೈಟರ್ ಸಿದ್ಧ ಮಾಡುವುದಕ್ಕೆ ಅದನ್ನು ಮಾಡಿಕೊಟ್ಟವರೇ ಯಾರೂ ಈಗ ಇಲ್ಲವೆಂದೂ ಹೇಳುತ್ತಿದ್ದಾರೆ. ಈ ದುಸ್ಥಿತಿಗೆಲ್ಲಾ ಕಾರಣ ಇವರು ಇವರ ತಲೆಗಳನ್ನು ಆ ಐ.ಎ.ಎಸ್. ಅಧಿಕಾರಿಗಳ ಕೈಗೆ ಕೊಟ್ಟಿರುವುದೇ ಆಗಿದೆ. ಇವರು ಆ ಅಧಿಕಾರಿಗಳ ಕೈಗೊಂಬೆಗಳಾಗಿರುವುದೂ ಇನ್ನೊಂದು ಕಾರಣ. ಆದುದರಿಂದ ನಾನಂತೂ ಇದನ್ನು ಪ್ರಜಾಭುತ್ವ ಸರ್ಕಾರ ಎಂದು ಕರೆಯುವುದಕ್ಕೆ ಸಿದ್ಧನಾಗಿಲ್ಲ.

ಇನ್ನು ರಾಜ್ಯದಲ್ಲಿರತಕ್ಕ ಕ್ಷಾಮದ ಬಗ್ಗೆ ಅನೇಕರು ಮಾತನಾಡಿದ್ದಾರೆ. ಆದ್ದರಿಂದ ನಾನು ಅಷ್ಟು ಇದರ ಬಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಸರ್ಕಾರದವರಿಗೆ ಈ ವಿಚಾರದಲ್ಲಿ ಎಷ್ಟರ ಮಟ್ಟಿಗೆ ಸಹಾಯವನ್ನು ಒದಗಿಸುವುದಕ್ಕೆ ಸಾಧ್ಯವಿದೆಯೋ ಅಷ್ಟನ್ನೂ ಒದಗಿಸಬೇಕೆಂದು ಹೇಳುತ್ತೇನೆ. ಇದರಲ್ಲಿ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ಅದನ್ನು ಹೇಳುತ್ತಿರುವಾಗಲೇ ನಾನು ಸರ್ಕಾರದವರ ಗಮನಕ್ಕೆ ತರಬೇಕಾದ ಮತ್ತೊಂದು ಬಹು ಪ್ರಾಮುಖ್ಯವಾದ ವಿಚಾರವೆಂದರೆ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಕೂಡ ಅಗತ್ಯವಾಗಿ ನಡೆಯಬೇಕಾದ ನಾರ್ಮಲ್ ಕಾಮಗಾರಿಗಳು ಏನಿವೆ ಅವುಗಳನ್ನೂ ಮತ್ತು ತತ್ಕಾಪಿ ಮಲೆನಾಡಿನ ಭಾಗದಲ್ಲಿ ಅಗತ್ಯವಾಗಿ ಆಗಬೇಕಾದ ರಸ್ತೆ, ಸೇತುವೆ ಇತ್ಯಾದಿ ಕಾಮಗಾರಿಗಳನ್ನು ಯಾವ ತಡೆಬಡೆಯೂ ಇಲ್ಲದಂತೆ ನಡೆಸಬೇಕಾದ್ದು ಸರ್ಕಾರದವರ ಹೊಣೆಗಾರಿಕೆ. ಅದನ್ನು ಸರ್ಕಾರದವರು ಮಾಡದಿದ್ದರೆ ಮತ್ತೆ ಈ ರೀಜನಲ್ ಇಂಬ್ಯಾಲೆನ್ಸ್ ಆಗುವುದಕ್ಕೆ ಕಾರಣವಾಗುತ್ತದೆ. ಅದಕ್ಕೆ ಅವಕಾಶ ಕೊಡಬಾರದೆಂದು ನಾನು ಈಗಲೇ ಸರ್ಕಾರವನ್ನು ಎಚ್ಚರ ಮಾಡುತ್ತೇನೆ. ಈಗಾಗಲೇ ಸರ್ಕಾರದವರೇನು ರಾಜ್ಯದ ನಾನಾ ಭಾಗಗಳಿಗೆ ಈ ಕಾಮಗಾರಿಗಳ ಬಗ್ಗೆ ಹಣವನ್ನು ಮಂಜೂರು ಮಾಡಿದ್ದಾರೆ ಅದನ್ನು ಆ ಗ್ರಾಂಟನ್ನು ಲ್ಯಾಪ್ಸಾಗುವುದಕ್ಕೆ ಬಿಡದೆ ಅಲ್ಲಿ ಆ ಕೆಲಸಗಳು ನೆರವೇರುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಾರ್ಮಲ್ ಪರ್ಪಸ್‌ಗಳ ಬಗ್ಗೆ ಕೊಡಬೇಕಾದ ಹಣವನ್ನು ಕೊಡದಿದ್ದರೆ ರಾಜ್ಯದ ಬೇರೆ ಬೇರೆ ಭಾಗಗಳ ಅಭಿವೃದ್ಧಿಗೆ ಧಕ್ಕೆ ಬರುತ್ತದೆ. ಜನರಿಗೂ ಅದರಿಂದ ತೊಂದರೆಯಾಗುತ್ತದೆ. ಇದುದರಿಂದ ಹಾಗೆ ಸರ್ಕಾರದವರು ಮಾಡಬಾರದೆಂದು ಕೇಳಿಕೊಳ್ಳುತ್ತೇನೆ. ಮೊದಲಿನಿಂದಲೂ ನಮ್ಮ ಮಲೆನಾಡಿನಲ್ಲಿ ಈ ಸಾಧನ ಸಂಪರ್ಕಗಳು ಬಹಳ ಕಡಿಮೆ. ಇಲ್ಲಿಯವರೆಗೂ ಆಯಿತಾಯಿತು. ಇನ್ನಾದರೂ ಎಲ್ಲಾ ಆ ಅಭಿವೃದ್ಧಿ ಕಾರ್ಯಗಳ ಬಗ್ಗೆ ಯಾವ ಸಬೂಬನ್ನೂ ಹೇಳದೆ ಅದಕ್ಕೆ ಯಾವ ಅಡೆತಡ್ಡೆಗಳನ್ನೂ ಒಡ್ಡದೆ ಸರ್ಕಾರದವರು ಧನಸಹಾಯವನ್ನು ಮಾಡುತ್ತಾರೆಂದು ನಾನು ಭಾವಿಸಿದ್ದೇನೆ.

(ಶ್ರೀ ಕೋಣಂದೂರು ಲಿಂಗಪ್ಪ)

ಇನ್ನು ನಿರುದ್ಯೋಗ ಸಮಸ್ಯೆ ಪರಿಹಾರದ ಬಗ್ಗೆ ಹೇಳುವುದಾದರೆ ಸರ್ಕಾರದ ಮುಂದೆ ಇದರ ಬಗ್ಗೆ ಯಾವ ಒಂದು ಖಚಿತವಾದ ಯೋಜನೆಯೂ ಇಲ್ಲವೆಂದು ಹೇಳಬೇಕಾಗಿದೆ. ಇಲ್ಲಿ ಒಂದು ನೂರು ಕೋಟಿ ರೂಪಾಯಿಗಳ ಯೋಜನೆಯನ್ನು ಹೇಳಿದ್ದಾರೆ. ಇದರಿಂದ 30 ಸಾವಿರ ಉದ್ಯೋಗಗಳನ್ನು ಕೈಗೊಳ್ಳುವುದಕ್ಕೆ ಅವಕಾಶವಾಗುವುದಾದರೆ ಅದರಲ್ಲಿ ನಮಗೆ ನಮಗೆ 1500 ಕೆಲಸಗಳನ್ನು ದೊರಕಿಸಿಕೊಳ್ಳುವುದಕ್ಕೆ ಸಾಧ್ಯವಾಗಬಹುದು ಅದಕ್ಕೂ ಹೆಚ್ಚು ಸಾಧ್ಯವಿಲ್ಲ. ಅಂದರೆ ಇದರಿಂದ ಅಷ್ಟೇನೂ ಅನುಕೂಲವಾಗಲಿಲ್ಲ. ಇತ್ತೀಚೆಗೆ ಈ ಸರ್ಕಾರ ಬಂದಮೇಲಂತೂ ರಾಜ್ಯದಲ್ಲಿ ಅನಕ್ಷರಸ್ಥರ ಸಂಖ್ಯೆ ಬಲವಾಗುತ್ತಿದೆ: ಗಗನಕ್ಕೆ ಮುಟ್ಟುತ್ತಿದೆ. ನಿರುದ್ಯೋಗಿಗಳಾಗಿರತಕ್ಕ ವಿದ್ಯಾವಂತರನ್ನು ಹಳ್ಳಿ ಹಳ್ಳಿಗಳಿಗೆ ಕಳುಹಿಸಿ ಅಲ್ಲಿರತಕ್ಕ ಅನಕ್ಷರಸ್ಥರನ್ನು ವಿದ್ಯಾವಂತರನ್ನಾಗಿ ಅಂದರೆ ಅಕ್ಷರಸ್ಥರನ್ನಾಗಿ ಮಾಡಬೇಕಾದುದು ಬಹಳ ಮುಖ್ಯವಾದ ಕೆಲಸ. ಇಂಥ ಯೋಜನೆಯನ್ನು ಸರ್ಕಾರ ಮೊದಲು ಕಾರ್ಯಗತ ಮಾಡಬೇಕು. ಅದೇ ರೀತಿ ದೇಶದಲ್ಲಿ ಎಲ್ಲೆಲ್ಲಿ ಬಂಜರ್ ಭೂಮಿ ಇದೆಯೋ ಅಲ್ಲೆಲ್ಲಾ ಅನ್ನವನ್ನು ಉತ್ಪತ್ತಿಮಾಡುವುದಕ್ಕೆ ಅನ್ನ ಸೇನೆಯನ್ನು ಕಳುಹಿಸಬೇಕು. ಹೀಗೆ ಎಲ್ಲಾ ವಿಚಾರದಲ್ಲೂ ಸರ್ಕಾರ ದೇಶದಲ್ಲಿರತಕ್ಕ ಅನಕ್ಷರತೆ ಮತ್ತು ಅನ್ನ ಕ್ಷಾಮಗಳನ್ನು ನಿವಾರಣೆ ಮಾಡುತಕ್ಕ ಪ್ರಯುಕ್ತ ಅಕ್ಷರಸೇನೆ ಮತ್ತು ಅನ್ನ ಸೇನೆಗಳನ್ನು ರಚಿಸಿ ದೇಶದಲ್ಲಿ ತರೆದೊರಿರತಕ್ಕ ಅಭಾವಗಳನ್ನು ಬಗೆಹರಿಸಬೇಕೆಂದು ನಾವು ಇಂದಲ್ಲಾ ಕಳೆದ 25 ವರ್ಷಗಳಿಂದಲೂ ಹೇಳುತ್ತಲೇ ಬಂದಿದ್ದೇವೆ. ಇನ್ನಾದರೂ ಈ ಕೆಲಸವನ್ನು ಈ ಸರ್ಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಹಾಲಿ ಇರತಕ್ಕ ಸರ್ಕಾರವೂ ಕೂಡ ಇಲ್ಲಿಂದ ಅಲ್ಲಿಯವರೆಗೂ ಎಲ್ಲವನ್ನೂ ಕೇಂದ್ರೀಕೃತ ಮಾಡುವುದರಲ್ಲೇ ತಲ್ಲೀನರಾಗಿದ್ದಾರೆ. ಇದರಿಂದ ಖಂಡಿತವಾಗಿಯೂ ಮುಂದೆ ಪ್ರಜಾ ಪ್ರಭುತ್ವಕ್ಕೆ ದೊಡ್ಡ ಧಕ್ಕೆ ಬರುತ್ತದೆಂಬುದನ್ನು ತಾವುಗಳು ಮರೆಯಬಾರದು. ಇದನ್ನು ತಪ್ಪಿಸಲು ಕೂಡಲೆ ತಾಲ್ಲೂಕ್ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟಗಳಲ್ಲಿ ಡೆವಲಪ್‌ಮೆಂಟ್ ಕಮಿಟಿಗಳನ್ನು ಮಾಡಿ ಅವಗಳಿಗೆ ಅಭಿವೃದ್ಧಿಕೆಲಸಗಳನ್ನು ಮಾಡುವುದಕ್ಕೆ ಅಧಿಕಾರ ಕೊಡುವುದು ಅತ್ಯಗತ್ಯ ಎಂದು ಹೇಳುತ್ತೇನೆ. ಹಣಕಾಸಿನ ವಿಚಾರದಲ್ಲಿ ಆ ಸಮಿತಿಗಳಿಗೆ ಹೆಚ್ಚಿನ ಅಧಿಕಾರವಿರಬೇಕಾದ್ದು ಅಗತ್ಯ. ಇದರಂತೆ ರಾಜ್ಯದಲ್ಲಿ ಆರ್ಥಿಕ ವಿಕೇಂದ್ರೀಕರಣವಾಗಬೇಕಾದ್ದೂ ಕೂಡ ಬಹಳ ಅಗತ್ಯ. ಅಂದರೆ ಈ ದಿವಸ 1500 ಕೋಟಿ ರೂಪಾಯಿಗಳ ಉತ್ಪನ್ನ ಆದಾಯ ತೆರಿಗೆಯಿಂದ ಬರುತ್ತಿದ್ದರೆ ಅದರಲ್ಲಿ ನಮ್ಮ ರಾಜ್ಯಸರ್ಕಾರಕ್ಕೆ 300 ಕೋಟಿ ಬಂದು ಇನ್ನುಳಿದ 1200 ಕೋಟಿ ಕೇಂದ್ರಕ್ಕೆ ಹೊಗುತ್ತದೆ. ಇದಾಗಬಾರದು. ನಮ್ಮ ರಾಜ್ಯಕ್ಕೆ 1200 ಕೋಟಿ ಬಂದು ಕೇಂದ್ರಕ್ಕೆ 300 ಕೋಟಿ ಹೋಗುವಂತೆ ವಿಕೇಂದ್ರೀಕರಣ ಆಗಬೇಕು ಎಂದು ಹೇಳುತ್ತಿದ್ದೇನೆ. ಈ ದಿವಸ ನಮ್ಮ ರಾಜ್ಯದಲ್ಲಿ ಕೇಂದ್ರಕ್ಕೆ ಅಷ್ಟು ಆದಾಯ ಹೋಗುತ್ತಿದ್ದರೂ ನಾವು ಅವರಲ್ಲಿ ಹೋಗಿ 75 ಕೋಟಿ ರೂಪಾಯಿಗಳಿಗೂ ಬೇಡಬೇಕಾಗುತ್ತದೆ ಅನೇಕ ಸಂದರ್ಭಗಳು ನಮಗೆ ಕಂಡು ಬಂದಿವೆ.

ನಮ್ಮ ಮಲೆನಾಡಿನ ವಿಚಾರದಲ್ಲಿ ಸರ್ಕಾರದವರು ವಿಶೇಷವಾದ ನಿರ್ಲಕ್ಷ್ಯ ಮನೋಭಾವ ತಾಳಿದ್ದಾರೆ. ಒಂದಲ್ಲ ಎರಡಲ್ಲಾ ಪ್ರತಿಯೊಂದು ವಿಷಯದಲ್ಲೂ ನಿರ್ಲಕ್ಷ್ಯ ಮನೋಭಾವ ತಾಳಿದ್ದಾರೆ. ಮಲೆನಾಡಿಗೆ ಸಂಬಂಧಪಟ್ಟಂತೆ ಶಿವಮೊಗ್ಗಾದಲ್ಲಿ ಒಂದು ಫೋರ್ಸ್ಟ್ರಿಗಾಜುಯೇಟ್ ಕೋರ್ಸನ್ನು ಓಳಗೊಂಡಂಥ ಒಂದು ವಿಶ್ವವಿದ್ಯಾನಿಲಯವನ್ನು ಆರ್ಟ್ಸ್ ಅಂಡ್ ಸೈನ್ಸಿಗೆ ಸಂಬಂಧ ಪಟ್ಟಂತೆ ಓದಗಿಸಿಕೊಡಬೇಕೆಂದು ಕೇಳಿಕೊಂಡರೆ ಅದಕ್ಕೆ ಇವರು ಹಣವಿಲ್ಲ ಎನ್ನುತ್ತಿದ್ದಾರೆ. ಅದರೆ ಮಲೆನಾಡಿಗೆ ಹಾಗೆ ಹೇಳಿದರೆ ಆ ಧಾರವಡದಲ್ಲಿ ಮತ್ತೊಂದು ಅಗ್ರಿಕಲ್ಚರಲ್ ಯೂನಿವರ್ಸಿಟಿಯನ್ನು ತೆರೆಯುವುದಕ್ಕೆ, ಮತ್ತು ಹುಬ್ಬಳ್ಳಿಯಲ್ಲಿ ಮತ್ತೊಂದು ಸೈನ್ಸ್ ಕಾಲೇಜನ್ನು ತೆರೆಯುವುದಕ್ಕೆ ಮತ್ತು ದಾಂಡೆಲೆಯಲ್ಲಿ ಒಂದು ಫಾರೆಸ್ಟ್ ಕಾಲೇಜನ್ನು ತೆರೆಯುವುದಕ್ಕೆ ಬೆಳಗಾಂನಲ್ಲಿ ಒಂದು ಅನಿಮಲ್ ಪಶ್ಚೆಂಡ್ರಿ ಕಾಲೇಜನ್ನು ತೆರೆಯುವುದಕ್ಕೆ ದುಡ್ಡು ಎಲ್ಲಿಂದಬಂತು ? ಶಿವಮೊಗ್ಗಾಕ್ಕಾದರೆ ಹಣವಿಲ್ಲವೋ ? ಸರ್ಕಾರದವರು ಹೀಗೆ ಕಂಡಹಾಗೆ ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಇಡತಕ್ಕ ನೀತಿಯನ್ನು ಆಚರಿಸಬಾರದು. ಮಲೆನಾಡಿನ ಬಗ್ಗೆ ಇದೇ ನೀತಿ ಮುಂದುವರಿಯುವುದಾದರೆ ನಾನು ಆ ತೆಲಂಗಣಾ ವಿಚಾರವನ್ನು ಇಲ್ಲಿಯೂ ಕೂಡ ನೆನೆಸಿಕೊಳ್ಳುವಂತೆ ಮಾಡಬೇಕಾಗುತ್ತದೆ ಎಂಬುದನ್ನು ಸರ್ಕಾರಕ್ಕೆ ಎಚ್ಚರಿಸುತ್ತೇನೆ. ಜನರಲ್ಲಿ ಆ ರೀತಿಯ ಮನೋಭಾವನೆ ಇಲ್ಲಿಯ ಜನರಲ್ಲಿ ಮೂಡಿದರೆ ಆದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ ನಾವು ಆ ಮಟ್ಟಕ್ಕೆ ಇದನ್ನು ಬಿಡುವುದಿಲ್ಲ, ದೇಶವನ್ನು ಎರಡು ಮಾಡುವುದಕ್ಕೂ ನಾವು ಅವಕಾಶ ಕೊಡುವುದಿಲ್ಲ.

ಇನ್ನು ವೈದ್ಯ ಇರಾಖೆಯ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ನಮ್ಮ ಮಲೆನಾಡಿಗೆ ಅತ್ಯಗತ್ಯವಾಗಿ ಒಂದು ಸರ್ಜಿಕಲ್ ವಾರ್ಡ್ ಬೇಕಾಗಿದೆ. ಸರ್ಕಾರದವರು ಇದನ್ನು ಕೂಡಲೆ ಒದಗಿಸಿಕೊಡುತ್ತಾರೆಂದು ನಂಬಿದ್ದೇನೆ.

ಇನ್ನು ನಾನು ಅಗ್ರಿಕಲ್ಚರಲ್ ಯೂನಿವರ್ಸಿಟಿಯ ಬಗ್ಗೆ ಒಂದೆರೆಡು ಮಾತುಗಳನ್ನಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಅಲ್ಲಿ ಯಾರೋ ಒಬ್ಬರು ಮದ್ರಾಸಿನವರು ಅಲ್ಲಿ ಡೀನ್‌ಷಿಪ್‌ನೋ ಆಗಿದ್ದಾರೆ. ಅವರು ಅಲ್ಲಿನ ಎಲ್ಲಾ ಹುದ್ದೆಗಳಿಗೂ ಹೊರಗಡೆಯವರನ್ನೇ ತಂದು ತುಂಬುತ್ತಿದ್ದಾರೆ. ನಮ್ಮಲ್ಲಿ ಎಷ್ಟೊ ಕ್ವಾಲಿಫೈಡ್ ಪರ್ಸನ್ಸ್ ಇದ್ದರೂ ಇವರಿಗೆ ಅವಕಾಶ ಕೊಡದೆ ಹೊರಡೆಯವರಿಗೆ ಉತ್ತೇಜನ ಕೊಡುತ್ತಿದ್ದಾರೆ. ಇದ್ದಾಗದರೂ ಅಂಥ ಅನ್ಯಾಯಗಳು ಆಗುವುದಕ್ಕೆ ಅವಕಾಶ ಇಲ್ಲದಂತೆ ಸರ್ಕಾರದವರು ಎಚ್ಚರಿಕೆಯನ್ನು ವಹಿಸಬೇಕೆಂದು ಹೇಳುತ್ತಾ ಇತ್ತೀಚೆಗೆ ಅಡಳಿತಕ್ಕೆ ಬಂದ ನಮ್ಮ ಕಾಂಗ್ರೆಸ್ ಕಕ್ಷದವರು ಇಲ್ಲಿ ಹೊಸದಾಗಿ ಇವರು ಅಡಳಿತಕ್ಕೆ ಬಂದ ಮೇಲೆ ಸಾಧಿಸಿರುವಕ್ಕೆ ವಿಚಾರದಲ್ಲಿ ನಾನೇ ಸ್ವಂತವಾಗಿ ಒಂದು ಸಣ್ಣ ಕವನವನ್ನು ಬರೆದಿದ್ದೇನೆ ಅದನ್ನು ಹೇಳಿ ನನ್ನ ಮಾತು ಗಳನ್ನು ಮುಗಿಸುತ್ತೇನೆ:—

ನಿಮ್ಮದು,

ಭಾಷಣ, ಘೋಷಣೆಗಳ ವಿಭೀಷಣ ಪಂಥ.
ಗಾಳಿ ಬೀಸಿ, ಜೋಲ ಹೊಡೆದು, ಝಗ್ಗನೊಪೆದ ನತ್ಯ.
ಹಸುಕರುವನು ಹಸಿತಿನ್ನುವ ಹಸಿರುಕ್ರಾಂತಿ ವೀರರೆ,
ಜೋಡೆತ್ತಿನ ಜಾಡಿನಲ್ಲೆ ಜಿಗಿದಾಡುವ ವೀರರೇ.
ಹೊಸದೇನಿದೆ ಕೋರಿರಿ ಪಾಯು ಪುತ್ರರೆ,
ಹಸಿದ ಹೊಟ್ಟೆ, ಮಾಚ್ಚಲಲ್ಲಿ ಬಟ್ಟೆ, ಡುಡಿಪೆ ಇಲ್ಲ ಮತ್ತೇ.
ನಿರುದ್ಯೋಗ, ಬಡತನ, ಅನಕ್ಷರತೆ,
ಇವೇ, ಪೂರುವರ, ನಿಮ್ಮ ಅಧಿಕಾರದ ಫಲ.

†ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಅಧ್ಯಕ್ಷರೆ, ಈ ಸದನದಮುಂದೆ ಮಂಡಿಸಿರುವ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನರ್ಪಿಸುವ ನಿರ್ಣಯಕ್ಕೆ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತಾ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಪ್ರಥಮವಾಗಿ ನಮ್ಮ ದೇಶದಲ್ಲಿ ಒದಗಿರುವ ಕ್ಷಾಮದ ಗಂಡಾಂತರವನ್ನು ನಮ್ಮ ಸರಕಾರ ಯಾವ ರೀತಿ ಎದುರಿಸುತ್ತಿದೆ ಜನತೆಗುಂಟಾಗಿರುವ ಕಷ್ಟವನ್ನು ಹೋಗಲಾಡಿಸಿ ಕ್ಷಾಮದ ದವಡೆಯಿಂದ ಅವರನ್ನು ಪಾರುಮಾಡಲು ಏನು ಪ್ರಯತ್ನ ಮಾಡಿದೆ ಎಂಬುದನ್ನು ತಿಳಿಸಿದ್ದಾರೆ. ಎಲ್ಲವನ್ನೂ ಕೂಡ ದಕ್ಷತೆಯಿಂದ ಪ್ರಾಮಾಣಿಕತೆಯಿಂದ ನಮ್ಮ ಸರಕಾರ ನಡೆಸಿಕೊಂಡು ಬರುತ್ತಿದೆ. ಆ ರೀತಿ ನಡೆಸಿಕೊಂಡು ಬರುತ್ತಿದ್ದರೂ ಕೂಡ ಟೀಕೆ ಮಾಡುತ್ತಿದ್ದಾರೆ. ಬಹಳ ಉಚ್ಚ ಮಟ್ಟದಲ್ಲಿರುವ ಈ ತೊಂದರೆಯನ್ನು ಒಮ್ಮೆಲೇ ನಿವಾರಣೆ ಮಾಡುತ್ತೇವೆಂದು ಹೇಳಲು ಯಾರಿಗೂ ಸಾಧ್ಯವಿಲ್ಲ. ಆದರೂ ಕೂಡ ಬೀದರ್, ಗುಲ್ಬರ್ಗ, ವಿಜಾಪುರ, ಬೆಳಗಾಂ, ರಾಯಚೂರು ಈ 5 ಜಿಲ್ಲೆಗಳಲ್ಲಿರುವ ಕಷ್ಟ ಪರಿಸ್ಥಿತಿ ನಿವಾರಣೆಗೆ ಕೋಟಿಗಟ್ಟಲೆ ಹಣವನ್ನು ಖರ್ಚುಮಾಡಿರುವುದನ್ನು ಮಾನ್ಯ ಸಭೆಯ ಮುಂದೆ ಇಟ್ಟಿದ್ದಾರೆ. ಅಂಕಿಅಂಶಗಳ ಸಹಿತ ತಿಳಿಸಿರುವ ವಿಚಾರವನ್ನು ವಿರೋಧ ಪಕ್ಷದ ನಮ್ಮ ಮಿತ್ರರು ಅಲ್ಲಗೆಳೆಯಲು ಸಾಧ್ಯವಿಲ್ಲ. ಹಿಂದೆಂದೂ ಮಾಡದಿರುವ ಕೆಲಸವನ್ನು ನಮ್ಮ ಸರಕಾರ ಆ ಭಾಗದಲ್ಲಿ ತೆಗೆದುಕೊಂಡಿದೆ. ಉದಾಹರಣೆಗೆ ಕೃಷ್ಣ ಮೇಲ್ದಂಡೆ ಯೋಜನೆಯನ್ನು ಕೈಗೊಂಡು ಜನರಿಗೆ ಅಲ್ಲಿ ಕೆಲಸ ಪಗ್ಗೆರೆಬಿದಗಿಸುತ್ತಿದ್ದಾರೆ. ಹಿಂದಿನ ಸರಕಾರ ಖಾಮುಂ ಪರಿಹಾರ ಕಾರ್ಯ ಕೈಕೊಂಡಿದ್ದರೆ ಈ ದಿವಸ ಕ್ಷಾಮ ಈ 5 ಜಿಲ್ಲೆಗಳಲ್ಲಿ ಬರುತ್ತಿರಲಿಲ್ಲ. ಕೇವಲ ರಸ್ತೆ ಮಾಡಿಸುವುದು, ಕಟ್ಟಿಡ ಕಟ್ಟಿಸುವುದು ಮುಂತಾದುವುಗಳಿಗೆ ಕೋಟ್ಯಾಂತರ ರೂಪಾಯಿ ಖರ್ಚುಮಾಡಿ ಹಿಂದಿನ ಸರಕಾರ ನೀರಾವರಿ ಕಾರ್ಯವನ್ನು ಕಡೆಗಣಿಸಿದ್ದೇ ಇಂದು ಉಗ್ರ ಪರಿಸ್ಥಿತಿ ತಲೆದೋರಿರುವುದಕ್ಕೆ ಮುಖ್ಯ ಕಾರಣ. ಮುಖ್ಯಮಂತ್ರಿಗಳು ಹಾಗೂ ಇತರ ಮಂತ್ರಿಗಳ ತಂಡ ಈಗಾಗಲೇ ಆ ಪ್ರದೇಶಕ್ಕೆ ಹೋಗಿ ಜನರಿಗಿರುವ ತೊಂದರೆಯನ್ನರಿತು ಸಾಕಷ್ಟು ಪ್ರಮಾಣದಲ್ಲಿ ಕೆಲಸಕಾರ್ಯ ಗಳನ್ನು ಕೈಕೊಂಡಿದ್ದಾರೆ. ಇದರಲ್ಲಿ ಮುಚ್ಚು ಮರೆ ಇಲ್ಲ. ಬಚ್ಚು ಮನಸ್ಸಿನಿಂದ ರಾಜ್ಯಪಾಲರು ಇದನ್ನು ತಿಳಿಸಿದ್ದಾರೆ. ಸರಕಾರ ಯಾವ ಕಾರ್ಯಕ್ರಮಗಳನ್ನು ಕೈಕೊಂಡಿದೆ, ಪರಿಸ್ಥಿತಿಯನ್ನು ಎಷ್ಟುಮಟ್ಟಿಗೆ ಎದುರಿಸಿ ಇರುವ ಸಮಸ್ಯೆಯನ್ನು ಬಗೆಹರಿಸರಾಗಿದೆ ಎಂಬುದನ್ನು ತಿಳಿಸಿದ್ದಾರೆ.

(ಶ್ರೀ ಬಿ. ಜೈರಪ್ಪಾಜಿ)

ಇರುವ ಪರಿಸ್ಥಿತಿಯನ್ನರಿತು ಸರಕಾರ ತಡಮಾಡದೆ ಬೇಕಾದ ಕಾರ್ಯಕ್ರಮ ಕೈಕೊಂಡು ಹಣ ಖರ್ಚುಮಾಡಿ ಇರುವ ತೊಂದರೆಯನ್ನು ಸಾಕಷ್ಟು ಕಡಿಮೆ ಮಾಡಿದೆ. ಈಗ ನಮ್ಮ ಜಿಲ್ಲೆಯಲ್ಲಿ ಕೂಡ ಅಭಾವ ಬಹಳ ಭಾಗದಲ್ಲಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ತುಮಕೂರು, ಹಾಸನ, ಚಿತ್ರದುರ್ಗ, ಕೋಲಾರ ಈ ಜಿಲ್ಲೆಗಳಲ್ಲಿ ಕೂಡ ಅನೇಕ ಕಡೆ ಈ ವರ್ಷ ಮಳೆಯಾಗದೆ ಬತ್ತನೆ ಕೂಡ ಕೆಲವು ಕಡೆ ಮಾಡಿಲ್ಲ. ನಾನು ಹೊನ್ನೆ ನನ ಕ್ಷೇತ್ರದಲ್ಲಿ ಐದಾರು ದಿವಸ ತಿರುಗಾಡಿದೆ, ಕುಡಿಯುವುದಕ್ಕೆ ನೀರು ಬಹಳ ಕಡೆ ಇಲ್ಲ. ಆದರೂ ಕೂಡ ಜನರು ಸಹನೆಯಿಂದಿದ್ದಾರೆ. ಸರಕಾರ ಈಗಿನ ಪರಿಸ್ಥಿತಿಯನ್ನೆದುರಿಸಲು ಕಠಿಣವಾಗಿರುವಾಗ ನಾವೂ ಕೂಡ ಜೊತೆಗೆ ಧ್ವನಿಗೂಡಿಸಿ ಮಾತನಾಡುವುದು ಪದೇಪದೇ ಹೇಳುವುದು ಉಚಿತವಲ್ಲ ಎಂದು ನಾವು ಸ್ವಲ್ಪಮಟ್ಟಿಗೆ ಶಾಂತಿಯಿಂದಿದ್ದೇವೆಂದು ಹೇಳಿದರೆ ತಪ್ಪಾಗಲಾರದು. ನಮ್ಮಲ್ಲಿ ಕೂಡ ಜನಕ್ಕೆ ಅನ್ನವಿಲ್ಲದೆ ಕೆಲಸವಿಲ್ಲದೆ ದನಕರುಗಳಿಗೆ ಮೇವಿಲ್ಲದೆ ಕುಡಿಯುವುದಕ್ಕೆ ನೀರಿಲ್ಲದೆ ಹೊರಗೆ ಹೋಗಬೇಕಾದ ಪರಿಸ್ಥಿತಿಯಿದೆ. ನಮ್ಮ ಜಿಲ್ಲೆಯಲ್ಲಿ ಬಹು ಭಾಗ, ಕಣಗರ್‌ನಲ್ಲಿ ಕೆಲವು ಭಾಗ, ತುಮಕೂರು, ಗುಬ್ಬಿ, ಚಿಕ್ಕನಾಯ್ಕನಹಳ್ಳಿ, ತುರುವೇಕೆರೆ, ತಿಪಟೂರು ಮುಂತಾದ ಸ್ಥಳಗಳಲ್ಲಿ ಈ ವರ್ಷ ತೊಂದರೆಯಾಗಿದೆ. ನಮ್ಮಲ್ಲಿರುವ ಪರಿಸ್ಥಿತಿಯನ್ನು ನಾನು ಸರಕಾರಕ್ಕೆ ಅನೇಕ ಸಾರಿ ಹೇಳಿದ್ದೇನೆ. ಸರಕಾರ ವಿಮರ್ಶೆ ಮಾಡಿ ಕೆಲವು ಕಾರ್ಯಗಳನ್ನು ಕೈಕೊಂಡಿದೆ. ನೀರು, ಹುಲ್ಲು, ಕೂಲಿ ಮುಂತಾದ್ದನ್ನು ತುಮಕೂರು ಹಾಸನ, ಕೋಲಾರ ಜಿಲ್ಲೆಗಳಲ್ಲಿ ಒದಗಿಸಬೇಕೆಂದು ಕಳಕಳಿಯಿಂದ ಮನವಿ ಮಾಡುತ್ತೇನೆ, ನಮ್ಮಲ್ಲಿ ಸ್ವಲ್ಪ ಭಾಗದಲ್ಲಿ ಉತ್ತಮ ಪರಿಸ್ಥಿತಿಯಿರಬಹುದು. ಅನೇಕ ಕಡೆ ತೊಂದರೆ ಇದೆ. ಆದನ್ನು ಕಣ್ಣಾರೆ ಕಂಡ ಮಂತ್ರಿಗಳು ಸಹ ಇದ್ದಾರೆ. ದಯವಾಡಿ ಆ ಭಾಗಗಳಲ್ಲಿ ಕಾರ್ಯಕ್ರಮ ಕೈಕೊಂಡು ಜನರಿಗಾಗುತ್ತಿರುವ ತೊಂದರೆ ನಿವಾರಣೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ವಿಚಾರದಲ್ಲಿ ನನ್ನದೊಂದು ಮನವಿ. ಪರಿಹಾರ ಕಾರ್ಯವನ್ನು ಪೂರ್ಣವಾಗಿ ಕೈಕೊಳ್ಳುವುದಾಗಿ ಮುಖ್ಯಮಂತ್ರಿಗಳು ಈಗಾಗಲೇ ಆಶ್ವಾಸನೆ ಕೊಟ್ಟಿದ್ದಾರೆ. ಅದೇನೆಂದರೆ ಹೇಮಾವತಿ ಅಣಕಟ್ಟಿನಿಂದ ತುಮಕೂರು ಜಿಲ್ಲೆಗೆ ಹಾಗೂ ಮಂಡ್ಯ ಜಿಲ್ಲೆಗೆ ಅಂದರೆ ನಾಗಮಂಗಲ ತಾಲ್ಲೂಕಿಗೆ ನೀರನ್ನೊದಗಿಸುತ್ತೇವೆ ಎಂದು ಭರವಸೆ ಕೊಟ್ಟಿದ್ದಾರೆ. ಅದಕ್ಕೆ ಬೇಕಾದ ಕಾರ್ಯಕ್ರಮ ಕೈಕೊಂಡಿದ್ದಾರೆ ಎಂದು ಹೇಳಲು ಹರ್ಷಿಸುತ್ತೇನೆ. ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಯ ಶಾಸನಕರ ಮನವಿಗೆ ಬೆಲೆಕೊಟ್ಟು ನಮ್ಮಲ್ಲಿನ ಪರಿಸ್ಥಿತಿ ಮನಗಂಡು ಖಾಯಂ ನೀರಾವರಿ ಯೋಜನೆ ನಮ್ಮ ಜಿಲ್ಲೆಗೆ ಅನ್ವಯಿಸುವಂತೆ ಮಾಡುವುದಾಗಿ ಭರವಸೆ ಕೊಟ್ಟನಂತರ ಅದಕ್ಕೆ ಸೂಕ್ತ ವ್ಯವಸ್ಥೆ ಮಾಡುತ್ತಿರುವುದು ಸಂತೋಷದ ವಿಷಯ. ಸಿರಾ, ಮಧುಗಿರಿ ಮತ್ತು ಪಾವಗಡ ತಾಲ್ಲೂಕುಗಳಿಗೆ ಕೂಡ ಅನುಕೂಲವಾಗುವಂತೆ ಅಪ್ಪರ್ ಭದ್ರ ಅಣಕಟ್ಟಿನಿಂದ ನೀರನ್ನೊದಗಿಸಲು ವ್ಯವಸ್ಥೆ ಮಾಡಬೇಕೆಂದು ನಿವೇದಿಸಿಕೊಳ್ಳುತ್ತೇನೆ. ನಮ್ಮದೂ ಕೂಡ ಬರಗಾಲಕ್ಕೆ ತುತ್ತಾಗಿರುವ ಪ್ರದೇಶ. ವರ್ಷೇ ವರ್ಷ ರಸ್ತೆ ಮಾಡುವುದು, ಕಟ್ಟೆಗಳಿಗೆ ಮಣ್ಣು ಹಾಕುವುದು ಮುಂತಾದ್ದು ಖಾಯಂ ಪರಿಹಾರವಾಗುವುದಿಲ್ಲ. ಆದುದರಿಂದ ಹೇಮಾವತಿ ಅಣಕಟ್ಟಿನ ಕಾರ್ಯವನ್ನು ಬಾಗ್ರತೆ ಮುಗಿಸಿ ನಮ್ಮ ಜಿಲ್ಲೆಗೆ ಅನುಕೂಲ ಕಲ್ಪಿಸಬೇಕೆಂದು ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ಕಾರ್ಯ ಮಾಡಿದರೆ ನಮ್ಮ ಪ್ರಾಂತದಲ್ಲಿ ವರ್ಷೇ ವರ್ಷ ಬರುವ ಅಭಾವ ಪರಿಸ್ಥಿತಿ ಕಡಿಮೆಯಾಗಬಹುದು, ಖಾಯಂ ಪರಿಹಾರ ದೊರಯುವುದು. ಆದುದರಿಂದ ಹೇಮಾವತಿ ಕಾರ್ಯ ಚುರುಕಾಗಿ ಆಗಬೇಕು. ಕಾಲುವೆ ಕೆಲಸ ಪ್ರಾರಂಭಿಸಬೇಕು ಎಂದು ವಿನಂತಿಮಾಡಿಕೊಳ್ಳುತ್ತೇನೆ.

ಹಾಗೆ ಅಪ್ಪರ್ ಭದ್ರಾ ನೀರು ಕೂಡ ನಮ್ಮ ಜಿಲ್ಲೆಗೆ ಬರುವ ರೀತಿ ತಾವು ವ್ಯವಸ್ಥೆ ಮಾಡಿಕೊಡಬೇಕು, ತನ್ಮೂಲಕ ನಮ್ಮ ಜಿಲ್ಲೆಗೆ ಖಾಯಂ ಪರಿಹಾರ ಮಾಡಿಕೊಡಬೇಕು ಎಂದು ನಾನು ವಿನಂತಿಮಾಡಿಕೊಳ್ಳುತ್ತೇನೆ. ಇನ್ನು ನಮ್ಮ ಒಂದು ಬಹು ಮುಖ್ಯವಾದಂಥ ಸಾಧನೆ ಏನೆಂದರೆ, ದೇಶದಲ್ಲಿ ಜವಾನು, ಮನೆ ಇಲ್ಲದೆ ಭೂರತಕ್ಕ ರೈತ ಕಾರ್ಮಿಕ ಬಂಧುಗಳಿಗೆ ನಿವೇಶನಗಳನ್ನು ಹಂಚತಕ್ಕ ವಿಚಾರ. ಹಿಂದೆ ನೀವು ಮಾಡ್ತಡದೆ ಇದ್ದಂಥ ಮಾಡುವುದಕ್ಕೆ ಸಾಧ್ಯವಾಗದೆ ಇದ್ದಂಥ ಕಾರ್ಯವನ್ನು ನಮ್ಮ ಸರ್ಕಾರ ಸಾಧನೆಮಾಡಿದೆ ಎಂದರೆ ಅತಿಶಯೋಕ್ತಿಯಾಗಲಾರದು.

3-30 P. M.

[MR. DEPUTY SPEAKER in the Chair]

ಶ್ರೀ ಕೋಣಂದೂರು ಲಿಂಗಪ್ಪ.—ಭೂಹೀನರಿಗೆ ಭೂಮಿಯನ್ನು ಕೊಡುತ್ತಿದ್ದಾರೆಯೇ ?

ಶ್ರೀ ಬಿ. ಬೈರಪ್ಪಾಜಿ.—ಅದನ್ನು ಕೊಡುತ್ತಿದ್ದಾರೆ, ಇದರ ಬಗ್ಗೆ ತೀವ್ರವಾಗಿ ಕೆಲಸ ನಡೆಯುತ್ತಾ ಇದೆ. ಈ ಒಂದು ಕಾರ್ಯ ಬಹಳ ಯಶಸ್ವಿಯಾಗಿ ನಡೆದಿದೆ ಎಂದು ಹೇಳುವುದಕ್ಕೆ ನಾನಾದರೂ ಇಷ್ಟಪಡುತ್ತೇನೆ. ಎರಡು ಲಕ್ಷ ಜನಕ್ಕೆ ನಿವೇಶನಗಳನ್ನು ನಮ್ಮ ಸರ್ಕಾರ ಹಂಚಿದೆ ಎಂದು ಹೇಳಿದರೆ, ಅದು ಕಡಿಮೆ ಪ್ರಮಾಣದ್ದು ಅಲ್ಲ ಎಂದು ತಿಳಿದುಕೊಳ್ಳಬೇಕು. ಈ ಕಾರ್ಯ ಕೇವಲ ಕೆಲವೇ ತಿಂಗಳುಗಳಲ್ಲಿ ನಡೆದಿದೆ ಎಂದು ನಾವು ಯೋಚನೆ ಮಾಡಬೇಕು, ಹಿಂದೆಂದೂ ಕೂಡ ಅದು ನಡೆಯುವುದಕ್ಕೆ ಸಾಧ್ಯವಾಗಿರಲಿಲ್ಲ. ಈ ಒಂದು ಮಹಾತ್ಕಾರ್ಯವನ್ನು ನಡೆಸಿರತಕ್ಕ ನಮ್ಮ ಸರ್ಕಾರ ಮನೆಗಳನ್ನು ಕಟ್ಟಿಸಿಕೊಡುವಂಥ ಒಂದು ಯೋಜನೆಯನ್ನು ಮುಂದೆ ನಮ್ಮ ಸರ್ಕಾರ ಸಿದ್ಧಪಡಿಸುತ್ತಾ ಇದೆ. ಅದಕ್ಕೆ ಈಗಾಗಲೇ, ಕಾರ್ಯ ಆರಂಭವಾಗಿದೆ. 20 ಸಾವಿರ ಮನೆಗಳನ್ನು ಕಟ್ಟಿಸಿಕೊಡಬೇಕು ಎಂದು ಒಂದು ಮಹತ್ತರವಾದ ಕಾರ್ಯವನ್ನು ಮಾಡುವುದಕ್ಕೆ ಹೊರಟಿರುವ ನಮ್ಮ ಸರ್ಕಾರಕ್ಕೆ ತಾವು ಕೂಡ ಒಳ್ಳೆಯ ಮಾತನ್ನು ಆಡಿದ್ದರೆ ಚೆನ್ನಾಗಿತ್ತು ಎಂದು ನಾನಾದರೂ ಕೂಡ ಮಾನ್ಯ ಸ್ನೇಹಿತರಲ್ಲಿ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಈ ಸರ್ಕಾರದಿಂದ ಒಳ್ಳೆಯ ಕೆಲಸ ನಡೆದಿದೆ, ಉತ್ತಮ ಕಾರ್ಯ ನಡೆದಿದೆ, ಎಂದು ಒಳ್ಳೆಯ ಮಾತುಗಳು ಬರಬೇಕು ಎಂದು ಹೇಳುತ್ತಿದ್ದೇನೆ.

ಇನ್ನು ವ್ಯವಸಾಯದಲ್ಲಿ ನಮ್ಮ ಸರ್ಕಾರ ಮಹತ್ತರವಾದ ಸಾಧನೆಯನ್ನು ಮಾಡಿದೆ. ಹೆಚ್ಚು ಇಳುವರಿ ಕೊಡತಕ್ಕ ಅನೇಕ ತಳಿಯ ಬತ್ತಗಳನ್ನು ನಮ್ಮಲ್ಲಿ ಪ್ರಯೋಗ ಮಾಡಿ ಬೆಳೆದುದ್ದನ್ನು ನಾವು ಕಾಣುತ್ತಿದ್ದೇವೆ. ಹಾಗೆಯೇ ರಾಗಿಯಲ್ಲಿ ಉತ್ತಮ ಬೆಳೆಯನ್ನು ನಾವು ಕಾಣುತ್ತಿದ್ದೇವೆ. ನಾನು ಮೊನ್ನೆ ಗುಜರಾತ್ ಪ್ರಾಂತ್ಯಕ್ಕೆ ಹೋದಾಗ ಅಲ್ಲಿಯಾ ಕೂಡ ಶೇಕಡ 60 ಭಾಗ ಕ್ಷಾಮ ಇದೆಯೆಂದು ಹೇಳಿದರು. ಅಲ್ಲಿ ಎಲ್ಲೆಲ್ಲಿ ನೋಡಿದರೂ ಹಸಿರು ಕಾಣುತ್ತಿಲ್ಲ. ಸುಮಾರು 300—400 ಕಡೆ ನೀರನ್ನು ಎತ್ತಿ ವ್ಯವಸಾಯ ಮಾಡತಕ್ಕ ವ್ಯವಸ್ಥೆ ಅಲ್ಲಿದೆ. ಬೋರ್‌ವೆಲ್‌ಗಳನ್ನು ಕೊಳವೆ ಬಾವಿಗಳನ್ನು ನಮ್ಮ ಸರ್ಕಾರದವರು ಎಲ್ಲೆಲ್ಲಿ ನೀರು ಬರುವುದಕ್ಕೆ ಸಾಧ್ಯವಿದೆ ಅಲ್ಲಲ್ಲಿ ಹೋಬಳಿ, ಪ್ರತಿ ತಾಲ್ಲೂಕಿನಲ್ಲಿಯೂ ಅಥವಾ ಪ್ರತಿ ಎರಡು ಜಿಲ್ಲೆಗೂ ಒಂದು ರಿಗ್ ಅನ್ನು ಒದಗಿಸಿಕೊಟ್ಟು ತನ್ಮೂಲಕ ರೈತರಿಗೆ ಅನುಕೂಲ ಮಾಡಿಕೊಡಬೇಕು; ಎಂದು ನಾನು ಮಾನ್ಯಮಂತ್ರಿಗಳಿಗೆ ಪ್ರಾರ್ಥನೆ ಮಾಡುತ್ತೇನೆ. ಇದು ಬಹಳ ಮುಖ್ಯವಾದಂಥ ವಿಚಾರ, ರೈತರ ಆರ್ಥಿಕ ತೊಂದರೆಯಿಂದಾಗಿ ಬಾವಿಗಳನ್ನು ತೆಗೆಯಲು ಬಹಳ ಕಷ್ಟ ಇದೆ. ಈ ಒಂದು ದೃಷ್ಟಿಯಿಂದ ರಿಗ್‌ಗಳನ್ನು ಹೆಚ್ಚು ಸಂಖ್ಯೆಯಲ್ಲಿ ಒದಗಿಸಿ ಕೊಡಬೇಕು. ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ 4—5 ರಿಗ್‌ಗಳನ್ನು ಒದಗಿಸಬೇಕು ಈ ರಿಗ್‌ಗಳು ಒಂದೊಂದು ದಿವಸದಲ್ಲಿ ಒಂದೊಂದು ಬಾವಿಯನ್ನು ತೆಗೆಯುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಇಂಥ ಯಂತ್ರಗಳನ್ನು ಪ್ರತಿ ತಾಲ್ಲೂಕಿಗೂ ಒಂದೊಂದನ್ನು ಒದಗಿಸಿ ಬಾವಿಗಳನ್ನು ತೋಡಿಸಿ, ರೈತರ ಸ್ಥಿತಿಯನ್ನು ಉತ್ತಮ ಪಡಿಸಬೇಕು. ಇದರಿಂದ ಸರ್ಕಾರದವರು ಅವರಿಗೆ ಕೊಟ್ಟಿರತಕ್ಕ ಸಾಲವನ್ನು ಸುಲಭ ಕಂತುಗಳಲ್ಲಿ ವಾಪಸ್ಸು ಪಡೆಯುವುದಕ್ಕೆ ಅವಕಾಶವಾಗುತ್ತದೆ. ರೈತರ ಆರ್ಥಿಕ ಸ್ಥಿತಿ ಉತ್ತಮವಾಗುವುದಾದರೆ, ಅವರು ಸಾಲವನ್ನು ವಾಪಸ್ ಕೊಡುವುದಕ್ಕೆ ಹಿಂಜರಿಯುವುದಿಲ್ಲ. ಆದ್ದರಿಂದ ರಿಗ್‌ಗಳನ್ನು ಹೆಚ್ಚಿನ ವೇಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಒದಗಿಸಿ ರೈತ ಜನಕ್ಕೆ ಅನುಕೂಲ ಮಾಡಬೇಕು ಎಂದು ಸರ್ಕಾರಕ್ಕೆ ಸೂಚನೆ ಕೊಡುತ್ತೇನೆ.

ಸಣ್ಣ ನೀರಾವರಿಯ ಬಗ್ಗೆ ಸಾಕಷ್ಟು ಕೆಲಸಗಳು ನಡೆದಿವೆ ಆದರೂ ಕೂಡ ಇನ್ನು ಹೆಚ್ಚಿನ ಪ್ರಮಾಣದಲ್ಲಿ ಸಣ್ಣ ನೀರಾವರಿಯ ಕೆಲಸಗಳು ನಡೆಯಬೇಕಾಗಿದೆ. ಈ ವರ್ಷ ಸಣ್ಣ ನೀರಾವರಿಗೆ ಒದಗಿಸಿರತಕ್ಕ ಹಣ ಏನೇನೂ ಸಾಲದು ಎಂದು ನಾನಾದರೂ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸುಮಾರು 30 ಕೋಟಿ ರೂಪಾಯಿಗಳ ಕೆಲಸಗಳನ್ನು ತೆಗೆದುಕೊಂಡಿರತಕ್ಕ ಸಂದರ್ಭದಲ್ಲಿ ಈ ಸಣ್ಣ ನೀರಾವರಿ ಕೆಲಸಗಳಿಗೆ 3—4 ಕೋಟಿ ರೂಪಾಯಿಗಳನ್ನು ಒದಗಿಸಿರತಕ್ಕದ್ದು ಅತ್ಯಲ್ಪ ಕಡಿಮೆ. ಆದ್ದರಿಂದ ಎಲ್ಲೆಲ್ಲಿ ಕೆರೆಗಳನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತದೆ, ಅಂಥ ಕಡೆ ರೈತರಿಗೆ ತಕ್ಷಣ ಆದಾಯ ಸಿಕ್ಕತಕ್ಕಂಥ, ಅನುಕೂಲವಾಗತಕ್ಕಂಥ ಕಾರ್ಯಕ್ರಮಗಳನ್ನು ತೀವ್ರವಾಗಿ ಜಾರಿಗೆ ಕೊಡಬೇಕು ಎಂದು ನಾನಾದರೂ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅನೇಕ ಕಡೆಗಳಲ್ಲಿ ಕೆರೆಗಳು ಆಗತಕ್ಕ ಸ್ಥಳಗಳಿವೆ, ಅದನ್ನು ಪರಿಶೀಲನೆ ಮಾಡಿ ಪ್ರತಿಯೊಂದು ತಾಲ್ಲೂಕಿನಲ್ಲಿ ಹೊಸದಾಗಿ ಒಂದು ಡಿವಿಷನ್ ಅನ್ನು ಓಪನ್ ಮಾಡಿ ತೀವ್ರವಾಗಿ ಅಂದಾಜುಗಳನ್ನು ತಯಾರು ಮಾಡುವ ಕೆಲಸ ನಡೆಯಬೇಕು. ತಕ್ಷಣ ಈ ಕೆಲಸಗಳಿಗೆ ಮಂಜೂರಾತಿ ಪಡೆಯುವಂತೆ ವ್ಯವಸ್ಥೆ ಮಾಡಬೇಕು ಎಂದು ಮಾನ್ಯ ಕಾಮಗಾರಿ ಮಂತ್ರಿಗಳನ್ನು ವಿನಂತಿಸಿಕೊಳ್ಳುತ್ತೇನೆ.

ವಿದ್ಯುಚ್ಛಕ್ತಿಯ ಬಗ್ಗೆ ಈಗ ಬಿಗಿಯಾದ ಕ್ರಮ ಏನೂ ಇದೆ ಅದು ಸಡಿಲವಾಗಬೇಕು. ಅದರಲ್ಲೂ ಕೂಡ ಜನಗಳಿಗೆ ನೀರಾವರಿ ಉಪಯೋಗವಾಗುವಂಥ ಸಂದರ್ಭಗಳಲ್ಲಿ ಹೆಚ್ಚಿನ ರಿಯಾಯಿತಿಯನ್ನು ರೈತರಿಗೆ ತೋರಿಸಿರತಕ್ಕ ಏರ್ಪಾಡನ್ನು ಮಾಡಬೇಕು ಎಂದು ಸರ್ಕಾರಕ್ಕೆ ವಿನಂತಿಮಾಡಿಕೊಳ್ಳುತ್ತೇನೆ.

(ಶ್ರೀ ಬಿ. ಬೈರಪ್ಪಾಜಿ)

ತ್ತೇನೆ. ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಹೇಳಿದ ಹಾಗೆ ಯಾವ ಸರ್ಕಾರ ಬಂದರೂ ಕೂಡ ನಿರುದ್ಯೋಗ ಸಮಸ್ಯೆಯನ್ನು ಕಡಿಮೆ ಮಾಡತಕ್ಕಂಥಾದ್ದು ಬಹಳ ಕಷ್ಟ. ಪ್ರತಿವರ್ಷವೂ ಕೂಡ ಲಕ್ಷಾಂತರ ಜನ ವಿದ್ಯಾವಂತರಾಗತಕ್ಕ ರಾಜ್ಯದಲ್ಲಿ ಪ್ರತಿಯೊಬ್ಬರಿಗೂ ಕೂಡ ಕೆಲಸ ಕೊಡುತ್ತೇವೆ ಎಂದು ಆಶ್ವಾಸನೆಯನ್ನು ಯಾವ ಸರ್ಕಾರ ಕೂಡ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಕೋಣಂದೂರು ಲಿಂಗಪ್ಪನವರು ಸರ್ಕಾರ ಬಂದರೂ ಕೂಡ ಅವರೂ ಸಹ ಅಸಮರ್ಥರಾಗುತ್ತಾರೆ ಎಂದು ಹೇಳಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ನಿರುದ್ಯೋಗ ಪರಿಹಾರಕ್ಕೆ ಅಭಿವೃದ್ಧಿ ಯೋಜನೆಗಳು ಇವೆ.

ಶ್ರೀ ಬಿ. ಬೈರಪ್ಪಾಜಿ.—ಕಚ್ಚಾ ಮಾಲುಗಳು ಎಲ್ಲೆಲ್ಲಿ ಸಿಕ್ಕುತ್ತವೆಯೋ ಅಂಥ ಕಡೆ ಖಾಸಗೀಯವರಾಗಲೀ, ಅಥವಾ ಸರ್ಕಾರವೇ ಆಗಲೀ ಕೆಲವು ಕೈಗಾರಿಕೆಗಳನ್ನು ಪ್ರತಿಯೊಂದು ತಾಲ್ಲೂಕಿನಲ್ಲಿಯಾ ಕೂಡ ನಿರ್ವಾಹ ಮಾಡತಕ್ಕದ್ದು ಪ್ರಾರಂಭ ಮಾಡತಕ್ಕದ್ದು ಉಚಿತ ಎಂದು ನಾನಾದರೂ ಕೂಡ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ಕೆಲಸ ತೀವ್ರವಾಗಿ ಆಗಬೇಕು, ಇದರಿಂದ ನಿರುದ್ಯೋಗ ಸಮಸ್ಯೆ ಸ್ವಲ್ಪಮಟ್ಟಿಗಾದರೂ ಕೂಡ ಬಗೆಹರಿಯುವುದಕ್ಕೆ ಸಾಧ್ಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸಮಾಜ ಕಲ್ಯಾಣ ಇಲಾಖೆಯಲ್ಲಿ ಸಾಕಷ್ಟು ಕೆಲಸಗಳು ಆಗುತ್ತಾ ಇದ್ದರೂ ಕೂಡ ಅದರಲ್ಲಿ ಸ್ವಲ್ಪ ಬದಲಾವಣೆ ಕೂಡ ಆಗಬೇಕಾಗಿದೆ. ನಿರೀಕ್ಷಿಸಿದ ಒಂದು ರೀತಿಯಲ್ಲಿ ಸಮಾಜವಾದದ ಯೋಜನೆಗಳು ಕಾರ್ಯಗತವಾಗುತ್ತಾ ಇಲ್ಲ. ಅದರಲ್ಲಿ ಸ್ವಲ್ಪ ಮಟ್ಟಿಗೆ ದೋಷ ಇದೆಯೆಂದು ಹೇಳಿದರೆ ತಪ್ಪಾಗಲಾರದು. ಎಲ್ಲಿ ಲೋಪದೋಷಗಳು ಇವೆ, ಎಲ್ಲಿ ಹಣ ಸರಿಯಾದ ರೀತಿಯಲ್ಲಿ ಖರ್ಚಾಗುತ್ತಾ ಇಲ್ಲ, ಅಂಥ ಸಂದರ್ಭದಲ್ಲಿ ಹಿಂದು ಮುಂದು ನೋಡದೆ ಕಠಿಣವಾದಂಥ ಒಂದು ರೀತಿಯಲ್ಲಿ ಕ್ರಮ ತೆಗೆದುಕೊಂಡು ಸುವ್ಯವಸ್ಥಿತವಾಗಿ ಕೆಲಸ ನಡೆಯುವುದಕ್ಕೆ ವ್ಯವಸ್ಥೆ ಮಾಡಬೇಕಾದುದು ಅವರ ಕರ್ತವ್ಯ ಎಂದು ನಾನಾದರೂ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ವಿದ್ಯಾಭ್ಯಾಸದ ಬಗ್ಗೆ, ವಿದ್ಯಾ ಇಲಾಖೆಯು ಬಹಳ ಉತ್ತಮ ಸ್ಥಿತಿಯಲ್ಲಿ ನಡೆಯುತ್ತಿದೆ ಎಂದು ಹೇಳುವುದಕ್ಕೆ ಪ್ರಯತ್ನ ಪಡುತ್ತೇನೆ. ಒಂದೇ ವರ್ಷದಲ್ಲಿ ಸುಮಾರು 240 ಜೂನಿಯರ್ ಕಾಲೇಜುಗಳನ್ನು ಪ್ರಾರಂಭ ಮಾಡಿರುವಂಥಾದ್ದು ನೋಡಿದರೆ ಯಾವ ಸರ್ಕಾರವೂ ಕೂಡ ಈ ರೀತಿ ಮಾಡುವುದಕ್ಕೆ ಸಾಧ್ಯವಾಗಿರಲಿಲ್ಲ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

240 ಜೂನಿಯರ್ ಕಾಲೇಜುಗಳನ್ನು ಪ್ರಾರಂಭ ಮಾಡಿದ್ದಾರೆ ಎಂದರೆ ಇವೊತ್ತಿನ ದಿನ ಎಷ್ಟು ಕೋಟಿ ರೂಪಾಯಿಯಾಯಿತು ? ಉದಾಹರಣೆಗೆ ಹಿಂದೆ ಎಂದಾದರೂ ಈ ರೀತಿ ಮಾಡಿದ್ದರೆ ? ಯೋಚನೆ ಮಾಡದೆ ಟೀಕಿಸಬೇಕೆಂದು ಟೀಕಿಸುವುದು ಸರಿಯಲ್ಲ. ಆ ಭಾಗದಲ್ಲಿ ಕೆಲಸ ನಡೆದಿದ್ದರೆ ಉತ್ತಮ ಕೆಲಸ ನಡೆದಿದೆ ಎಂದು ಹೇಳಿದರೆ ಅದರಲ್ಲಿ ತಪ್ಪು ಏನಾಗುತ್ತದೆ ಎಂದು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

Sri. KAGODU THIMAPPA.—This will only create more unemployment ?

ಶ್ರೀ ಬಿ. ಬೈರಪ್ಪಾಜಿ.—ತಿಮ್ಮಪ್ಪನವರು ಕಾಲೇಜು ಬೇಡ ಎಂದು ಹೇಳಿದರೆ ಬಿಟ್ಟು ಬಿಡೋಣ.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ರಾಷ್ಟ್ರದಲ್ಲಿ ಇರತಕ್ಕ ಎಲ್ಲಾ ಕಾಲೇಜುಗಳನ್ನು, ಶಾಲೆಗಳನ್ನು, ವಿಶ್ವವಿದ್ಯಾನಿಲಯವನ್ನು 10 ವರ್ಷಗಳು ನಿಲ್ಲಿಸಬೇಕಾಗುತ್ತದೆ. ಹಾಗೆ ಮಾಡುವುದಾದರೆ ನಾವು ವಿಚಾರ ಮಾಡೋಣ. ನಿರುದ್ಯೋಗ ಸಮಸ್ಯೆ ಹೋಗುತ್ತದೆ. ನೀವು ಈ ಸಲಹೆಯನ್ನು ಪರಿಶೀಲನೆ ಮಾಡಬಹುದು.

ಶ್ರೀ ಬಿ. ಬೈರಪ್ಪಾಜಿ.—ಈ ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಬಹಳ ಉತ್ತಮವಾದ ಕಾರ್ಯ ನಡೆಯುತ್ತಿದೆ ಎಂದು ಹೇಳುತ್ತಾ ಈ ಪ್ರಾಥಮಿಕ ಶಿಕ್ಷಣ ಏನು ಇದೆ ಇದರ ಬಗ್ಗೆ ಇನ್ನು ಸ್ವಲ್ಪ ಕಠಿಣವಾದ ಕಾಯಿದೆಯನ್ನು ಜಾರಿಗೆ ತರಬೇಕು. ಕೆಲವುಕಡೆ ಪೂರ್ಣ ರೀತಿಯಲ್ಲಿ ಕಾಯಿದೆ ಏನೋ ಇದೆ, ಆದರೆ ಕಡ್ಡಾಯ ಶಿಕ್ಷಣ ಪದ್ಧತಿ ಜಾರಿಗೆ ಬಂದಿಲ್ಲ, ಬರುವುದಕ್ಕೆ ಅನೇಕ ಅಡ್ಡಿ ಆತಂಕಗಳು ಇವೆ. ಕಾಯಿದೆ ಪ್ರಕಾರ ಜುಲ್ಮಾನೆ ಹಾಕುವುದಕ್ಕೆ ಅವಕಾಶವಿದೆ, ಜುಲ್ಮಾನೆ ಹಾಕಿದರೆ ತಂದೆ

ತಾಯಿಗಳು ಹೋಗಿ ಗರ್ಭಾಚೆ ಮಾಡುತ್ತಾರೆ, ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ಕೊಡುವ ಸಂದರ್ಭದಲ್ಲಿ ಕಟ್ಟುನಿಟ್ಟಾಗಿ ಕಾಯಿದೆಯನ್ನು ಪಾಲಿಸಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸೆಕೆಂಡರಿ ವಿದ್ಯಾಭ್ಯಾಸದಲ್ಲಿ ಕೂಡ ಸಾಕಷ್ಟು ಪ್ರಗತಿಯಾಗಿದೆ. ಕಳೆದ ವರ್ಷ 45 ಹೈಸ್ಕೂಲುಗಳನ್ನು ಪ್ರಾರಂಭ ಮಾಡಿದ್ದಾರೆ. ನನ್ನ ಮಟ್ಟಿಗೆ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ಹೈಸ್ಕೂಲುಗಳು ಕೆಲವುಕಡೆ ಮಾತ್ರ ಬೇಕಾಗುತ್ತವೆ. ಹೆಚ್ಚಿನ ಸಂಖ್ಯೆಯಲ್ಲಿ ಹೈಸ್ಕೂಲುಗಳ ಅವಶ್ಯಕತೆಯಿಲ್ಲ. ಎಲ್ಲೆಲ್ಲಿ ಪ್ರಾರಂಭ ಮಾಡಬೇಕೆಂಬ ಎಲ್ಲಾ ಕಡೆ ಪ್ರಾರಂಭಮಾಡಿದೆ ಎಂದು ನನಗಾದರೂ ಅನ್ನಿಸುತ್ತದೆ. ಇದೇ ರೀತಿಯಲ್ಲಿ ಎಲ್ಲಾ ಕಡೆ ಇದೆಯೆಂದು ನನ್ನ ಭಾವನೆ. ಸಾಕಷ್ಟು ಮಟ್ಟಿಗೆ ಈ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಮಾನ್ಯ ಮಂತ್ರಿಗಳು ಕೂಡ ಬಹಳ ಉತ್ಸಾಹದಿಂದ ಮತ್ತು ದಕ್ಷತೆಯಿಂದ ಒಂದು ಕಾರ್ಯವನ್ನು ನಡೆಸಿದ್ದಾರೆ. 240 ಶಾಲೆಗಳಿಗೆ ಲೆಕ್ಚರರ್ಸ್ ಒದಗಿಸುವ ವಿಚಾರದಲ್ಲಿ ಬಹಳ ಜರೂರಾಗಿ ಅತಿ ಶೀಘ್ರವಾಗಿ ಕೆಲಸಗಳನ್ನು ಕೈಕೊಂಡರು, ಇಲ್ಲದೆ ಹೋಗಿದ್ದರೆ ಅನೇಕ ಕಡೆ ಕಾಲೇಜುಗಳನ್ನು ಮುಚ್ಚಬೇಕಾಗಿ ಬರುತ್ತಿತ್ತು. ಇವೆಲ್ಲವನ್ನು ಕೂಡ ದಕ್ಷತೆಯಿಂದ ನೆರವೇರಿಸಿದ ವಿದ್ಯಾ ಖಾತೆ ಮಂತ್ರಿಗಳನ್ನು ಅಭಿನಂದಿಸಬೇಕಾಗಿದೆ. ಈ ಒಂದು ಖಾತೆಯಲ್ಲಿ ಯಶಸ್ವಿಯಾಗಿ ಕೆಲಸ ನಡೆಯುತ್ತಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ರಾಜ್ಯದ ಆರ್ಥಿಕ ಸ್ಥಿತಿ ಅಷ್ಟಾಗಿ ಉತ್ತಮವಾಗಿಲ್ಲ, ಹಿಂದೆ ಇದ್ದಂಥ ಸರ್ಕಾರಗಳ ದುಂದು ವೆಚ್ಚದ ಮೂಲಕ ಆಗಿರುವ ಕಾರ್ಯಗಳು ಹಾಗೂ ಕೇವಲ 11 ತಿಂಗಳಲ್ಲಿ ಸಾಧನೆ ಮಾಡಿರತಕ್ಕ ನಮ್ಮ ಸರ್ಕಾರದ ವತಿಯಿಂದ ಆಗಿರುವ ಕಾರ್ಯಗಳು ಇವುಗಳನ್ನು ನಾವು ವಿಶ್ಲೇಷಿಸ್ದೇ ಆದರೆ ಬಹಳ ಬದಲಾವಣೆ ಕಂಡುಬರುತ್ತದೆ. ಹಿಂದಿನ ಸರ್ಕಾರಗಳು ಮುಂಚೆ ಹೇಳಿದ ಹಾಗೆ ಕೇವಲ ಅಡಂಬರ ಕಾರ್ಯಮಾಡಿ ಜನತೆಗೆ ಶಾಶ್ವತವಾಗಿ ಉಪಯೋಗವಾಗುವ ಕಾರ್ಯಗಳನ್ನು ಮಾಡಿಲ್ಲ. ಆ ಒಂದು ಕಾರ್ಯದ ಫಲವಾಗಿ ಕ್ಷಾಮ ಡಾಮರಗಳು ಹೆಚ್ಚಿರುವುದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಷ್ಟು ಹೇಳಿ ಹೆಚ್ಚಿನ ಒಂದು ಜವಾಬ್ದಾರಿಯನ್ನು ಹೊರಿಸಿದ್ದೇವೆ. ಅವರ ಜವಾಬ್ದಾರಿ ಅರಿತು ದಕ್ಷತೆಯಿಂದ' ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿದ್ದಾರೆ. ನಾವೆಲ್ಲರೂ ಕೂಡ ಸರ್ಕಾರಕ್ಕೆ ಒಮ್ಮತದಿಂದ ನಮ್ಮ ಒಂದು ಬೆಂಬಲವನ್ನು ಕೊಟ್ಟು ದೇಶದಲ್ಲಿ ಆಗಬೇಕಾದಂತಹ ಕೆಲಸ ಕಾರ್ಯಗಳನ್ನು ಮಾಡುವುದರಲ್ಲಿ ನಾವೆಲ್ಲರೂ ಕೂಡ ಸಹಕರಿಸಿದರೆ ನಮ್ಮ ದೇಶದ ಪ್ರಗತಿ ಉತ್ತಮವಾಗುತ್ತದೆ ಎಂದು ಭಾವಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

† Sri C. M. ARUMUGHAM (K.G.F.).—Mr. Deputy Speaker Sir, the address of the Governor has become a sort of repetition year by year. In fact, when he had addressed the House on 24th March 1972, he had said under the 'Head' Agriculture:

"A target of Rs. 43 crores has been fixed for short and medium term agricultural credit through Co-operative Institutions. In addition. it is expected that the commercial banks will also afford credit to farmers in a larger measure during the next year..." The same thing has been repeated by the Governor in his address delivered to this House on 15th February 1973. I quote the passage for the information of this House.

"...The target fixed for short term and midterm loans is Rs. 43 crores and that for long term loan is nearly Rs.16 crores. These targets are expected to be achieved during the current year. In addition, the Cemmercial Banks will also offord credit to farmers in larger measures during the next year."

I might say that the Government has not given enough attention to place the facts before this House in regard to their programmes and policies that they wish to pursue during the current year. Last time while speaking on the Governor's Address, I had said that the big post such as those of Governors was not in conformity with the pattern or

(SRI C. M. ARUMUGAM)

the desire of the public to have a sociasist society. In fact, last year also, we had criticised about certain officers of their functioning. Immediately thereafter, their posts have been upgraded and they have been made as Commissioners and Secretaries to Govrnment. These people in course of time will become very big men- These officers will work one hour a day. We are maintaining these super human beings with palatial buildings with half a dozen cars and two dozen servants, in addition to big gardens. In the industries, a labourer is expected to work for 8 hours a day whereas these big officers will not work even for one hour a day. When the Sourthern Maharatta Railways was there, an officer whose salary was Rs, 30,000 p.m. was working for one hour a day. Today also we find similar officers who are working one hour a day. Though he works less, he is maintained at the cost of the public. The posts which were created by the Britishers should be abolished. Even after 25 years of democracy, though they talk of socialism, secularism and democracy, the rich people are growing richer and the poor are vanishing. Their poverty is such that there is no need for them to close their doors during nights. on the contrary, there are some people who are constructing buildings after buildings spending lakhs of rupees. There are some people who are owning thousands of acres of land. For instance in Belgaum, a landlord owns lands to the extent of 20,000 acres spread over in there Talukas.

In Raichaur a land-lord owns 7,000 acres. No Government can touch such land-lords. This is the position to-day. Inspite of all these things, Sri Gundu Rao's Party, i.e., Congress 'R' proclaim that it is for the poor. To-day in the garb of the Congress 'R' very big land-lords have come to power even they have no desire to alluviate the poorer sections of the society. Sir, to-day we see that more than 4 Districts of our State have been affected by failure of monsoons as a result of this there is no water in the wells. They have not grown any crops. I do at a certain extent agree that the Government have takencertain measures in this regard. But it is not sufficient. The officials machinery has not changed its outlook and they are implementhing the policies and programmes of Government. They have not adjusted themselves to the conditions prevailing with the result they are not implementing the directions of the Government. What the Government proposes to do for these Districts is only a temporary measure and not a permanent measure. This is not sufficient to eradicate the drought conditions permanently. You will see that in Gulbaraga there are persons holding less than 5acres and their number is about 54,000. Persons holding 10 acres of iand is about 49,000. There are about 50% of the land-holders in Gulbarga District who are persons who own less than 5 to 10 acres. The total holding is about 2,14,000. This means even if you complete the Upper Krishna, it only helps these land-holders. But there are landless persons in lakhs and lakhs. Therefore I suggest that they can start a Cement Factory at Chitapura as a permanent measure in Gulbarga District.

To start a Cemant Factory it repuires about Rs. 4 crores. The Government is going to spend as per its statement Rs. 150 crores. By spending about Rs. 4 to 5 crores they can start a Cement Factory which will accommodate more than one thousand workers immediately. It is also necessary that this Government can expore the possiblity of finding and starting the gold fields in Shorapur Taluk. Gold deposits are ther but they have not made adequate investigation or exploration t find out gold fields and manufacture gold in this region. This is a s e essive Government and I condemn the previous Government also e ause they have not given any thought to investigate the copper field so at Thinthani in Gulbarga District which is on the northern ban of Krishna River. It is only about 29 KMs from Racihur and 77 Kms from Yadgir. If you spend Rs. 1 crore you can get the deposits of copper and employ 1000 people and ultimately it would help us to employ about 5,000 people.

There are Ministers who were working as politicians at the Taluka level. I do not now whether they know their job well. They have not attempted to bring to the notice of the Government that there are such projects for the benefit of the people. It seems they do not read even files. Their Personal Assistants will have to show the places in the files where they put their signatures. They will always be busy otherwise and absolutely they have no time to look into these facts. They will be busy in consultations in getting into power and busy in constructing houses and in securing sites. They will always be busy in delivering lectures. Therefore at Thinthini if copper deposits ore exploited it provides employment for one thousand people immediately and for five thousand people at a later date. In the beginning as I said earlier you will have to spend about one crore of rupees and ultimately it requires 5 crores, There are Shahabad stone slabs. These slabs can be used for flooring. Those slabs find market in Bombay. They can be diverted to Bangalore for Government building. You can engage some people here for polishing these stones and breaking jelly and grading the same. This may be taken as one of the relief measures. This democratic Government is asking the old persons who have no experience to do this job. You can employ these persons even though they have no experience in this line. They will get training and do the job.

So far as Bijapur is concerned there is lime stone quarry in Talikot area. This is a raw material required for the manufacture of cement. You can construct Gement Factory in that area. In Bijapur District, the entire population is depending upon agriculture. There is no industy. If this Factry is started it will certainly help thousands of people to to get the employment and we can get the cement without any difficulty required for several projcets taken up. Kalinadi Preject is taken up. Upper Krishna is under construction. It would go a long way if you tart a Cement Factory in this area because it could easily supply cement to these projects. It can also supply cement to the State of Maharastra, South Sathara and Koyna projects.

(SRI C. M. ARUMUGAM)

This cement factory will cost only five crores of rupees. When you want to spend about 150 crores of rupees, on projects like the Upper Krishna, Government can as well think of sarting that cement factory, in Bijapur, which will be a permanent measure.

4-00 P.M.

Sir, so far as Bidar is concerned, except for a small project, the people of Bidar depend much on ground water. This Ground Water Cell attached to the Directer of Geology and Mines is not fully developed. No Minister has given any thought to develop it so that the ground water in Bidar could be properly investigated and water could be given to the people of Bidar for cultivation.

Sir, if they take up a few measures I have suggested, it will not only help immediately the people who are affected by failure of rains to get empolyment but it will also be a permanent relief measure.

When these people are suffering so much, it is expected by every body that Government should aviod wasteful expenditure. When our brothers in those areas are without water for drinking and are not able to get proper food, we have seen people spending lavishly for marriage parties, for tea parties, for felicition and other parties. In fact, when these Minsters toured these drought affected areas, I was told that in one place in a house *ie.*, the house of an M.L.A's son, food was prepared for a Minister and more than 1000 people attended the dinner party. I was told, Mr. Deputy Speaker, that there were so many itemes in that party.

MR. DEPUTY SPEAKER.—Mere hearsay will not serve the purpose. If the Member wants to make out a case, he may give instances with place and date, so that it can be attended to.

SRI C. M. ARUMUGHAM.—Sir, when a Minister went to a place for a meeting, he had taken three officers with him. He has spent 30,000 rupees.

MR. DEPUTY SPEAKER.—Who is the Minister and on what date and at what place was it held ?

SRI C. M. ARUMUGHAM.—Sri K. H. Patil, Minister for Agriculture and Forests attended the meeting, along with three officers. The expenditure is about 30,000 rupees. He could have avoided this expenditure.

SRI H. N. NANJE GOWDA.—He may not have attended a meeting costing 30,000 rupees. No Minister will attend a meeting which costs 30,000 rupees. You might have included the expenditure incurred in functions like opening ceremony etc. also.

Sri C. M. ARUMUGHAM.—You get all those particulars from him—whether he attended the meeting and so on.

Sri H. N. NANJE GOWDA.—That means the hon. Member has no information as to whether he has attended the meeting and all that.

Sri C. M. ARUMUGHAM.—I will give him everything in writing. Some Minister wanted to construct a co-operative Mill under the Co-operative Movement and he wanted to level that ground. And, for levelling that ground he has asked the Agro-Industries Corporation. At an expenditure of 25,000 rupees they did it. And then Sir, this Minister has not paid the amount. He may say he is not connected with it. He may say: 'It is a Co-operative Society'.

Mr. DEPUTY SPEAKER.—Please give the name of the Minister and the Mill.

Sri C. M. ARUMUGHAM.—Sir, instead of paying that amount he has asked for the transfer of the Managing Director. Sir, for appointing Committees and Commissions and Corporations for the defeated candidates and for disappointed persons, Government is spending, without sufficient and adequate reasons, a lot of amount. It is wasteful expenditure.

When the Government have got a very beautiful Guest House at Kemmangundi, they are constructing another very big Guest House. It is also a very wasteful expenditure. There is absolutely no need at this juncture to construct a Guest House at Kemmanagundi, when the people of that area are leaving their houses and coming to Bangalore. Stop such committed work until the situation improves; it is not immediately necessary. There is a Palace given by the Maharaja as Guest House.

Sir, creating more posts in order to help some one who is connected directly or indirectly with a Minister also becomes wasteful expenditure. For instance, in the Forest Department, they have the Chief Conservator Forests and there is no need to create another post. One man can look after the entire thing.

Mr. DEPUTY SPEAKER.—Even prior to this Government coming in there were two Chief Conservators of Forestes. Now, it may have been more.

Sri C. M. ARUMUGHAM.—Now, Mr. Deputy Speaker, they have also appointed Police Officers to look after Watch and Ward duties. You cannot ask Police Officers to work as Watch and Ward or Security Force. There is always difference between security force and Police force. All this is unnecessary expenditure.

Sir, every year, in order to help some contractor they are doing a lot of work. Works like colour washing, white washing, colour painting and enamel painting are being taken up in Vidhana Soudha. I am surprised to see that they are painting Vidhana Soudha. They are also painting kerb stones on the road sides with white enamel and

(SRI C. M. ARUMUGAM)

black enamel. This expenditure can be avoided in the interests of the State. And one other item of wasteful expenditure Mr. Deputy Speaker is Ministers' T A and D A which in some cases amount to Rs. 44,000 per month.

SRI S. M. SHEERANALY CHANDRASEKHAR.—Sir, the Hon'ble Member was giving some details about waste and all that. If Mr. Armugam could tell me whether it is not waste to wear a suit? Instead we can wear only a dhoti and have simple dress. I am not wearing costly clothing like Mr. Armugham.

SRI C. M. ARUMUGHAM.—Mr. Chandrasekhar is a man of socialist views and he should appreciate what is the extent of waste Instead he tries to compare individuals with Government. The individual spends from his own income whereas the State spends money from the Exchequer which is public money! Incurring expenditure from the State excheqher is very different from spending from his own income! I think Mr. Chandrasekhar would apprcciate this.

MR. DEPUTY SPEAKER.—I would have even appreciated if the hon. member had not yielded to him.

SRI C. M. ARUMUGHAM.—I thought he would throw some light on the discussion taht was going on. But he has behaved so shabbily. What respect I had all this time, I should now reconsider.

SRI S. M. SHEERANALY CHANDRASEKHAR.—He has used the word 'shabbily', is it correct Sir?

MR. DEPUTY SPEAKER.—In a democracy we must adjust like this only. If we give, we must be prepared to take you had a rub at him and he had a rub at you. In a democracy, you must be prepared to accept some thing if you give some thing.

SRI C. M. ARUMUGHAM.—A contractor from Udipi; Mangalore, had to pay Rs. 10 lakhs for the year 1968. But for reasons best known to them, they have waived this amount. Why? When we need money for development works, why should this amount be waived? That is the question I am putting and they are answerable to this House.

When lots of people are without food, food distribution in the State is very bad. The functioning of the Department is not satisfactory. Maida is being supplied for bread. They give maida to such an extent that very one in Bangalore should have 1 KG or 1 lb. of bread. I can tell you how this food distribution is made in Bangalore for instance. You have got one firm NILGIRI DAIRY FARM. They gets supply per month of 1500 quintals of maida, whereas for the whole district of Kolar, they supply only 1000 tons; for a population of 1,50,000 in KGF, they give only 200 quintals. There is quality bread in Bangalore. They supply to them 1500

quintals of maida. Mangharam Buscuit Factory in Bangalore get a supply of 4000 quintals of Maida and they say there are 500 fair price shops. They are not functioning properly. They want within a fortnight to make these big firms, big multi-millioners. For instance, there is scarcity for sugar. Yo see statistics, year by year, the production is on the increase. But artificial scarcity has been created by the Department itself. There is scarcity for power, scarcity for cement and steel. So, what I fear is the Departmental officers sit within the four walls of the office and they never move out to know what is happening outside. Therefore, it is necessary that this department must be re-organised, streamlined and proper officers posted. Of course, you will say IAS officers are there. It is not enough if an officer has merely passed the IAS examination; but he must have adequate experience of men and matters is he has to discharge his duties properly. Simply because, he becomes an IAS officer, you want to post him to the department, even there he has no experience of the working of that department, particularly the department of food and agriculture.

Sir, I was mentioning the Road Transport Corporation. I must say, now we have got more contract carriages than the MSRTC buses. Here, I want to point out how this Road Transport Corporation works and I will give one or two instances, where without calling for tenders, this Corporation has purchased 200 chasis from the CPC company of Mangalore. There are hundreds of chasis in Bangalore. There are chassis of *forgo* and *ford* and bodies are being build-some at Bombay and some at Hyderabad. And I have said there are more contract carriages now. In the last 10 months, you see the number of contract carriages are on the increase. The other day the Chief Minister stated it is quasi-judicial body. But instructions have been given by the Minister concerned.

Mr DEPUTY SPEAKER.—That refers to the RTA which is a quasi-judicial body.

Sri C. M. ARUMUGHAM.—Yes, I am sorry, it is RTA. In spite of MSRTC buses going empty, they are giving licences and permits for contract carriages. Government had not moved in the direction of nationalising these contract carriages. They say there is difficulty about the law as it is framed now. Then why should you nationalise these routes ? Sir, if you travel to Kolar from Bangalore, every half-an-hour, you will see a contract carriage Bus plying on the road. Not only in this route, but all over the State, in all routes. Licences or permits are issued in Bijapur and these contract carriages are plying from Chintamani to Bangalore. As a result of this, the MSRTC is losing lakhs and lakhs of rupees every month. Government should think over these matters as to how best they can plug loop-holes in the Road Transport Corporation and how to regulate the issue of permits and licences for Contract Carriages, which has been issued without reason or rhyme for private persons.

†ಶ್ರೀ ಬಿ. ಇ. ರಾಮಯ್ಯ (ಸಿರಗುಪ್ಪ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ರಾಜ್ಯಪಾಲರು ರಾಜ್ಯದ ವಿಧಾನಮಂಡಲದಲ್ಲಿ ಮಾಡಿದ ಭಾಷಣವನ್ನು ನಾನು ಅನುಮೋದಿಸುತ್ತಾ ಕೆಲವು ಸೂಚನೆಗಳನ್ನು ಕೊಡಬೇಕೆಂದಿದ್ದೇನೆ. ಈಗ ನಾಲ್ಕು ದಿವಸಗಳಿಂದ ಈ ಸಭೆಯಲ್ಲಿ ಚರ್ಚೆ ನಡೆದಿರುವುದನ್ನು ನೋಡಿದರೆ ಅಶ್ಚರ್ಯವೂ ಆಗುತ್ತದೆ. ವ್ಯಸನವೂ ಆಗುತ್ತದೆ. ಏತಕ್ಕೆಂದರೆ ಈ ಅಭಾವ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಹಿಂದೆ ಎಂದೂ ಆಗಿದ್ದು ಇಲ್ಲ. ಈಗಿನ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಈಗ ಗುಲ್ಬರ್ಗ, ಬೀದರ್ ಮತ್ತು ರಾಯಚೂರು, ಬಿಜಾಪುರ, ಬೆಳಗಾವಿಯ ಕೆಲವು ಭಾಗಗಳಲ್ಲಿ ಹಾಗೂ ಬಳ್ಳಾರಿ ಜಿಲ್ಲೆಯಲ್ಲಿ ಹಿಂಗಾರು ಮತ್ತು ಮುಂಗಾರು ಮಳೆ ಬಾರದೆ ಬೆಳೆಯಾಗಿಲ್ಲ. ಅಲ್ಲ ಸರ್ಕಾರದವರು ಪರಿಹಾರ ಕಾಮಗಾರಿಗಳನ್ನು ಕೈಗೊಂಡು ಅಲ್ಲಿ ಕೆಲಸ ಕೊಡತಕ್ಕದ್ದು ಸರ್ಕಾರದ ಕರ್ತವ್ಯವಿದೆ. ಎಂದು ವಿರೋಧಪಕ್ಷದ ನಾಯಕರು ಕ್ರಿಯಾತ್ಮಕವಾದ ಸಲಹೆಗಳನ್ನು ಕೊಡದೆ ಅವರು ಸರ್ಕಾರವನ್ನು ಟೀಕೆ ಮಾಡಿದ್ದಾರೆ. ಸರ್ಕಾರದ ಆಡಳಿತದಲ್ಲಿ ಕೆಲಸದಲ್ಲಿ ಏನಾದರೂ ನ್ಯೂನತೆ ಇದ್ದರೆ ಅದನ್ನು ಸರ್ಕಾರದ ಗಮನಕ್ಕೆ ತಂದು ಅದನ್ನು ಸರಿಪಡಿಸತಕ್ಕದ್ದು ಎಲ್ಲರ ಕರ್ತವ್ಯ. ಅವರು ಹಾಗೆ ಮಾಡದೆ ಬರೀ ಟೀಕೆಗಳನ್ನು ಮಾಡಿದ್ದು ನೋಡಿದರೆ ನನಗೆ ನಿಜವಾಗಿಯೂ ವ್ಯಸನವಾಗುತ್ತದೆ. ಸೋಮವಾರದ ದಿವಸ ವಿರೋಧ ಪಕ್ಷದವರು ಗುಲ್ಬರ್ಗಾದಿಂದ 800 ಜನ ವಲಸೆ ಬಂದಿದ್ದಾರೆ ಎಂದು ಹೇಳಿದರು. ಆಗ ನಮ್ಮ ದಕ್ಷರಾದ ಪಬ್ಲಿಕ್ ವರ್ಕ್ಸ್ ಶಾಖೆಯ ಮಂತ್ರಿಗಳು ವಿರೋಧ ಪಕ್ಷದವರು ಹೇಳಿದಂತೆ ಆ 800 ಜನಗಳಿಗೂ ಕೆಲಸವನ್ನು ಒದಗಿಸುವ ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಹೇಳಿ ಅದರ ಜೊತೆಗೆ 10 ಸಾವಿರ ಜನಗಳು ಬಂದರೂ ಅವರಿಗೆ ಕಾಳಿನದಿ ಪ್ರಾಜೆಕ್ಟ್‌ನಲ್ಲಿ ಕೆಲಸವನ್ನು ಒದಗಿಸಿಕೊಡುತ್ತೇವೆ ಎಂದು ಅವರು ಘಂಟಾಘೋಷವಾಗಿ ಹೇಳಿದರು. ಅವರನ್ನು ಕರೆದುಕೊಂಡು ಹೋಗುವುದಕ್ಕೆ 6 ಸ್ಪೆಷಲ್ ಬಸ್ಸುಗಳನ್ನು ಏರ್ಪಾಡು ಮಾಡಿದರೂ ಕೂಡ ಸಾಕಷ್ಟು ಜನಗಳು ಕಾಳಿನದಿ ಪ್ರಾಜೆಕ್ಟ್‌ಗೆ ಕೆಲಸಕ್ಕೆ ಹೋಗಲು ಬರಲಿಲ್ಲ. ಈ ರೀತಿ ಅವರು ಮಾಡಿದ್ದನ್ನು ನೋಡಿದರೆ ನನಗೆ ಬಹಳ ವ್ಯಸನವಾಗುತ್ತದೆ. ವಿರೋಧ ಪಕ್ಷದವರು ಸರ್ಕಾರಕ್ಕೆ ಸಹಕಾರ ಕೊಟ್ಟರೆ ಈಗ ಅಭಾವ ಪೀಡಿತ ಪ್ರದೇಶದಲ್ಲಿ ಉಂಟಾಗಿರತಕ್ಕ ಗಂಭೀರ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಅನುಕೂಲವಾಗುತ್ತದೆ ಮತ್ತು ಸರ್ಕಾರದವರು ಕೆಲಸವನ್ನು ಸುಸೂತ್ರವಾಗಿ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ.—400 ಜನಗಳು ಕಾಳಿನದಿ ಪ್ರಾಜೆಕ್ಟ್ ನಿರ್ಮಾಣ ಪ್ರದೇಶಕ್ಕೆ ಈವಾಗಲೇ ಹೋಗಿದ್ದಾರೆ.

ಶ್ರೀ ಬಿ. ಇ. ರಾಮಯ್ಯ.—ನಾನು ನಿಜವಾಗಿಯೂ ಶ್ರೀಮಾನ್ ಆರ್ಮುಗಂ ಅವರನ್ನು ಅಭಿನಂದಿಸುತ್ತೇನೆ. ಏತಕ್ಕೆಂದರೆ ಶ್ರೀಮಾನ್ ಚನ್ನಬಸಪ್ಪನವರು ಬಹಳ ದಕ್ಷ ಮಂತ್ರಿಗಳು ಎಂದು ಹೇಳಿದರು. ಅವರು ಮಾಡಿದ ಕೆಲಸವನ್ನು ಶ್ರೀಮಾನ್ ಆರ್ಮುಗಂ ಅವರು ಮೆಚ್ಚಿಕೊಂಡಿದ್ದಾರೆ. ನಮ್ಮ ಸರ್ಕಾರದವರು ಕೂಡ ಅಂಥಾ ಒಂದು ಗಂಭೀರವಾದ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ, ಸಾಲ್ವ್ ಮಾಡುವುದಕ್ಕೆ ಏನೇನು ಕ್ರಮಗಳನ್ನು ತಗೆದುಕೊಂಡಿದ್ದಾರೆ ಎನ್ನುವ ಬಗ್ಗೆ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ನಮ್ಮ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಈ ಅಭಾವ ಪೀಡಿತ ಪ್ರದೇಶದ ಜನತೆಗೆ ಕೆಲಸವನ್ನು ಒದಗಿಸಿ ಅವರಿಗೆ ಪರಿಹಾರವನ್ನು ಒದಗಿಸಬೇಕೆಂದು ಮನವಿ ಮಾಡಿಕೊಂಡಿದ್ದರ ಮೇಲೆ ಕೇಂದ್ರ ಸರ್ಕಾರದವರು ಅಭಾವ ಪೀಡಿತ ಪ್ರದೇಶಗಳ ಜನತೆಗೆ ಪರಿಹಾರ ಕಾಮಗಾರಿಗಳನ್ನು ಒದಗಿಸಿ ಅವರಿಗೆ ಕೆಲಸವನ್ನು ಒದಗಿಸಿ ಕೊಡುವ ಬಗ್ಗೆ 50 ಕೋಟಿ ರೂಪಾಯಿಗಳು ಖರ್ಚಾದರೂ ಚಿಂತೆಯಿಲ್ಲ ಅದನ್ನು ಕೊಡುವುದಕ್ಕೆ ನಾವು ಸಿದ್ಧವಾಗಿದ್ದೇವೆ ಎಂದು ಹೇಳಿದ್ದಾರೆ. ಇದು ಒಪ್ಪತಕ್ಕ ವಿಚಾರ. ವಿರೋಧ ಪಕ್ಷದ ಮಾನ್ಯ ಸದಸ್ಯರೂ ಇದನ್ನು ಮೆಚ್ಚಿಕೊಳ್ಳುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ರೈಲ್ವೆ ನಿರ್ಮಾಣದ ಪ್ರಸ್ತಾಪ ಬಂದಿಲ್ಲ. ಅದಕ್ಕೆ ಕಾರಣವೇನೋ ಗೊತ್ತಿಲ್ಲ.

ಈಗ ಹೊಸ ರೈಲ್ವೇ ಮಂತ್ರಿಯವರು ಬಂದ ಮೇಲೆ ಹೊಸ ಹೊಸ ರೈಲ್ವೆ ಲೈನುಗಳನ್ನು ಪ್ರಾರಂಭವಾಡುತ್ತೆವೆಂದು ಹೇಳುತ್ತಿದ್ದಾರೆ. ನಮ್ಮ ರಾಜ್ಯಸರ್ಕಾರದವರು ಅದಕ್ಕೆ ಗಮನಕೊಟ್ಟು ಎಲ್ಲೆಲ್ಲಿ ರೈಲ್ವೆಯ ಅವಶ್ಯಕತೆ ಇದೆಯೆಂಬುದನ್ನು ನೋಡಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಈಗಾಗಲೇ ಗುಲ್ಬರ್ಗ—ಬಳ್ಳಾರಿ ಲೈನು ಆಗಬೇಕೆಂದು ನಿರ್ಣಯ ಮಾಡಿ ಕಳಿಸಿದ್ದಾರೆ. ಅದನ್ನು ಸಹ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುತ್ತೇವೆಂದು ರಾಜ್ಯಸರ್ಕಾರದವರು ಹೇಳಿದ್ದಾರೆ. ಈ ರೈಲ್ವೆ ಅದರ ಅದರಲ್ಲಿ ಮೂರು ಭಾಗದ

ಜನರಿಗೆ ಅನುಕೂಲವಾಗುತ್ತದೆ. ಅಲ್ಲದೆ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯಾಗುವುದಕ್ಕೂ ಈ ಲೈನು ಸಹಕಾರಿಯಾಗುತ್ತದೆ. ಆಮೇಲೆ ಹುಬ್ಬಳ್ಳಿ—ಕಾರವಾರ ಲೈನು ಸಹ ಅತೀ ಮುಖ್ಯವಾದುದು. ಬಳ್ಳಾರಿಯಿಂದ ಅದಿರನ್ನು ಬಾಂಬೆಗೆ ಮತ್ತು ಗೋವಾಕ್ಕೆ ತೆಗೆದುಕೊಂಡು ಹೋಗಲು ಇದು ಬಹಳ ಸಹಾಯವಾಗುತ್ತದೆ. ಅಲ್ಲದೆ ಇದನ್ನು ನಿರ್ಮಾಣ ಮಾಡಿದರೆ ಇದರಿಂದ ಕೋಟಿ ಗಟ್ಟಲೆ ಹಣವನ್ನು ಸರ್ಕಾರದವರು ಉಳಿಸಬಹುದು. ಆದ್ದರಿಂದ ಕಾರವಾರ—ಹುಬ್ಬಳ್ಳಿ ಬ್ರಾಡ್ ಗೇಜ್ ಆದಷ್ಟು ಜಾಗ್ರತೆ ಮಾಡಬೇಕೆಂದು ಕೇಂದ್ರ ಸರ್ಕಾರದವರನ್ನು ಒತ್ತಾಯಿಸಬೇಕೆಂದು ಕೇಳಿಕೊಳ್ಳುತ್ತೇನೆ. ಆಮೇಲೆ ಹೊಪಪೇಟೆಯಿಂದ ಹುಬ್ಬಳ್ಳಿಗೆ ಮೀಟರ್ ಗೇಜ್ ಲೈನ್ ಇದೆ. ಬಳ್ಳಾರಿಯಿಂದ ಹೊಸಪೇಟೆಗೆ ಬ್ರಾಡ್ ಗೇಜ್ ಆಗಿದೆ. ಆದ್ದರಿಂದ ಹೊಸಪೇಟೆಯಿಂದ ಹುಬ್ಬಳ್ಳಿಗೆ ಇರುವ ಮೀಟರ್‌ಗೇಜನ್ನು ಬ್ರಾಡ್‌ಗೇಜಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಆಮೇಲೆ ನ್ಯಾಷನಲ್ ಹೈವೇಸ್ ಬಹಳ ಕಡಿಮೆ ಇದೆ. ಈಗ 11 ರಾಜ್ಯದ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮಾಡುವುದಕ್ಕೆ ಕೇಂದ್ರಕ್ಕೆ ಶಿಫಾರಸು ಮಾಡಿದ್ದಾರೆಂದು ಹೇಳುತ್ತಿದ್ದಾರೆ. ಇವುಗಳಲ್ಲಿ ಯಾವುದು ಮುಖ್ಯವೆಂಬುದನ್ನು ಆರಿತುಕೊಂಡು ಶಿಫಾರಸು ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ. ಈಗ ಉದಕಮಂಡಲದಿಂದ ಹುಮ್ನಾಬಾದ್ ಮೈಯಾ ಮೈಸೂರು, ಗುಲ್ಬರ್ಗ, ಬೀದರ್, ಬಳ್ಳಾರಿ, ಶಾಹಪುರ್, ಶೋಲಾಪುರ ಇತ್ಯಾದಿ ಮಾರ್ಗಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸಬೇಕೆಂದು ಕೇಂದ್ರದೊಡನೆ ನಮ್ಮ ಸರ್ಕಾರ ಒತ್ತಾಯ ಮಾಡಬೇಕು. ಏಕೆಂದರೆ ಈ ರಸ್ತೆಗಳು ಹಾದು ಹೋಗತಕ್ಕ ಜಿಲ್ಲೆಗಳು ಸುಮಾರು ಎಂಟು. ಆದ್ದರಿಂದ ಇವುಗಳು ಬಹಳ ಮುಖ್ಯವಾದವುಗಳೆಂದು ಹೇಳುತ್ತೇನೆ. ಆಮೇಲೆ ಕಾರವಾರ ಬಂದರನ್ನು ಸಹ ಅಭಿವೃದ್ಧಿಪಡಿಸಬೇಕು. ಈಗ ಕೋಟಿಗಟ್ಟಲೆ ಹಣ ಖರ್ಚು ಮಾಡಿ ಮಂಗಳೂರನ್ನು ದೊಡ್ಡ ಬಂದರನ್ನಾಗಿ ಮಾಡುವುದಕ್ಕೆ ಹೊರಟಿದ್ದಾರೆ. ಆದರೆ ಇನ್ನೂ ಅದು ಪೂರ್ತಿಯಾಗಲಿಲ್ಲ. ಆದರೆ ಕಾರವಾರ ಬಂದರನ್ನು ದೊಡ್ಡ ಬಂದರನ್ನಾಗಿ ಮಾಡಲು ಕೇವಲ ಒಂದು 2½ ಕೋಟಿ ರೂಪಾಯಿ ಇದ್ದಿದ್ದರೆ ಸಾಕಾಗುತ್ತದೆ. ಆದ್ದರಿಂದ 5ನೇ ಯೋಜನೆಯಲ್ಲಿ ಕೇಂದ್ರವನ್ನು ಒತ್ತಾಯಮಾಡಿ, ಕಾರವಾರ ಬಂದರನ್ನು ದೊಡ್ಡ ಬಂದರನ್ನಾಗಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಪಬ್ಲಿಕ್ ಸರ್ವಿಸ್ ಕಮಿಶನ್ ಒಂದು ಸ್ವತಂತ್ರ ಸಂಸ್ಥೆಯಾದುದರಿಂದ ಅದನ್ನು ಯಾರೂ ಕೇಳುವವರಿಲ್ಲವೆಂದು ಮಾನ್ಯ ಅರ್ಮುಗಂರವರು ಹೇಳಿದರು. ಇದು ನಿಜವಾದ ಮಾತು. ಇಪ್ಪೊತ್ತಿನ ದಿವಸ ಇದು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಮತ್ತು ಒಂದೊಂದು ಪೋಸ್ಟಿಗೆ 10–15 ಸಾವಿರ ರೂಪಾಯಿ ತೆಗೆದುಕೊಳ್ಳುತ್ತಿದ್ದಾರೆಂಬ ಮಾತು ಎರಡ್ಮೂ ಕಡೆಗಳಲ್ಲಿ ಕೇಳಿಬರುತ್ತಿದೆ. ಆದ್ದರಿಂದ ಸರ್ಕಾರದವರು ಈ ವಿಚಾರದಲ್ಲಿ ಏನೊಂದು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು ಅದರ ವ್ಯವಸ್ಥೆಯನ್ನು ಪರಿಪಡಿಸಬೇಕೆಂದು ಹೇಳುತ್ತೇನೆ. ಅಂತಹ ಸಂಸ್ಥೆಯು ಗೆಜೆಟೆಡ್ ಹುದ್ದೆಗಳಿಗೆ ಆ ರೀತಿ ಲಂಚ ತೆಗೆದುಕೊಂಡು ಸೆಲೆಕ್ಟ್ ಮಾಡಿದರೆ ಮುಂದೆ ಆ ಅಧಿಕಾರಿ ಯಾವ ರೀತಿ ಕೆಲಸಮಾಡಬಹುದೆಂದು ನಾವು ಯೋಚನೆ ಮಾಡಬಹುದು. ಇದು ಬಹಳ ವ್ಯಸನಪಡತಕ್ಕ ವಿಚಾರ ಮತ್ತು ಇದನ್ನು ಕೂಡಲೇ ಸರಿಪಡಿಸಬೇಕೆಂದು ಹೇಳುತ್ತೇನೆ. ಇವತ್ತು ಪತ್ರಿಕೆಗಳಲ್ಲಿ ಬಂದಂತೆ ಅವರು ಸಿಲೆಕ್ಟ್ ಮಾಡಿದ ಜೂನಿಯರ್ ಇಂಜಿನಿಯರುಗಳ ಆಯ್ಕೆಯನ್ನು ಸರ್ಕಾರ ರಿಜೆಕ್ಟ್ ಮಾಡಿದೆ. ಇದು ಬಹಳ ಒಳ್ಳೆಯ ಕೆಲಸವೆಂದು ನಾನು ಹೇಳುತ್ತೇನೆ. ಇದಕ್ಕೆ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ಅದೇ ರೀತಿ ಅವರು ಎಷ್ಟು ತಪ್ಪು ಮಾಡುತ್ತಾರೆಂದು ನೋಡಿ ನ್ಯಾಯವಾದ ರೀತಿಯಲ್ಲಿ ಮಾಡುವಂತಹ ಏರ್ಪಾಡನ್ನು ಸರ್ಕಾರದವರ ಮಾಡುಬೇಕೆಂದು ಹೇಳುತ್ತೇನೆ.

ಆಮೇಲೆ ತುಂಗಭದ್ರಾ ಬೋರ್ಡು ಎಂದು ಒಂದು ನಮ್ಮಲ್ಲಿ ಇದೆ. ಇದರಲ್ಲಿ ಆಂಧ್ರ ಮತ್ತು ಮೈಸೂರು ರಾಜ್ಯದ ಅಧಿಕಾರಿಗಳು ಸದಸ್ಯರಾಗಿದ್ದಾರೆ. ಮತ್ತು ಕೇಂದ್ರ ಸರ್ಕಾರದ ಅಧಿಕಾರಿಯೊಬ್ಬರು ಚೇರ್‌ಮೇನರಾಗಿದ್ದಾರೆ. ಇವರು ಜನವರಿ 31ನೇ ತಾರೀಕಿನ ದಿವಸ ನಮ್ಮ ರಾಜ್ಯ ಸರ್ಕಾರದವನ್ನು ಕೇಳದೆ 525 ಕ್ಯೂಸೆಕ್ಸ್ ನೀರನ್ನು ಆಂಧ್ರಕ್ಕೆ ಬಿಟ್ಟಿದ್ದಾರೆ. ಅಂದರೆ ಇವರು ಯಾವ ರೀತಿಯಲ್ಲಿ ಮೈಸೂರು ರಾಜ್ಯಕ್ಕೆ ಅನ್ಯಾಯ ಮಾಡುತ್ತಿದ್ದಾರೆ ಎಂಬುದನ್ನು ಯೋಚನೆ ಮಾಡಬಹುದು. ಆದ್ದರಿಂದ ಈ ಟಿ. ಬಿ. ಬೋರ್ಡನ್ನು ಆದಷ್ಟು ಜಾಗ್ರತೆ ಅಬಾಲಿಷ್ ಮಾಡಿ ಅಲ್ಲಿ ನಮ್ಮದೇ ಆದ ಒಂದು ಬೋರ್ಡನ್ನು ಮಾಡಬೇಕು. ಇಲ್ಲದಿದ್ದರೆ ನಮ್ಮ ಮೈಸೂರು ರಾಜ್ಯದ ರೈತರಿಗೆ ಈಗಿರತಕ್ಕಂತಹ ಬೋರ್ಡಿಂದ ಬಹಳ ಅನ್ಯಾಯವಾಗುತ್ತದೆ. ಇದರ ಬಗ್ಗೆ ಸರ್ಕಾರದವರು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

(ಶ್ರೀ ಬಿ. ಇ. ರಾಮಯ್ಯ)

ಆಮೇಲೆ ಪೋಲೀಸ್ ಆಡಳಿತದ ಮಟ್ಟಿಗೆ ಹೇಳುವುದಾದರ ಬಳ್ಳಾರಿ ಜಿಲ್ಲೆಯಲ್ಲಿ ಈ ಪೋಲೀಸ್ ಆಡಳಿತದಿಂದ ಬಹಳ ಅಘಾತವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಅಲ್ಲಿ ಡೇ ಲೈಟಿನಲ್ಲಿ ಮರ್ಡರ್‌ಗಳು ನಡೆಯುತ್ತಿವೆ. ಆದ್ದರಿಂದ ಅಲ್ಲಿ ದಕ್ಷರಾಗಿರುವಂತಹ ಅಧಿಕಾರಿಗಳನ್ನು ಹಾಕಿ ಆಡಳಿತ ವ್ಯವಸ್ಥೆಯನ್ನು ಸರಿಪಡಿಸಬೇಕೆಂದು ಮುಖ್ಯಮಂತ್ರಿಯವರಿಗೆ ಮನವಿ ಮಾಡಿಕೊಳ್ಳುತ್ತೇನೆ.

ಅದೇ ರೀತಿ ನಿನ್ನೆ ಮಾಡಿದಂತಹ ನಮ್ಮ ಮಹಾರಾಷ್ಟ್ರ ಮಿತ್ರರು ಬಾರ್ಡರ್ ಇಷ್ಯು ಇನ್ನೂ ಮುಗಿದಿಲ್ಲವೆಂದು ಗಲಾಟೆ ಮಾಡಿದರು. ಆದರೆ ನಮ್ಮ ರಾಜ್ಯದ ಜನರು ಏನು ಬೇರೆ ರಾಜ್ಯಗಳಲ್ಲಿ ಸೇರಿಕೊಂಡಿದ್ದಾರೆ, ಅವರು ನಮ್ಮ ರಾಜ್ಯಕ್ಕೆ ಸೇರಬೇಕೆಂದು 15 ವರ್ಷಗಳಿಂದ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದರೂ ಸಹ ಸರ್ಕಾರದವರು ಅತ್ತ ಕಡೆ ಲಕ್ಷ ಕೊಡುತ್ತಾ ಇಲ್ಲ. ಉದಾಹರಣೆಗೆ ತಮಿಳ್ನಾಡು—ಮೈಸೂರು ಬಾರ್ಡರ್ ವಿಷಯದಲ್ಲಿ ಸರ್ಕಾರದವರು ಇವತ್ತಿನವರೆಗೂ 15 ವರ್ಷಗಳು ಕಳೆದರೂ ಒಂದು ಚಕಾರವನ್ನು ಸಹ ಎತ್ತಿಲ್ಲ. ಹೋದ ವರ್ಷ ಸಹ ಇದನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದರೂ ಯಾವ ಒಂದು ಉತ್ತರವೂ ಬರಲಿಲ್ಲ. ಕರ್ನೂಲು ಜಿಲ್ಲೆಯ ಆದೋನಿ, ಹಾಲೂರು ರಾಯದುರ್ಗ ಮತ್ತು ಅನಂತಪುರ ಜಿಲ್ಲೆಯ ಮಡಕಶಿರ ಇತ್ಯಾದಿ ಪ್ರದೇಶಗಳ ಜನರು ನಮ್ಮ ಮೈಸೂರು ರಾಜ್ಯಕ್ಕೆ ಸೇರಿಸಿ ಎಂದು ಹೇಳುತ್ತಿದ್ದಾರೆ. ಆದರೆ ನಮ್ಮ ರಾಜ್ಯ ಸರ್ಕಾರದವರು ಇವತ್ತಿನವರೆಗೂ ಈ ವಿಷಯದಲ್ಲಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿ ಒತ್ತಾಯ ಮಾಡಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರು ಈ ವಿಷಯದಲ್ಲಿ ಒಂದು ಕಮಿಟಿ ಮಾಡಿ ನ್ಯಾಯವಾಗಿ ನಮ್ಮ ರಾಜ್ಯಕ್ಕೆ ಯಾವ ಪ್ರದೇಶಗಳು ಬರಬೇಕೋ ಅವುಗಳನ್ನು ಬರುವಂತೆ ಮಾಡುವುದಕ್ಕೆ ತಕ್ಕ ಏರ್ಪಾಡನ್ನು ಮಾಡಬೇಕೆಂದು ಹೇಳಿ, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು).—ನನ್ಮಾನ್ಯ ಉಪಾಧ್ಯಾಕ್ಷರೇ, ನಮ್ಮ ಮೈಸೂರು ರಾಜ್ಯದ ರಾಜ್ಯಪಾಲರು ನೀಡಿದ ಭಾಷಣಕ್ಕೆ ವಂದನೆಯನ್ನು ಅರ್ಪಿಸುವ ಕಾಲದಲ್ಲಿ ಅವರು ಹೇಳಿದಂಥ ವಿಷಯಗಳನ್ನು ನಾನು ನಂಪೂರ್ಣವಾಗಿ ವಿರೋಧಮಾಡುತ್ತಾ ಬಹುಶಃ ರಾಜ್ಯಪಾಲರು ಹೇಳಿದ ಭಾಷಣ ದೇಶದ ನೈಜ ಪರಿಸ್ಥಿತಿಯನ್ನು ಹಾಗೂ ರಾಜ್ಯಾಡಳಿತದ ಲೋಪದೋಷಗಳನ್ನು ಎತ್ತಿ ಹಿಡಿಯದೆ ಕೇವಲ ಅಧಿಕಾರಿಗಳು ಮತ್ತು ಮಂತ್ರಿ ಮಂಡಲದವರು ಜೋಡಿಸಿಕೊಟ್ಟಂಥ ಕೆಲವು ಪದಗಳನ್ನು ಸೇರಿಸಿಕೊಂಡು ಇಲ್ಲಿಗೆ ಬಂದು ಓದಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ವೈಯಕ್ತಿಕವಾಗಿ ನನಗೆ ಅವರ ಮೇಲೆ ಅಪಾರ ಗೌರವವಿದೆ. ಅವರೂ ಸಹ ಒಂದು ರಾಜ್ಯದ ಮುಖ್ಯ ಮಂತ್ರಿಯಾಗಿ, ಈ ದೇಶದ ಆಗುಹೋಗುಗಳ ಬಗ್ಗೆ ಚೆನ್ನಾಗಿ ಆಳವಾಗಿ ಅನುಭವವನ್ನು ಪಡೆದು ಬಂದಿರತಕ್ಕ ವ್ಯಕ್ತಿಗಳು, ಆದರೆ ಹಿಂದೆ ಇವರ ಒಂದು ಹೇಳಿಕೆಯ ಮೇಲೆ ಇವರ ಬಗ್ಗೆ ಲೋಕನಭೆಯಲ್ಲಿ ಸ್ವಲ್ಪ ಗಲಾಟೆಯಾದುದುದು ಅನೇಕ ಜನರಿಗೆ ಗೊತ್ತಿದೆ. ಈ ದೇಶದ ಆಡಳಿತ ಯಂತ್ರ ಈ ಒಂದು ಪ್ರಜಾಪ್ರಭುತ್ವದಲ್ಲಿ ಎಷ್ಟರಮಟ್ಟಿಗೆ ತನ್ನ ಕಾರ್ಯಗಳನ್ನು ಮಾಡುತ್ತಿದೆ, ಎಷ್ಟರಮಟ್ಟಿಗೆ ಕಾರ್ಯಗಳು ಇನ್ನೂ ಆಗಬೇಕಾಗಿವೆ ಎನ್ನುವುದನ್ನು ಚೆನ್ನಾಗಿ ಇವರು ತಿಳಿದು ಸರ್ಕಾರವನ್ನು ಚುರುಕುಗೊಳಿಸಿದರೆ; ಅವರ ಕರ್ತವ್ಯ ಇನ್ನೂ ಚೆನ್ನಾಗಿ ಆಗುತ್ತಿತ್ತು ಎಂಬುದಾಗಿ ನನ್ನ ಭಾವನೆ. ಇನ್ನು ಸಮಾಜವಾದಿ ಸರ್ಕಾರವನ್ನು ಜಾರಿಗೆ ತರುತ್ತೇವೆಂದು ಹೇಳುತ್ತಿದ್ದಾರೆ. ಅದರ ರಥವನ್ನು ಎಳೆದುಕೊಂಡು ಹೋಗುತ್ತಾ ಇರುವ ಈ ಸರ್ಕಾರ ಅದರ ಅಡಿಯಲ್ಲಿ ಏನು ಗರೀಬರು ಇದ್ದಾರೆಯೋ ಅವರನ್ನು ಅಭಿವೃದ್ಧಿಮಾಡದೇ ರಥದ ಅಡಿಯಲ್ಲಿ ಸಿಕ್ಕಿ ನತ್ತು ಹೋಗುವಂಥ ಪರಿಸ್ಥಿತಿಗೆ ತರುತ್ತಾ ಇರುವಂತಹ ದೃಶ್ಯವನ್ನು ನಾವು ಆಗಾಗ್ಗೆ ನೋಡುತ್ತಲೇ ಇದ್ದೇವೆ. ಇದು ಸಾಮಾನ್ಯವಾಗಿ ಎಲ್ಲ ಮಂತ್ರಿಗಳಿಗೂ ಗೊತ್ತಾಗುತ್ತಿದೆ. ನೈಜವಾದ ಪರಿಸ್ಥಿತಿಯನ್ನು ಹೇಳುವವರು ಈಗ ಬಹಳ ಕಡಿಮೆ ಇದ್ದಾರೆಂದು ನನಗನ್ನಿಸುತ್ತದೆ. ಇದು ಎಲ್ಲಾ ಕಾಲದಲ್ಲಿಯೂ ಬರುವ ಪರಿಸ್ಥಿತಿ. ಯಾರ ದೊಡ್ಡ ಹುದ್ದೆಗೆ ಬರುತ್ತಾರೋ ಯಾರು ತಮ್ಮ ಸ್ವಾರ್ಥತೆಯನ್ನು ಗಳಿಸುಕೊಳ್ಳುವುದಕ್ಕೆ ಪ್ರಯತ್ನಿಸುತ್ತಾರೋ ಅಂತಹ ಜನರನ್ನು ಎಂದಿಗೂ ನಂಬಬಾರದು. ಅವರಂತೆ ಹೋಗಿದ್ದೇ ಆದರೆ ದೇಶದ ಜನ ತುಂಬಾ ಕಷ್ಟಪಡುತ್ತಾರೆ. ಸಾಯುವ ಗತಿಯೂ ಬರುತ್ತದೆ. ಅನೇಕ ಸಂದರ್ಭಗಳಲ್ಲಿ ಅವರ ಕವಿಯನ್ನು ತುಂಬಿ ಅವರಿಗೆ ಈ ದೇಶದ ಮೇಲೆ ಇರತಕ್ಕ ಅಭಿಮಾನವನ್ನು ಕಡಿಮೆಮಾಡಿದ್ದಾರೆ. ನಾನು ಹೇಳುತ್ತೇನೆ. ಈ ಸರ್ಕಾರ ನಮ್ಮದು ಎಂಬ ಭಾವನೆ ಪ್ರತಿಯೊಬ್ಬರಿಗೂ ಬರಬೇಕು. ಬಹುಶಃ ಭಾಗ್ಯದ ದೇವತೆ ಶ್ರೀಮತಿ ಇಂದಿರಾ ತಾಯಿ ಎಂಬುದಾಗಿ

ಹೇಳಿದರೆ ಅದೇನೂ ತಪ್ಪು ಇಲ್ಲ. ಆದರೆ ಬಡ ಜನರೂ ಸಹ ನಮಗೆ ಭಾಗ್ಯದೇವತೆ ಶ್ರೀಮತಿ ಇಂದಿರಾ ಗಾಂಧಿಯವರು ಎಂದು ಹೇಳುವುದರಿಂದ ಇಲ್ಲಿ ಚುನಾಯಿತರಾಗಿರತಕ್ಕ ಅವರ ಪಕ್ಷದ 165 ಜನರನ್ನೂ ನಮ್ಮ ದೇಶವನ್ನು ಚಿನ್ನದ ನಾಡಾಗಿ ಮಾಡುತ್ತಾರೆಂದು ಬಡ ಜನರು ಚುನಾವಣೆ ಮಾಡಿ ಕಳುಹಿಸಿಕೊಟ್ಟರು. ಆದರೆ ಪೊನ್ನೆ ದಿವನ ಮಾನ್ಯ ಶ್ರೀ ಬಸವಲಿಂಗಪ್ಪನವರು ಮಾಡಿದ ಒಂದು ಹೇಳಿಕೆಯಿಂದ ಅವರ ಈ ಒಂದು ರಾಜ್ಯಾಡಳಿತದಲ್ಲಿ ರಾಮರಾಜ್ಯ ಹೋಗಿ ರಾವಣರಾಜ್ಯ ಬರುತ್ತದೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಕಾರಣ ಹೇಳುತ್ತೇನೆ. ಯಾರಿಗೇ ಆಗಲೀ ಮಂತ್ರಿಗಳಾಗಿರುವವರು ಏನಾದರೂ ಆಶ್ವಾಸನೆಯನ್ನು ಕೊಟ್ಟರೆ, ಅದರಂತೆ ನಡೆಯುಬೇಕೆಂದು, ನಾನು ಹಿರಿಯ ಸದಸ್ಯರಲ್ಲಿ ಸವಿನಯ ಪ್ರಾರ್ಥನೆ ಮಾಡುತ್ತೇನೆ. ಯಾರೇ ಆಗಲೀ ಮೊದಲು ಪಕ್ಷದ ಹಿತವನ್ನು ಬಿಡಬೇಕು. ಆದರೆ ಮಾನ್ಯ ಶ್ರೀ ಬಸವಲಿಂಗಪ್ಪನವರು ತಮ್ಮ ಹೇಳಿಕೆಯನ್ನು ಕೊಡುವಾಗ ದೇಶದ ಹಿತವನ್ನು ಕುರಿತು ಮಾತನಾಡುತ್ತಾ ಹೋಗುವಾಗ ಅವರ ಕಂಠ ಬಿಗಿದಿದೆ. ಆಡಳಿತದಲ್ಲಿ ಇರತಕ್ಕ ಲೋಪ ದೋಷಗಳನ್ನು ಎತ್ತಿ ಈ ಸಭೆಯಲ್ಲಿ ಹೇಳತಕ್ಕ ಹಕ್ಕನ್ನು ಅವರು ಕಳೆದು ಕೊಂಡಿದ್ದಾರೆ. ನಾವು ಪೊಸಿಷನ್ನಿನಲ್ಲಿರುವವರೆಂದು ಹೇಳಿದ್ದಾರೆ. ಅವರಿಗೆ ಈ ರಾಜ್ಯದಲ್ಲಿರತಕ್ಕಂಥ ಲೋಪದೋಷಗಳನ್ನು ಹೇಳುವ ಶಕ್ತಿ ಇಲ್ಲ. ಪ್ರಜಾಪ್ರಭುತ್ವಕ್ಕೆ ಇದೊಂದು ನಿಜವಾಗಿ ಕಳಂಕವಾಗಿರತಕ್ಕದ್ದು. ಆ ಕಡೆಯಲ್ಲಿ ನಾನು ಕಂಡ ಹಾಗೆ ಅನೇಕ ಜನರು ಹಿರಿಯ ಸದಸ್ಯರು ಇದ್ದಾರೆ. ಈಗ ರಾಜ್ಯದ ಸೂತ್ರವನ್ನು ಹಿಡಿದಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಆ ಕಡೆಯಲ್ಲಿ ಭೀಷ್ಮ, ದ್ರೋಣರೂ ಇರಬಹುದು. ಅವರು ಈಗಲೇ ಎಚ್ಚರವಾಗಿದ್ದರೆ, ಅವರಿಗೆ ಆದ ಗತಿಯೇ ಮುಂದೆ ಅವರಿಗೂ ಆಗುತ್ತದೆ. ನಾನು ಹೇಳುವುದಿಷ್ಟೇ. ಮೊಟ್ಟಮೊದಲನೆಯದಾಗಿ ಹಿಂದೆ ಮಂತ್ರಿಮಂಡಲ ರಚನೆಯಾದಾಗ್ಗೆ ಹೆಚ್ಚಿನ ಪ್ರೀತಿ ವಿಶ್ವಾಸವನ್ನು ನಾನು ವ್ಯಕ್ತಪಡಿಸಿದ್ದೇನೆ. ಆದರೆ ಕೇವಲ ಒಂದು ವರ್ಷದಲ್ಲಿ ಸಾಮಾನ್ಯ ಮನುಷ್ಯನಿಗೆ ಜೀವನ ಮಾಡುವುದಕ್ಕೆ ಎಷ್ಟು ಕಂಟಕವಿತ್ತೋ ಅಷ್ಟೇ ಕಂಟಕವಾಗಿ ಈಗಲೂ ಅವರು ಆಡಳಿತವನ್ನು ನಡೆಸುತ್ತಾ ಇದ್ದಾರೆ. ಸರ್ವೇಸಾಮಾನ್ಯವಾಗಿ ಹೇಳುವುದಾದರೆ, ಯಾರು ಬಡವರನ್ನು ಉದ್ಧಾರಮಾಡುತ್ತೇವೆ ಎಂಬುದಾಗಿ ಹೇಳಿಕೊಂಡು ಈಗ ರಾಜ್ಯಾಡಳಿತವನ್ನು ನಡೆಸುತ್ತಿದ್ದಾರೋ ಅವರು ಇವತ್ತು ಬಡಜನರ ಬಗ್ಗೆ ಯಾವ ಅನುಕಂಪವನ್ನೂ ತೋರಿಸಲಿಲ್ಲ. ಇಂದು ಎಲ್ಲ ಸಾರ್ವಜನಿಕರು ಉಪಯೋಗಿಸುವ ಸರ್ವ ಪದಾರ್ಥಗಳ ಬೆಲೆ ಗಗನಕ್ಕೆ ಮುಟ್ಟಿದೆ. ಬಡಜನರಿಗೆ ಸ್ವರ್ಗ ಸಾಧನವನ್ನು ಕೊಡುತ್ತೇವೆಂದು ಹೇಳಿದ್ದರು. ಈಗಿನ ಬೆಲೆಗಳ ಏರಿಕೆಯಿಂದ ಆ ಸುಖವನ್ನು ಹೇಗೆ ಪಡೆಯಬೇಕೆಂಬ ಭಾವನೆ ಬಡಜನರಿಗೆ ಇತ್ತೀಚೆಗೆ ಬಹಳ ಜಾಸ್ತಿಯಾಗಿ ಬರುತ್ತಿದೆ. ಇದು ಆಗಬಾರದು. ಇದಕ್ಕೆ ಸರ್ಕಾರದ ದ್ವಿಮುಖ ನೀತಿಯೇ ಕಾರಣ. ಉದಾಹರಣೆಗೆ ಹೇಳುವುದಾದರೆ, ರಾಜ್ಯಪಾಲರು ಆಹಾರದ ಹಂಚಿಕೆ ಮತ್ತು ಸಂಗ್ರಹಣೆಯ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ನ್ಯಾಯಬೆಲೆ ಅಂಗಡಿಗಳನ್ನು ತೆರೆಯುತ್ತೇವೆ. ಅವುಗಳ ಮುಖಾಂತರ ಆಹಾರ ಪದಾರ್ಥಗಳನ್ನು ಹಂಚುತ್ತೇವೆಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ನಮ್ಮ ಕರ್ನಾಟಕ ದೇಶದಲ್ಲಿರತಕ್ಕ 2 ಕೋಟಿ ಜನತೆಗೆ ಹಂಚುವ ಆಹಾರಪದಾರ್ಥಗಳು ಸರ್ಕಾರದ ವಶದಲ್ಲಿದೆಯೇ ಇಲ್ಲವೇ ಎಂಬುದನ್ನು ಹೇಳಬೇಕು. ಇಲ್ಲದೇ ಹೋದರೆ, ಅದನ್ನು ಎಲ್ಲಿಂದ ತರಿಸುತ್ತೀರಾ ಎನ್ನುವ ಹೇಳಿಕೆಯನ್ನು ಇಲ್ಲಿ ಕೊಟ್ಟಿಲ್ಲ. ಇದನ್ನು ನೋಡಿದರೆ, ಸರ್ಕಾರ ಈ ದೇಶದ ಮುಂದಿನ ಭವಿಷ್ಯವನ್ನು ಮರೆತು ತನ್ನ ಕಾರ್ಯವನ್ನು ಮಾಡುವುದಕ್ಕೆ ಹೋದಾಗ ಅವರ ಒಂದು ವಿಫಲತೆಯಾಗುವುದು ಸಹಜ. ಇನ್ನು ಮುಂದೆ ಆಹಾರ ಪದಾರ್ಥಗಳ ವಶೀಕರಣವನ್ನು ಸರ್ಕಾರವೇ ತೆಗೆದುಕೊಳ್ಳುತ್ತದೆ, ಅವನ್ನು ತನ್ನ ಮುಖಾಂತರವೇ ಮಾರಲಾಗುತ್ತದೆಂದು ಹೇಳುತ್ತಿದ್ದಾರೆ. ಅಂತಹ ಸಂದರ್ಭದಲ್ಲಿ ಬೆಳೆಯು ತಕ್ಕವರಿಗೆ ಸರಿಯಾದ ಧಾರಣೆ ಸಿಗದೇ ಹೋದರೆ, ಅವರಿಗೆ ತುಂಬಾ ತೊಂದರೆಯಾಗುತ್ತದೆ. ಅದರ ಬಗ್ಗೆ ಆಗ ಯಾರೂ ಕಡಾ್ಡಯ ಮಾಡುವುದಕ್ಕಾಗುವುದಿಲ್ಲ. ಅದಕ್ಕಾಗಿ ಕಮರ್ಷಿಯಲ್ ಕ್ರಾಪ್ಸ್‌ಗೆ ಸರಿಯಾದ ಬೆಲೆಯನ್ನು ನಿಗದಿಮಾಡಬೇಕು. ಇಲ್ಲದಿದ್ದರೆ ಅವರು ಅದನ್ನು ಬೆಳೆಯುವುದಕ್ಕೆ ಧಕ್ಕೆಯಾಗುತ್ತದೆ. ಆದ್ದರಿಂದ ಇವರು ಈಗಲೇ ಒಂದು ಪಾಲಿಸಿಯನ್ನು ಹಾಕಿಕೊಂಡರೆ, ಇದರ ಬಗ್ಗೆ ಅಷ್ಟೊಂದು ಕೆಟ್ಟ ವಾತಾವರಣ, ಪರಿಣಾಮ ಆಗಲಾರದೆಂದು ನನ್ನ ಭಾವನೆಯೆಂಬುದಾಗಿ ನಾನು ಸರ್ಕಾರವನ್ನು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಏಕೆಂದರೆ ಮುಂದೆ ಮಳೆಗಾಲ ಬಂದರೆ ಎಷ್ಟರಮಟ್ಟಿಗೆ ಫಸಲು ಸಿಗುತ್ತದೋ ಗೊತ್ತಿಲ್ಲ. ಅಲ್ಲಿಯವರೆಗೆ ಜನರನ್ನು ರಕ್ಷಣೆ ಮಾಡುವುದು ಸರ್ಕಾರದ ಧ್ಯೇಯ, ಜವಾಬ್ದಾರಿ, ಹಾಗೂ ಅವರ ಭಾರವಾಗಿರಬೇಕು. ಆ ಭಾರವನ್ನು ಸರ್ಕಾರದವರು ಮನಸ್ಸಿನಲ್ಲಿಟ್ಟುಕೊಂಡು ಪರಿಪೂರ್ಣವಾಗಿ ಅವನ್ನು ಜಾರಿಗೆ ತರುತ್ತಾರೆಂದು ನಾನು ಭಾವಿಸಿದ್ದೇನೆ. ಇನ್ನು ಎರಡನೆಯದಾಗಿ ಹೇಳುವುದಾದರೆ, ನಿಜವಾಗಿ ಸರ್ಕಾರ ಸ್ವಲ್ಪಮಟ್ಟಿಗೆ ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಭೂಮಿ ಇಲ್ಲದವರಿಗೆ, ವಸತಿ ಹೀನ

(ಶ್ರೀ ಟಿ. ಎಂ. ಮಂಜುನಾಥ್)

ರಿಗೆ ಜಮೀನುಗಳನ್ನು ಕೊಟ್ಟಿದ್ದಾರೆ. ನಾನು ಈ ಸಂದರ್ಭದಲ್ಲಿ ಒಂದು ಪ್ರಶ್ನೆಮಾಡುತ್ತೇನೆ. ಈ ರೀತಿಯಾಗಿ ಸ್ವಲ್ಪ ಜಮೀನನ್ನು ಅವರಿಗೆ ಕೊಟ್ಟು, ಅದರಿಂದ ಅವರ ಆರ್ಥಿಕ ಪರಿಸ್ಥಿತಿ ಎಷ್ಟರ ಮಟ್ಟಿಗೆ ಅಭಿವೃದ್ಧಿಯಾಗಿದೆಯೆಂಬುದನ್ನು ಸರ್ಕಾರ ಯೋಚನೆಮಾಡಬೇಕು. ಈ ರೀತಿಯಾದಂಥ ಯೋಚನೆಯನ್ನು ಜಾರಿಗೆ ತಂದಮೇಲೆ ಮಧ್ಯಮ ವರ್ಗದವರಿಗೆ ಮತ್ತು ಕಡಿಮೆ ದರ್ಜೆಯವರಿಗೆ ಹೌಸಿಂಗ್ ಬೋರ್ಡಿನಿಂದ ಮನೆಗಳನ್ನು ಕಟ್ಟುವುದಕ್ಕೆ ಹಣವನ್ನು ಕೊಡಿಸುತ್ತೇವೆಂದು ಹೇಳಿ ಸುಮಾರು ಒಂದೂವರೆ ವರ್ಷ ಆಗಿದ್ದರೂ, ಕೆಲವು ಕಡೆಗಳಲ್ಲಿ ಇನ್ನೂ ಆ ಜನರಿಗೆ ಆ ಸೌಕರ್ಯವನ್ನು ಕೊಟ್ಟಿಲ್ಲ. ಇದರ ಔಚಿತ್ಯವಾದರೂ ಏನು ? ಹರಿಜನ, ಗಿರಿಜನರಿಗೆ ಸಹಕಾರ ಸಂಘಗಳಿಂದ ಹಣವನ್ನು ಕೊಡುಸುತ್ತೇವೆಂದು ಹೇಳಿ ಸುಮಾರು ಒಂದು ವರ್ಷವಾದರೂ ಅಲ್ಲಿಂದ ಈಚೆಗೆ ಇದುವರೆಗೆ ಒಂದು ಕಾಸನ್ನೂ ಅವರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಕೊಟ್ಟಿಲ್ಲ. ಅವರ ಬಗ್ಗೆ ಇನ್ನೂ ಏನೂ ಉಪಕಾರ ಮಾಡಿಲ್ಲ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಆದಷ್ಟು ಬೇಗ ತಮ್ಮ ಗಮನವನ್ನು ಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈಗ ಬರಗಾಲವೇನೋ ಬಂದಿದೆ. ನಮ್ಮ ಸಭಾ ನಾಯಕರೂ ಹಾಗೂ ನಮ್ಮ ಮಾನ್ಯ ಮುಖ್ಯ ಮಂತ್ರಿಗಳೂ ಒಂದು ಕಡೆ ಮಾತನಾಡುತ್ತಾ, ಮಾನ್ಯ ಶ್ರೀ ವೀರೇಂದ್ರಪಾಟೀಲ್ ಅವರೂ ಮತ್ತು ಅವರ ಸಂಗಡಿಗರು ಮಾಡಿದಂಥ ಪಾಪವನ್ನು ನಾವು ಇವತ್ತು ಅನುಭವಿಸುತ್ತಿದ್ದೇವೆಂದು ಹೇಳಿದರು. ಬಹಳ ಸಂತೋಷ. ನಾನು ಅವರ ಜ್ಞಾಪಕಕ್ಕೆ ಒಂದು ವಿಷಯವನ್ನು ತರಬಯಸುತ್ತೇನೆ. ಆದರೆ ನಾನು ವಯಸ್ಸಿನಲ್ಲಿ ಚಿಕ್ಕವನೇ ಇರಬಹುದು. ನಮ್ಮಲ್ಲಿ ಜ್ಞಾನಿಗಳು ಹೇಳುತ್ತಾರೆ 'ತಾನು ಮಾಡಿದ್ದನ್ನು ತಾನೆ ಊಟ ಮಾಡಬೇಕು' ಎಂದು. ಆ ಕೆಲಸವನ್ನು ಶ್ರೀ ವೀರೇಂದ್ರ ಪಾಟೀಲರು ಮಾಡಿದ್ದರೆ ಅವರು ಊಟ ಮಾಡುತ್ತಾರೆ. ಅವರೇನು ಅಲ್ಲಿ ಹರಿಯತಕ್ಕ ನದಿಗಳಲ್ಲಿ ನೀರು ಬರುವುದು ಬೇಡ ಕೆರೆ ಕಟ್ಟೆಗಳಲ್ಲಿ ನೀರು ಇರುವುದು ಬೇಡ ಎಂದು ಹೇಳಿದ್ದರೆ ? ಅವರು ಹೇಳಿದ್ದರೂ ಹಾಗಾಗುವುದಕ್ಕೆ ಸಾಧ್ಯವೇ ? ಆದರೆ ರಾಜ್ಯದಲ್ಲಿ ಸಮತಾವಾದವನ್ನು ನಾವು ಜಾರಿಗೆ ತರುತ್ತೇವೆಂದು ಹೇಳಿಕೊಳ್ಳುತ್ತಿರುವ ಜನರಿದ್ದಾರಲ್ಲಾ ಅವರು ಏನು ಮಾಡಿದ್ದಾರೆ ಈಗ ಇವರ ವಿಚಾರದಲ್ಲಿ ಎಂದು ಕೇಳುತ್ತಿದ್ದೇನೆ ? ಇವರು ಇಲ್ಲಿಯತನಕ ಎಷ್ಟು ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದಾರೆ ? ಇಲ್ಲಿ ಆಡಳಿತ ಪಕ್ಷದವರು ಹೇಳುತ್ತಿರುವ ಸಮತಾವಾದ ಹೇಗಿದೆ ಎಂದರೆ— 'ಶಾನ್ಭೋಗ್ರು ಹೇಳಿದ್ದು ಬದನೆಕಾಯಿ ತಿನ್ನುವುದಕ್ಕೆ' ಎಂದ ಹಾಗಿದೆ. ಅಧಿಕಾರದಲ್ಲಿರತಕ್ಕ ಈ ಜನ ಹೇಗೆ ನಡೆಯುತ್ತಿದ್ದಾರೋ ಅವರ ಹಿಂಬಾಲಕರೂ ಹಾಗೆ ನಡೆಯುತ್ತಿದ್ದಾರೆ—'ಯಥಾ ರಾಜಾ ತಥಾ ಪ್ರಜಾ' ಅನ್ನುವಂತಾಗಿದೆ. ಮೊದಲು ಆಡಳಿತದಲ್ಲಿರತಕ್ಕವರ ಜೀವನ ಸ್ವಚ್ಛವಾಗಿದ್ದು ಆದರ್ಶವಾಗಿದ್ದರಲ್ಲವೇ ಇವರ ಹಿಂದೆ ಇರಕ್ಕವರ ಜೀವನ ಸ್ವಚ್ಛವಾಗಿರುವುದು ? ನನಗೆ ಇನ್ನೂ ದೇವರಲ್ಲಿ ನಂಬಿಕೆ ಇದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕೆಂದಿದ್ದೇನೆ— ಆಡಳಿತ ನಡುತ್ತಿರು ಪಕ್ಷದವರು ತಮ್ಮ ಆಡಳಿತ ಪಕ್ಷರಹಿತವಾದದ್ದು ಜಾತ್ಯಾತೀತವಾದದ್ದು ಸಂಘಾ ಒಂದು ಕಾರ್ಯವ ಕ್ರಮವನ್ನು ಹಾಕಿಕೊಂಡು ಆಡಳಿತವನ್ನು ನಡೆಸುತ್ತಿದ್ದೇವೆಂದು ಹೇಳಿಕೊಳ್ಳುತ್ತಿರುವಾಗ ಕೆಲವು ಮಂತ್ರಿಗಳು ತಮ್ಮ ಜನಾಂಗದವರನ್ನ ಎಲ್ಲೆಲ್ಲಿ ತಮಗೆ ಅನುಕೂಲವಾದ ಸ್ಥಾನಗಳಿವೆಯೋ ಅಲ್ಲಿಗೆ —ಅವರಲ್ಲಿ ಆ ಸ್ಥಾನವನ್ನಲಂಕರಿಸುವುದಕ್ಕೆ ದಕ್ಷತೆ, ಪೆರಿಟ್ ವಗ್ಗೈರೆ ಇರಲಿ ಇಲ್ಲದಿರಲಿ ಅವರನ್ನು ವರ್ಗಾಯಿಸುವುದಕ್ಕೆ ಹೊರಟಿದ್ದಾರೆಂದು ಕೇಳುತ್ತಿದ್ದೇನೆ. ಇದು ನಿಜವಾಗಿಯೂ ಬಹಳ ಶೋಚನೀಯವಾದ ಪರಿಸ್ಥಿತಿ.

5-00 P. M.

ಇನ್ನು ನಾನು ನಮ್ಮ ತಾಲ್ಲೂಕ್ ಮಟ್ಟದ ವಿಚಾರಗಳಿಗೆ ಬಂದರೆ ಅಲ್ಲಿರತಕ್ಕ ಭೂಮಿಯಲ್ಲಿ ನೂರಕ್ಕೆ 90 ರಷ್ಟು ಬುಷ್ಮಿ ಭೂಮಿ. ಅಲ್ಲಿರತಕ್ಕ ಜನರೂ ಕೂಡ ಬಹಳ ನಿರ್ಗತಿಕರು. ಅಲ್ಲಿ ಯಾವ ಒಂದು ದೊಡ್ಡ ನೀರಾವರಿಯ ಅನುಕೂಲತೆಯೂ ಇಲ್ಲ. ಆದರೆ ಇತ್ತೀಚೆಗೆ ಹೇಮಾವತಿ ನದಿಯ ನೀರನ್ನು ತುಮಕೂರು ಮತ್ತು ಮಂಡ್ಯಾ ಜಿಲ್ಲೆಗಳಿಗೆ ವ್ಯವಸಾಯಕ್ಕೆ ತರಬೇಕೆಂಬ ವಿಚಾರದಲ್ಲಿ ಸರ್ವೆ ಕೆಲಸಗಳು ನಡೆಯುತ್ತಿವೆಯೆಂದು ಕೇಳುತ್ತಿದ್ದೇನೆ. ಆದುದರಿಂದ ಅಲ್ಲಿ ಆ ನೀರು ನಮ್ಮ ತಾಲ್ಲೂಕನ್ನು ಹಾದು ಬೇರೆ ತಾಲ್ಲೂಕುಗಳಿಗೆ ಹೋಗುವುದಕ್ಕೆ ಪೂರ್ವಭಾವಿಯಾಗಿ ನಮ್ಮಲ್ಲಿ ಎಷ್ಟು ಬೆಳೆಸುವುದಕ್ಕೆ ಸಾಧ್ಯವಿದೆಯೋ ಅಷ್ಟನ್ನೂ ಅಲ್ಲಿ ಬೆಳೆಸುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ ತೆಂಗಿನ ಅಣಿಕಟ್ಟುಗಳು ಬಹಳ ಪ್ರಾಮುಖ್ಯ

ವಾದವು. ಅಲ್ಲಿ ಈ ವಿಚಾರದಲ್ಲಿ ಯಾವ ಅಧಿಕಾರಿಗಳನ್ನು ಕೇಳಿದರೂ ಅದು ನಮಗೆ ಸಂಬಂಧ ಪಟ್ಟಿದ್ದಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಸರ್ಕಾರದವರು ಇತ್ತಕಡೆಗೆ ತಮ್ಮ ಗಮನವನ್ನು ಹರಿಸಿ ಅದಕ್ಕೆ ಯಾರು ಸಂಬಂಧಪಟ್ಟವರು ಎಂಬುದನ್ನು ನಿರ್ಧರ ಮಾಡಿ ಅಲ್ಲಿ ತೆಂಗಿನ ಅಣಿಕಟ್ಟುಗಳನ್ನು ಮಾಡಿಸಿ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಆಲ್ಲಿ ಈ ಅಣೆಗಳಿಗೆ ಮೊದಲನ ಅದ್ಯತೆ ಕೊಡಬೇಕು.

ಇನ್ನು ಸಹಕಾರ ಇಲಾಖೆಯ ವಿಚಾರಕ್ಕೆ ಬಂದರೆ ಒಂದೊಂದಾವರ್ತಿ ನನಗೆ ಅನಿಸುತ್ತದೆ ಆ ಇಲಾಖೆ ನಮ್ಮ ರಾಜ್ಯದಲ್ಲಿ ಇದೆಯೋ ಇಲ್ಲವೋ ಎಂದು. ಒಟ್ಟಿನಲ್ಲಿ ಅದೆ ರೀತಿ ಒಂದೊಂದಾವರ್ತಿ ಇಲ್ಲಿ ಸರ್ಕಾರ ಕೂಡ ಇಲ್ಲವೇ ಇಲ್ಲವೇನೋ ಎಂಬೆನೆಸುತ್ತದೆ. ಇಲ್ಲಿ ನಡೆಯುತ್ತಿರುವ ಭ್ರಷ್ಟಾಚಾರವನ್ನು ನೋಡುತ್ತಿದ್ದರೂ ಕಣ್ಣಿಲ್ಲದ ಕುರುಡರಂತೆಯೂ, ಅವರ ವಿಚಾರದಲ್ಲಿ ನಾವು ಇಲ್ಲಿ ದಿನಪೆರ್ರಾ ಸುರಿಮಳೆಗೆರೆಯುತ್ತಿದ್ದರೂ ಅದನ್ನು ಕೇಳಿ ಕೇಳಿಯೂ ಕಿವುಡರಂತೆ ಬಾಯಿದ್ದರೂ ಉತ್ತರವನ್ನು ಕೊಡದೆ ಮೂಕರಂತೆ ಇರತಕ್ಕ ಈ ಸರ್ಕಾರ ನೋಡಿದರೆ ಇದೊಂದು ಕಣ್ಣು, ಕಿವಿ ಮತ್ತು ಬಾಯಿ ಇಲ್ಲದ ಶರೀರವಿದ್ದಂತೆ ಇದೆಯೆಂದು ಹೇಳಬೇಕಾಗಿದೆ. ಇನ್ನಾದರೂ ಈ ಸರ್ಕಾರ ಜನರ ಆಸೆ ಆಕಾಂಕ್ಷೆಗಳನ್ನು ಪರಿಪೂರ್ಣಮಾಡುವುದಾದರೆ ನಾವು ಸಹಕಾರ ನೀಡುವುದಕ್ಕೆ ಸಿದ್ಧ, ನಮ್ಮ ಬೆಂಬಲವನ್ನೂ ನೀಡುತ್ತೇವೆ. ಆದರೆ ಈಗ ರಾಜ್ಯಪಾಲರ ಅಪ್ಪಣೆ ಕೊಡಿಸಿರತಕ್ಕ ಭಾಷಣ ವಾಸ್ತವಾಂಶಗಳಿಗೆ ವಿರುದ್ಧವಾಗಿರುವುದರಿಂದ ಇದನ್ನು ನಾವು ಸಂಪೂರ್ಣವಾಗಿ ವಿರೋಧಿಸಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ).—ಮಾನ್ಯ ಉಪಾಧ್ಯಕ್ಷರೇ, ರಾಜ್ಯಪಾಲರು ಅಪ್ಪಣೆ ಕೊಡಿಸಿರತಕ್ಕ ಭಾಷಣದ ಬಗ್ಗೆ ತಂದಿರತಕ್ಕ ವಂದನಾರ್ಪಣಾ ನಿರ್ಣಯವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತ ಕೆಲವು ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ.

ರಾಜ್ಯದಲ್ಲಿ ಹಿಂದೆ ಎಂದೂ ಬರದಿದ್ದಂಥ ಬರಗಾಲ ಇಂದು ಬಂದಿದೆ. ಇದನ್ನು ತಡೆಗಟ್ಟಲು ಸರ್ಕಾರದವರು ಸಾಕಷ್ಟು ಪ್ರಯತ್ನಗಳನ್ನು ಮಾಡಿದ್ದಾರೆ. ಆ ವಿಚಾರದಲ್ಲಿ ವಿರೋಧ ಪಕ್ಷದವರು ಒಂದಾದರೂ ಒಳ್ಳೆಯ ಮಾತನ್ನು ಆಡಿದ್ದಾರೆ ಹೋಗಲಿ, ಅವರು ಈ ವಿಚಾರದಲ್ಲಿ ಅಲ್ಲ ಅಲ್ಲಿದ ಟೀಕೆಗಳನ್ನು ಮಾಡುವುದು ಖಂಡಿತಾ ಸರಿಯಾದುದಲ್ಲ. ವಿರೋಧ ಪಕ್ಷ ಇರಲೇಬೇಕು. ಅದು ಸರ್ಕಾರದವರ ನ್ಯೂನತೆಗಳನ್ನು ಎತ್ತಿತೋರಿಸುವುದಕ್ಕೆ ಇರಬೇಕಾದ್ದುನೂಕ್ತ ಅಷ್ಟೇ ಆಲ್ಲದೆ ಅವರು ಸರ್ಕಾರದವರು ಮಾಡಿರತಕ್ಕ ಒಳ್ಳೆಯ ಕೆಲಸ ಕಾರ್ಯಗಳ ಬಗ್ಗೆಯೂ ಒಂದು ಒಳ್ಳೆಯ ಮಾತನ್ನಾಡಿ ಅವರಿಗೆ ಇನ್ನೂ ಹೆಚ್ಚು ಪ್ರೋತ್ಸಾಹಕರವಾದ ರೀತಿಯಲ್ಲಿ ಕೆಲಸಮಾಡುವಂತೆ ಮಾಡ ಬೇಕಾದ್ದು ಅವರ ಕರ್ತವ್ಯ. ಆದರೆ ಹಿಂದೆಲ್ಲಾ ಇದ್ದ ಸರ್ಕಾರಗಳು ತಮ್ಮ ಕರ್ತವ್ಯಗಳನ್ನು ಸರಿಯಾಗಿ ನಡೆಸದೆ ಇದ್ದ ಕಾರಣ ನಾವು ಈ ದಿವಸ ಈ ಕಷ್ಟ ಕಾರ್ಪಣ್ಯಗಳನ್ನು ಎದುರಿಸಬೇಕಾಗಿದೆ. ಹಿಂದೆ ಇದ್ದ ಸರ್ಕಾರಗಳು ಹಣವನ್ನು ವಿವೇಕದಿಂದ ಖರ್ಚು ಮಾಡಿದ್ದರೆ ಈ ದಿವಸ ಅಲ್ಲಯ ಜನ ಇಷ್ಟು ಕಷ್ಟಗಳಿಗೆ ಗುರಿಯಾಗಬೇಕಾದ್ದಿರಲಿಲ್ಲ. ಇದು ಅಲ್ಲಿಯ ಭೀಕರ ಕ್ಷಾಮಪರಿಸ್ಥಿತಿಯನ್ನು ಎದುರಿಸಲು ಸರ್ಕಾರದವರು ಅಲ್ಲಲ್ಲೇ ಗಂಜಿಕೇಂದ್ರಗಳನ್ನು ತೆರೆದು ಆದಾಲವ್ಯದ್ದರಾವಿಯಾಗಿ ಲಕ್ಷಾಂತರ ಜನರಿಗೆ ಪುಕ್ಕಟ್ಟೆ ಊಟಕ್ಕೆ ವ್ಯವಸ್ಥೆಯನ್ನು ಮಾಡಿದ್ದಾರೆ. ದುಡಿಯತಕ್ಕ ಜನರಿಗೆ ಉದ್ಯೋಗಗಳನ್ನು ಒದಗಿಸಿದ್ದಾರೆ. ಅಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಗಂಜೀ ಕೇಂದ್ರಗಳನ್ನು ಸರ್ಕಾರದವರು ತೆರೆಯಬೇಕೆಂದಿದ್ದಾರೆ. ಆದರೆ ಇನ್ನು ಮುಂದಕ್ಕೆ ಅಲ್ಲಿ ಏನಿದ್ದರೂ ನಮ್ಮ ಸರ್ಕಾರದವರು ಹೆಚ್ಚಿನ ನಿಗವನ್ನು ನೀರಾವರಿ ಕಾಮಗಾರಿಗಳಿಗೆ ಕೊಡ ಬೇಕಾದ್ದು ಅಗತ್ಯವೆಂದು ನಾನು ಹೇಳುತ್ತೇನೆ. ಜನರಿಗೆ ಹೆಚ್ಚಿನ ಉತ್ತಾಹವನ್ನು ನೀಡಿ ಅಲ್ಲಿ ಹೆಚ್ಚು ಹೆಚ್ಚು ಉತ್ಪನ್ನಕ್ಕೆ ಅವಕಾಶ ಮಾಡಬೇಕಾದ್ದು ಮುಖ್ಯ ಈ ವರ್ಷ ಸಾಮಾನ್ಯವಾಗಿ ರಾಜ್ಯದ ಅನೇಕ ಭಾಗಗಳಲ್ಲಿ ಮಳೆಯಾಗಲಿಲ್ಲ ಬೆಳೆಗಳಿಲ್ಲ ಎಲ್ಲೆಲ್ಲೂ ಸಾಮಾನ್ಯವಾಗಿ ಅಭಾವ ಚಿಹ್ನಗಳೇ ಎದ್ದು ಕಾಣುತ್ತಿವೆ. ಆದಕಾರಣ ರಾಜ್ಯದ ಎಲ್ಲಾ ಭಾಗಗಳಲ್ಲಿಯೂ ಸರ್ಕಾರದವರು ರಿಲೀಫ್ ಕಾಮಗಾರಿಗಳನ್ನು ನಡೆಸಬೇಕಾದ್ದು ಅನಿವಾರ್ಯವಾಗಿದೆ. ಇದಕ್ಕಾಗಿ ತಾಲ್ಲೂಕ್ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ರಿಲೀಫ್ ಕಾಮಗಾರಿ ಸಮಿತಿಗಳನ್ನು ನೇಮಕ ಮಾಡುವುದು ಅಗತ್ಯ. ಆದರೆ ಸರ್ಕಾರದವರು ಇತ್ತೀಚೆಗೆ ಹಳೇ ಮೈಸೂರು ವಿಭಾಗದಲ್ಲಿ ರಿಲೀಫ್ ಕಾಮಗಾರಿಗಳನ್ನು ನಿಲ್ಲಿಸುವಂತೆ ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಈ ವಿಚಾರದಲ್ಲಿ ನಾನು ಸರ್ಕಾರಕ್ಕೆ ಒಂದು ಮಾತನ್ನು ಹೇಳಬೇಕಾಗಿದೆ. ಈ ದಿವಸ ನಮ್ಮ ಮಂಡ್ಯಾ ಜಿಲ್ಲೆಯಲ್ಲಿ ನೀರಾವರಿ ಇಲ್ಲದ ಖುಷ್ಕಿ ಭೂಮಿ

(ಶ್ರೀಮತಿ ದಮಯಂತಿ ಬೋರೇಗೌಡ)

ಇನ್ನೂ ಬಹಳ ಅಪಾರವಾಗಿದೆ. ಆದುದರಿಂದ ಆ ಜಿಲ್ಲೆಗೆ ಸರ್ಕಾರದವರು 64—ಫ್ಯಾಮಿನ್ ರಿಲೀಫ್ ಫಂಡಿನಲ್ಲಿ ಒದಗಿಸಿದ್ದ ಹಣವನ್ನು ಅಲ್ಲಿಯ ನೀರಾವರಿ ಸೌಕರ್ಯವಿಲ್ಲದ ಪ್ರದೇಶಕ್ಕೆ ನೀರಾವರಿ ಸೌಕರ್ಯ ಒದಗಿಸುವುದಕ್ಕೆ ಉಪಯೋಗಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಪಶುಸಂಗೋಪನಾ ವಿಚಾರದಲ್ಲಿ ಸರ್ಕಾರದವರು ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದಾರೆ. ಇಲ್ಲಿಯವರೆಗೂ ರೈತರಿಗೆ ಅಗತ್ಯವಾಗಿ ಬೇಕಾಗಿದ್ದ ಜಾನುವಾರುಗಳಿಗೆ ಬರುತ್ತಿದ್ದ ಆ ದೊಡ್ಡರೋಗದ ನಿವಾರಣೆಗೆ ಸರ್ಕಾರದವರು ಬಹಳ ಶ್ರಮಿಸಿ ಸಂಶೋಧನೆಗಳನ್ನು ನಡೆಸಿ ಅದರ ನಿವಾರಣೆಗೆ ಒಳ್ಳೆಯ ಔಷಧಿಗಳನ್ನು ಕಂಡು ಹಿಡಿದಿದ್ದಾರೆ. ಇನ್ನು ದೊಡ್ಡ ಹಾಗೂ ಮಧ್ಯಮಾವರ್ತಿಯ ಮತ್ತು ಸಣ್ಣ ನೀರಾವರಿ ಯೋಜನೆಗಳನ್ನು ಬಲಗೊಳಿಸುವುದಕ್ಕೆ ಸರ್ಕಾರದವರು ಹೆಚ್ಚಿನ ನಿಗಾ ಕೊಡಬೇಕು. ಇಲ್ಲದಿದ್ದರೆ ನಾಡಿನಲ್ಲಿ ಜನರು ಸುಖವಾಗಿರುವುದಕ್ಕಾಗುವುದಿಲ್ಲ. ಜನರಿಗೆ ಅನುಕೂಲ ದೊರೆಕ ಬೇಕಾಗಿದ್ದರೆ ಇದೊಂದೇ ಸುಲಭವಾದ ಮಾರ್ಗ. ಹಾಗೇ ಸಣ್ಣ ಪುಟ್ಟ ಕೈಗಾರಿಕೆಗಳ ವಿಚಾರದಲ್ಲೂ ಸರ್ಕಾರದವರು ಹೆಚ್ಚಿನ ನಿಗಾ ಕೊಡಬೇಕಾದ್ದು ಅಗತ್ಯ. ಆದರೆ ನಮ್ಮ ಪ್ರಾಂತ್ಯದಲ್ಲಿ ಕರಿಘಟ್ಟದ ಬಳಿ ಲೋಕಪಾವನಿ ನದಿಗೆ ಒಂದು Lift Irrigation ಹಾಕಿದರೆ ಅಲ್ಲಿ ಸುಮಾರು 3200 ಎಕರೆ ನಾಗವಳಿಗೆ ಬರತಕ್ಕ ಜಮೀನಿದೆ. ಅಂಥ ಒಂದು ಅನುಕೂಲ ಅಲ್ಲಿದೆ. ಆದರೆ ಸರ್ಕಾರದವರು ಕೂಡಲೆ ಗಮನಕೊಟ್ಟು ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವಿದ್ಯುಚ್ಛಕ್ತಿಯ ಬಾಬಿನಲ್ಲೂ ಕೂಡ ಇಲ್ಲಿ ಸಾಕಷ್ಟು ಪ್ರಗತಿಯಾಗಿದೆ. ನಮ್ಮ ನೆರೆ ರಾಜ್ಯವಾದ ಮದ್ರಾಸಿನಲ್ಲಿ ಶೇ: 75ರಷ್ಟು ಪವರ್ ಕಟ್ಟಾಗಿದ್ದರೆ ನಮ್ಮಲ್ಲಿ ಶೇ: 25ರಷ್ಟು ಮಾತ್ರ ಪವರ್ ಕಟ್ಟಾಗಿದೆ. ಇದರಿಂದಲೇ ನಾವು ಇಲ್ಲಿ ಅವರಿಗಿಂತಲೂ ಸ್ವಲ್ಪ ಇನ್ನೂ ಉತ್ತಮ ಪರಿಸ್ಥಿತಿಯಲ್ಲಿದ್ದೇವೆಂಬುದು ಎಲ್ಲರಿಗೂ ಗೊತ್ತಾಗುತ್ತದೆ.

ನಾರಿಗೆ ಸಂಪರ್ಕಸಾಧನಗಳ ಬಗ್ಗೆ ಹೇಳುವುದಾದರೆ ಪ್ರತಿಯೊಂದು ತಾಲ್ಲೂಕಿನಲ್ಲೂ 50 ಮೈಲಿಗಳ ರಸ್ತೆ ಮಾಡುವುದು ಸ್ವಾಗತಾರ್ಹವಾದುದು. ಆದರೆ ಹೊಸ ರಸ್ತೆಗಳು ಹೆಚ್ಚು ಜನ ಬಳಕೆಯಿಲ್ಲದ ರಸ್ತೆಯಾಗಿವೆ ಮಂಡ್ಯ ಜಿಲ್ಲೆ ವಿಚಾರ ಹೇಳುವುದಾದರೆ ಶುಗರ್‌ಕೇನ್ ಪರ್ಚೇಸ್ ಟ್ಯಾಕ್ಸಿನಿಂದ ಸುಮಾರು ಒಂದು ಕೋಟಿ ರೂಪಾಯಿ ಸರಕಾರಕ್ಕೆ ಬರುವುದು. ಆದರೆ ಹೊಸ ರಸ್ತೆಮಾಡುವಾಗ ಇರತಕ್ಕ ಶುಗರ್‌ಕೇನ್ ಸಾಗಿಸುವ ರಸ್ತೆ ಬಗ್ಗೆ ಹೊಸ ನಿಯಮಾವಳಿ ಮಾಡದೆ ಅವು ದುರಸ್ತಾಗಿಲ್ಲ. ಇದರಿಂದ ವಾಹನ ಸಂಚಾರಕ್ಕೆ ಹೆಚ್ಚು ಅನಾನುಕೂಲವಾಗಿದೆ. ಜನರಿಗೆ ಬಹಳ ತೊಂದರೆಯಾಗಿದೆ. ಆದುದರಿಂದ ಹೆಚ್ಚು ಜನಬಳಕೆಯಿರುವ ರಸ್ತೆಗಳಿಗೆ ಆದ್ಯತೆ ಕೊಡಬೇಕು. ಮಂಡ್ಯ ಜಿಲ್ಲೆಯಲ್ಲಿ ರಸ್ತೆಗಳು ಜಾಸ್ತಿಇರುವುದರಿಂದ ಸ್ಪೆಷರ್ ರೆಪೇರ್ಸ್‌ಗೆ ಇರಿಪೇಷನ್ ಟ್ಯಾಕ್ಸ್ ರಸ್ತೆಗಳಿಗೆ ಹಣ ಒದಗಿಸಬೇಕೆಂದು ಕೇಳಿ ಕೊಳ್ಳುತ್ತೇನೆ.

ಆಹಾರದ ಹಂಚಿಕೆ ಬಗ್ಗೆ ಹೇಳಬೇಕಾದರೆ ಅದರ ಹಂಚಿಕೆಗೆ ಕೋ-ಆಪರೇಟಿವ್ ಸೊಸೈಟಿ ಮುಂತಾದುವುಗಳ ಮೂಲಕ ಹೆಚ್ಚು ತಕ್ಕ ವ್ಯವಸ್ಥೆ ಎಲ್ಲಾ ಜಿಲ್ಲೆಗಳಲ್ಲೂ ಮಾಡಿಲ್ಲ. ಇಂಥ ಪರಿಸ್ಥಿತಿಯಲ್ಲಿ ಸಗಟು ವ್ಯಾಪಾರ ವಹಿಸಿಕೊಳ್ಳುವುದಾದರೆ ಸಾಕಷ್ಟು ವ್ಯವಸ್ಥೆ ಮಾಡಬೇಕು. ಲೆವಿ ವಿಚಾರ ನೋಡಿದರೆ ಲೆವಿ ಕೊಟ್ಟವರು ಸಹ ಬತ್ತ ಒಂದು ಕಡೆಯಿಂದ ಇನ್ನೊಂದು ಕಡೆಗೆ ಶ್ರೀರಂಗಪಟ್ಟಣದಿಂದ ಮೈಸೂರಿಗೆ ಭತ್ತ ತರುವಾಗ ಕಾಲುಭಾಗ ಮತ್ತೆ ಕೊಡಬೇಕು, ಇದು ಅನ್ಯಾಯ. ಇದನ್ನು ಪುನರ್ವಿಮರ್ಶೆಮಾಡಬೇಕಾಗಿದೆ. ಲೆವಿ ಭತ್ತಕೊಟ್ಟವರು ಊಟಕ್ಕೆ ತೆಗೆದುಕೊರಿದು ಹೋಗುವುದಕ್ಕೆ ಅನೇಕ ನಿರ್ಬಂಧಗಳಿವೆ. ಭತ್ತ ತುಂಬಿಕೊಂಡು ಹಳ್ಳಿಗಳಿಂದ ಹೋಗುವಾಗ ಜುರ್ಮಾನೆ ಹಾಕುವುದು ತಪ್ಪಬೇಕು, ಸುಗ್ಗಿ ಕಾಲದಲ್ಲಿ ಇದರಿಂದ ತೊಂದರೆ. ಲೆವಿ ಕೊಟ್ಟವರು ಭತ್ತವನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ತೆಗೆದು ಕೊಂಡುಹೋಗಲು ಅವಕಾಶಮಾಡಬೇಕು.

ಕೈಗಾರಿಕಾ ಕ್ಷೇತ್ರದಲ್ಲಿ ಹೆಚ್ಚು ಪ್ರಗತಿ ಸಾಧಿಸಿಲ್ಲ. ಮಂಗಳೂರಿಗೆ ಫರ್ಟಿಲೈಜರ್ ಕಾರ್ಖಾನೆ ಬಂದಿರುವುದು ಸಂತೋಷಕಾರಕವಾದ ವಿಚಾರ. ರೇಷ್ಮೆ ಕೈಗಾರಿಕೆಯಲ್ಲಿ ರೇಷ್ಮೆ ಕ್ಲಾಮಗ್ಗದ ಬೋರ್ಡ್ ಸ್ಥಾಪನೆಯಾಗಿ ಮುಂದಾವರೆಯುವುದು ಒಳ್ಳೆಯದು. ಗ್ರಾಮಾಂತರ ಪ್ರದೇಶಗಳಲ್ಲಿ ವಸತಿ ಇಲ್ಲದಿರುವವರಿಗೆ ಸಹಾಯ ಮಾಡಬೇಕು. ಪಟ್ಟಣಗಳಲ್ಲಿ ಸೈಟು ಹಂಚುವ ಕೆಲಸ ನಡೆದಿದೆ. ಆದರೆ ನೀರಾವರಿ ಪ್ರದೇಶದಲ್ಲಿ ಸೈಟಿಗೆ ಜಮೀನು ಸೆರೆಕ್ಟ್ ಮಾಡುವುದು ಕಷ್ಟವಾಗಿದೆ. ಅನೇಕ ಹಳ್ಳಿಗಳಲ್ಲಿ ದೊಡ್ಡ ಹಿಡುವಳಿದಾರರ ಜಮೀನನ್ನು ಬಿಟ್ಟು ಉಳಿದ ಸ್ವಲ್ಪ

ಜಪ್ತಿಮಾಡಿರುವವರ ಜಪ್ತಿಯನ್ನು ಪ್ರಪೋಸ್ ಮಾಡುತ್ತಿರುವುದರಿಂದ ಸಣ್ಣ ಜಪ್ತಿದಾರರಿಗೆ ಜೀವನಕ್ಕೆ ಮಾರ್ಗವಿಲ್ಲದಂತಾಗಿದೆ. ಇದನ್ನು ತಪ್ಪಿಸಬೇಕು. ಸ್ಟೇಟು ಗಳನ್ನು ಮಾಡಿ ಹಂಚುವ ಕಡೆ ಬೇಕಾದಷ್ಟು ಜಪ್ತಿನು ಯಾರಿಗಿದೆಯೋ ಅವರ ಜಪ್ತಿನಿನ್ನಲ್ಲಿ ಕೆಲವು ಭಾಗ ಅಕ್ವೈರ್ ಮಾಡಿಕೊಳ್ಳ ಬೇಕು. ಒಂದು ಗ್ರಾಮದಲ್ಲಿ ನೂರಾರು ಜನರು ಅರ್ಜಿ ಹಾಕಿದರೆ 40 ಜನರಿಗೆ ಕೊಡುವರು. ಸಣ್ಣಪುಟ್ಟ ಮನೆಗಳಲ್ಲಿ ಗ್ರಾಮಾಂತರಗಳಲ್ಲಿ ಐದಾರು ಜನರು ವಾಸಮಾಡುವರು. ಒಬ್ಬರಿಗೆ ಆ ಮನೆ ಬಿಟ್ಟು ಇತರರಿಗೆ ನಿವೇಶನ ಕೊಡಬೇಕಾದ್ದು ನ್ಯಾಯವಾದುದು. ಒಂದು ಸಾರಿ ಹಂಚಿದ ಮೇಲೆ ಪುನಃ ನಿವೇಶನ ಹಂಚುವ ಯೋಜನೆ ಮಾಡುವುದು ಕಷ್ಟ. ಆದುದರಿಂದ ಗ್ರಾಮಗಳಲ್ಲಿ ಬರುವ ಎಲ್ಲಾ ಅರ್ಜಿಗಳನ್ನೂ ಪರಿಶೀಲಿಸಿ ಅವರಿಗೆ ಪುಕ್ಕಟ್ಟೆಯಾಗಿ ಕೊಡುವುದಕ್ಕೆ ಸಾಧ್ಯವಿಲ್ಲದಿದ್ದರೆ ನಾಮಿನಲ್ ರೇಟಿಗಾದರೂ ಕೊಡುವ ವ್ಯವಸ್ಥೆಮಾಡಬೇಕು. ಯಾವ ಕಾರಣದಿಂದಲೂ ಸಣ್ಣ ಹಿಡುವಳಿದಾರರ ಜಪ್ತಿನನ್ನು ಆಕ್ವೈರ್ ಮಾಡಬಾರದು. ನಾನಾ ಕಾರಣಗಳ ಒತ್ತಡದಿಂದ ಅಧಿಕಾರಿಗಳು ದೊಡ್ಡವರ ಜಪ್ತಿನನ್ನು ಬಿಟ್ಟು ಸಣ್ಣವರ ಜಪ್ತಿನನ್ನು ಆಕ್ವೈರ್ ಮಾಡಲು ಪ್ರಪೋಸ್ ಮಾಡುವುದು ತಪ್ಪಬೇಕು.

ಇಂಡಿಯನ್ ಮೆಡಿಸಿನ್ ಬಗ್ಗೆ ಪ್ರಗತಿ ಸಾಧಿಸಿರುವುದು ಒಳ್ಳೆಯದು. ಇಡೀ ದೇಶದಲ್ಲಿ ಮೊಟ್ಟಮೊದಲು ಯೂನಿವರ್ಸಿಟಿ ಆಫ್ ಹೆಲ್ತ್ ಸೈನ್ಸ್ ನಮ್ಮ Stateನಲ್ಲಿ ಬರಲಿರುವುದು ಹೆಮ್ಮೆಯ ವಿಚಾರ. ನ್ಯಾಷನಲ್ ರೂರಲ್ ಮತ್ತು ಅರ್ಬನ್ ವಾಟರ್ ಸಪ್ಲೈ ಪ್ರೋಗ್ರಾಂ ವಿಚಾರದಲ್ಲಿ ಹೇಳಬೇಕಾದರೆ 72-73ನೆಯ ಸಾಲಿನಲ್ಲಿ ಅನೇಕ ಗ್ರಾಮಗಳಲ್ಲಿ ಹಣ ಕಟ್ಟಿ ಮಂಜೂರು ಮಾಡಿಸಿಕೊಂಡರು, ಬಜೆಟ್ಟ್ ಜಾಸ್ತಿ ಖರ್ಚಾಗಿದೆ, ಆದುದರಿಂದ ಹೊಸದಾಗಿ ಕೊಡಲು ಆಗುವುದಿಲ್ಲವೆಂದು ಹಣಕಾಸಿನ ಇಲಾಖೆ ತಿರಸ್ಕಾರ ಮಾಡುತ್ತಿದೆ. ಇದನ್ನು ಗಮನಿಸಿ ನೀರಾ ನರಬರಾಯ ಯೋಜನೆಯನ್ನು ಹಳ್ಳಿಗಳಿಗೆ ಮತ್ತು ಪಟ್ಟಣಗಳಿಗೆ ಅನ್ವಯಿಸಬೇಕು. ಸಹಕಾರ ಸಂಘಗಳು ಸಾಕಷ್ಟು ಬೆಳೆದು ಮುಂದೆ ಆಹಾರದ ಸಗಟು ವ್ಯಾಪಾರ ಸರಕಾರ ವಹಿಸಿಕೊಂಡಾಗ ಹಂಚಿಕೆ ಜವಾಬ್ದಾರಿಯನ್ನು ಅವು ನಿರ್ವಹಿಸುವುವು, ಒಳ್ಳೆಯ ರೀತಿಯಲ್ಲಿ ಈ ದೆಶೆಯಲ್ಲಿ ಕೆಲಸ ಮಾಡುವುವು ಎಂದು ನಾನು ಆಶಿಸುತ್ತೇನೆ.

ನಿರುದ್ಯೋಗ ಸಮಸ್ಯೆಯನ್ನು ಸಂಪೂರ್ಣವಾಗಿ ನಿವಾರಣೆ ಮಾಡಲು ಸಾಧ್ಯವಿಲ್ಲ ಎಂಬುದು ನನ್ನ ಭಾವನೆ. ಕಾಲೇಜುಗಳನ್ನು ಹೆಚ್ಚಿಸುವುದು, ಮೆಡಿಕಲ್ ಕಾಲೇಜು ಮತ್ತು ಟೆಕ್ನಿಕಲ್ ಕೋರ್ಸುಗಳನ್ನು ಹೆಚ್ಚಾಗಿ ಓಪನ್ ಮಾಡುವುದು ಪ್ರಯೋಜನಕಾರಿಯಲ್ಲ. ಮೆಡಿಕಲ್ ಕಾಲೇಜಿನಲ್ಲಿ ಸೀಟುಗಳನ್ನು ಸ್ವಲ್ಪ ಹೆಚ್ಚಿಸಿದರೆ ಒಳ್ಳೆಯದು. ಸರಕಾರಿ ಶಾಲೆಗಳ ಜೊತೆಗೆ ತಾಲ್ಲೂಕುಬೋರ್ಡ್ ಮತ್ತು ಮುನಿಸಿಪಾಲಿಟಿಗಳಿಗೆ ಸಂಬಂಧಪಟ್ಟ ಹೈಸ್ಕೂಲುಗಳು ಬೇಕಾದಷ್ಟಿವೆ. ಟೀಚರ್ಸ್ ಕೊರತೆ ಯಾವಾಗ ಮುಗಿಯುವುದೋ ಯಾವಾಗ ಸಮಸ್ಯೆ ಬಗೆಹರಿಯುವುದೋ ಗೊತ್ತಿಲ್ಲ. ಮುನಿಸಿಪಲ್ ಹೈಸ್ಕೂಲಿನಲ್ಲಿ 25 ವರ್ಷ ಕೆಲಸಮಾಡಿದರೂ ಪ್ರಮೋಷನ್ ದೊರೆಯುತ್ತಿಲ್ಲ, ಇಂಥ ಉಪಾಧ್ಯಾಯರಿದ್ದಾರೆ. ಈ ಶಾಲೆಗಳಿಗೆ ಸುಣ್ಣಬಣ್ಣ ಹಚ್ಚಬೇಕಾದರೆ ಟೇಕ್‌ಓವರ್ ಕೆಲಸ ಇನ್ನೂ ಮುಗಿದಿಲ್ಲ. ಇದಕ್ಕೆಷ್ಟು ವರ್ಷ ಬೇಕು ? ನಮ್ಮ ಊರ ಶಾಲೆ ವಿಚಾರ ತೆಗೆದುಕೊಂಡರೆ ಅದರ ಕಟ್ಟಡದ ಕಿಟಕಿಗಳು ಮತ್ತು ಪಟ್ಟಿರುಗಳ ಮುರಿದುಹೋಗಿವೆ, ರಿಪೇರಿಗೆ ಹಣ ಕೊಟ್ಟಿಲ್ಲ ಎಂದು ಹೇಳುತ್ತಾರೆ. ವಿದ್ಯಾ ಕ್ಷೇತ್ರದಲ್ಲಿ ಅನೇಕ ಜಟಿಲ ಪ್ರಶ್ನೆಗಳಿವೆ. ಅವನ್ನು ಬೇಗ ಇತ್ಯರ್ಥಮಾಡಬೇಕು. ಸೆಕೆಂಡರಿ ಶಾಲೆಗಳಿಗೆ ಮತ್ತು ಯೂನಿವರ್ಸಿಟಿಗೆ ಹೆಚ್ಚು ಹಣ ಕೊಡುವರು. ಆದರೆ ಪ್ರೈಮರಿ ಶಾಲೆಗಳ ಕಡೆ ಸಾಕಷ್ಟು ಗಮನಕೊಟ್ಟಿಲ್ಲ, ಪ್ರತಿಯೊಂದು ಊರಿನಲ್ಲೂ ವಿದ್ಯಾರ್ಥಿಗಳ ಸಂಖ್ಯೆ ನಾಲ್ಕೈದರಷ್ಟು ಜಾಸ್ತಿಯಾಗಿದೆ. ಪೂರ್ವದಲ್ಲಿದ್ದ ಕಟ್ಟಡಗಳಲ್ಲೇ ಶಾಲೆಗಳು ನಡೆಯುತ್ತಿವೆ. ಮಕ್ಕಳ ಆರೋಗ್ಯಕ್ಕೆ ಹಾನಿಯಾಗುವಂತಿರುವ ಕಟ್ಟಡಗಳಲ್ಲಿ ಶಾಲೆಗಳು ಅನೇಕ ಕಡೆ ನಡೆಯುತ್ತಿವೆ. ಆದುದರಿಂದ ಪ್ರೈಮರಿ ಶಾಲೆ ಕಟ್ಟಡಗಳ ಜವಾಬ್ದಾರಿ ಸರಕಾರ ವಹಿಸಿಕೊಳ್ಳಬೇಕು. ಹಳೆಯ ಕಟ್ಟಡಗಳು ಬಿದ್ದುಹೋದಮೇಲೆ ಮಕ್ಕಳ ಪ್ರಾಣಹಾನಿಯಾದಮೇಲೆ ಗಮನಕೊಡುವುದು ಸರಿಯಲ್ಲ. ಆದುದರಿಂದ ಶಾಲಾಕಟ್ಟಡಗಳು ಎಲ್ಲಿ ಸರಿಯಾಗಿಲ್ಲವೆಂಬುದನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

[Madam Speaker in the Chair]

†Sri N. B. SIRDESAI (Khanapur).—Madam Speaker, As in the past few years, the Governor of Mysore has delivered his speech or read out his speech prepared by the Government. Madam, I am not

(SRI N. B. SIRDESAI)

here to criticise the Government. But I want to point out some of the defects in the administration and suggest some concrete steps for the improvement of the administration of this Government. I must confess, madam, that this Government has tried its level best for overcoming the drought situation but their efforts are falling short because they are lacking in farsightedness and because of the slackness in administration. Now, just to please the people and to fulfil the assurances given at the time of Election, haphazardly and hurriedly this Government is taking up some schemes without caring for the far-reaching effects of their actions to overcome the drought situation. Government must also attach importance to the unaffected areas and take up some works there. Just as a precautionary measure is taken in the case of apidemics, while considering drought situation, they must think what has occurred and why it has occurred. The drought situation has occured mainly because of the failure of rains, but it is not the only reason for the drought situation. Government have failed to take precautionary measures or preventive measures. If they had taken these precautionary measures, they could have avoided or ameliorated the drought condition. Drought and famine are not new events to India. They had occurred in the past also. So, this Government could have taken precautionary measures and could have been more vigilant by taking recourse to minor and major irrigation projects and they could have constructed barrages in the rivers and 'nalas' for storage of water. They could have desilted the thanks and deepended the existing water wells and thus met the problem of scarcity of drinking water. This would have been an essential measure in the less rainfall areas and a preventive measure in the more rainfall areas. Now the Government have become alert and they are digging out wells when they are feeling thirsty.

Secondly, Madam, during the drought situation, the Government must exercise full control over the supply and distribution of foodgrains. They have failed in this because they have not maintained the price level and they have not purchased the foodgrains in the open market. So, the flow of supply is less. Government should have commenced this famine relief work well in advance. They should have declared the drought hit areas well in advance; some more precautionary measures could have been taken by the public also. Now, the Government must take up works of a permanent nature which would serve the purpose now and will act as a preventive measure in future. Now, the responsibility of the Government does not end by commencing the relief measures only. They must exercise strict vigilance over the utilisation of Government money. It is a well-known fact that the Public Works Department stands first in strangling away the public money. The works constructed during the British regime and the works constructed in the historic and pre-historic periods have lasted till this day, but the works which are being constructed in the post-

indepedence days require repairs the vary next year. This is because of the connivance of the Government and this shows that Government are not exercising strict vigilance over the departmental people. They are creating big graging lands for the P. W. D. officials and it is but natural for us to criticize the Government because they will be creating a number of episodes of the type of Sharavathi Project.

Now, Madam, I do sympathise with my brothers and sisters in the drought hit areas. I rendered all possible help to those who approached me.

In the course of my speech, it will not be out of way if I make a passing reference to the situation in my taluka. My taluk is a forest-covered hilly taluka. Though my taluka gets heavy rainfall, it is always met with scarcity conditions because, being a forest taluka, it is infested with wild animals and each year, over 50 per cent of the crops are being damaged by the wild animals. Whatever they get is not even sufficient for a period of four months and for the rest of the period they have to go out of the taluka in search of vocations. The cultivators there are using loin cloth and a piece of cloth to cover their heads. So far, the Government have neglected my taluka. They have not taken up any works in my taluka, because of various reasons. There are mainly two reasons ; one is political reasons and another is the drought situation. For political reasons because, in my taluka majority of the people are Marathi-speaking people and they have expressed their wishes to join Maharashtra and this Government thinks that their money will go in vain if some work is taken up there. I request this Government to abandon this parochialism and just on humanitarian grounds they should take up some works, because we are Indians wherever we may be and we will stand by our Mysorean brothers and sisters in times of need and extend our hand of help to them in their times of difficulties. They should not be so harsh towards the Marathi-speaking people and they should not pressurise the Central Government for the retention of Marathi-speaking areas in Mysore, since they are not in a position to give treatment on par with other Mysoreans.

I am afraid, even the Central Government is misled by this Government as regards the border issue. That is why the Central Government is not finalising this issue.

5-00 P. M.

The second reason is Drought Situation. I do agree that this Government should concentrate attention upon drought hit area in a situation like this. But that does not mean that the neglected areas should always be neglected and now also to be neglected and no work should be taken up there. It does not mean that.

My taluk has to face scarcity of drinking water always and drinking water wells have gone dry since November and for the rest of the deriod, the people have to go to distant places for bringing

(SRI N. B. SIRDESAI)

drinking water. Now, at least to provide sufficient employment to the people in the drought hit areas, I request this Government that in my taluka more works should be taken up as a preventive measure further both outside and inside the taluka development works should also be taken up in the Khanapur taluk.

As regards the introduction of Kannada language as the official language, we have no objection for the same being introduced in the Kannada area, but not in marathi area. They have introduced Kannada in the Marathi areas, also and declared our areas as bilingual areas. This would be going back upon their promise or orders, that Kannada language will not be forced upon the bilingual area.

As regards, irrigation, I would like to request the Government that employment should be provided to the people by constructing a Dam at Asoga village on Malaprabha River in Khanapur taluk as a drought relief measure and if that is done, Government would be able to solve the unemployment problem successfully. Otherwise, it means that it will be proved to be a slogan only.

As regards, communication, I am glad that this Government has taken up some road works under R. C. programme. I would like to request this Government in this respect that the Government sites, cart tracks and cattle paths should be made over to the people who have willingly surrendered lands for the construction of roads. More work should be undertaken in the malnad areas.

As regards industries, there is wide scope in Khanapur Taluk for starting a cement factory, iron ore factory and a sugar factory for providing employment to the people. This Government has not cared to establish such factories.

As regards, N.R.W.S., people have come forward to pay 10 per cent contribution and I request that these works should be started in the villages of Olmani, Londa, Kasaba-Nandgad and in addition to this, development works should also be undertaken in those places.

As regards education, I request that the primary teachers should not be transferred to distant places as a policy matter, because it would be injustice to them. I also request that more schools should be opened in the Malnad areas like Khanapur Taluk.

As regards secondary education, I would request that the Government high schools should be opened in the various areas like Jamboti, Kankumbi, and Gunji in Khanapur taluka.

Now as regards Junior Colleges, the post of post-graduate teachers were advertised by the Managing Committee of the Maratha Mandala Belgaum and no applications were received. So experienced teachers are continued and they are asked to teach the junior college

classes. I request the Government to allow their continuance because the experienced teachers are far superior to the post-graduates who have taken their degrees just now.

As regards the Yuvaka Mandals, I would like to request the Government to grant some lands to make them self-sufficient and do social duties.

As regards arrears of payment of emoluments to patels, Samadies, Mahars and Kolkars ; the village officers. One M. P. is trying to extract money from the poor downtrodden people and Government should exercise vigilance and issue strict instructions to the Asst. Commissioner, Belgaum, not to keep this matter pending, because he is delaying this matter. He should be taken to task. There should be fairness and justice in this and payment should be made as early as possible to these people by cheques only.

Lastly, I request the Mysore brethren and sisters that they should give up their obstinacy. They should not press the Central Government for the retension of marathi areas in Mysore State and they should allow us to join Maharashtra. We will stand by them as true Indiane for ever. And the assurances given by this Government should not prove only slogans. That is my request to this Government.

With these words, I thank the Chair and conclude.

† ಶ್ರೀ ಎ. ವಿ. ಮುನಿಸ್ವಾಮಿ (ಮಾಲೂರು) ;—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಸುಬ್ಬಯ್ಯ ಶೆಟ್ಟರು ತಂದಿರುವ ನಿರ್ಣಯವನ್ನು ಅನುಮೋದಿಸುತ್ತಾ ನಾನು ಕೆಲವು ಮಾತುಗಳನ್ನು ಆಡಲಿಚ್ಚಿಸುತ್ತೇನೆ. ಈಗ 3-4 ದಿವಸದಿಂದ ಈ ಸದನದಲ್ಲಿ ಸನ್ಮಾನ್ಯ ಸದಸ್ಯರು ಹೇಳಿದ ವಿಚಾರಗಳನ್ನು ಕೇಳಿ ನನಗೆ ಒಂದು ವಿಷಯ ಜ್ಞಾಪಕ ಬರುತ್ತದೆ. "When Rom was burning Niro was fiddling" ಎಂದು ಹೇಳಿದಹಾಗೆ ನಮ್ಮ ದೇಶದಲ್ಲಿ ಒಂದುಕಡೆ ಕ್ಷಾಮ, ಒಂದು ಕಡೆ ನಿರುದ್ಯೋಗ, ಮತ್ತೊಂದು ಕಡೆ ಆಹಾರ ಧಾನ್ಯಗಳ ಏರಿಕೆ ಹೀಗಿರುವಾಗ ನಮ್ಮ ವಿರೋಧಪಕ್ಷದವರು ಬೇರೆ ಬೇರೆ ವಿಚಾರಗಳನ್ನು, ಬೇರೆ ಬೇರೆ ಸಮಾಚಾರಗಳನ್ನು ಸಭೆಯಲ್ಲಿ ತಂದು ವಾಕ್‌ಔಟ್ ಮತ್ತು ಧರಣಿ ಬೆದರಿಕೆಗಳನ್ನು ಹಾಕುತ್ತಿದ್ದಾರೆ. ಇದರಿಂದ ನಮ್ಮ ಅಪೋಸಿಷನ್ ಯಾವ ತರಹ ಕೆಲಸಮಾಡಬೇಕು ಎನ್ನುವುದನ್ನು ಮರೆತು ವರ್ತಿಸುತ್ತಿದ್ದಾರೆ ಎಂದು ನನಗೆ ಅನಿಸುತ್ತದೆ. ಯಾವ ದೇಶದಲ್ಲಿಯಾದರೂ ಅಪೋಸಿಷನ್ ಇರಲೇಬೇಕು. ಆದರೆ ಅದು ಹೇಗೆ ಇರಬೇಕೆಂದರೆ ಗಡಿಯಾರದಲ್ಲಿರುವ ಮೈನುಸ್ಪ್ರಿಂಗ್, ಹೇರ್‌ಸ್ಪ್ರಿಂಗ್ ಇದ್ದಹಾಗೆ ಇದು, ಸರ್ಕಾರವನ್ನು ರೆಗ್ಯುಲೇಟ್ ಮಾಡಬೇಕು. ಆ ರೀತಿ ವಿರೋಧಪಕ್ಷಗಳು ಇದ್ದರೆ ಅದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ನೀವು ಅಪೋಸಿಷನ್‌ಗೆ ಬುದ್ಧಿ ಹೇಳಬೇಡಿ.

Sri A. V. MUNISWAMY.—I know what to say; I will say. ವಿರೋಧಪಕ್ಷದ ನಾಯಕರು ಒಂದು ವಿಚಾರ ಹೇಳುತ್ತಾ ಅದೂರದೃಷ್ಟಿ ಮತ್ತು ವಿವೇಕದ ಅಭಾವ ಎಂದು ಹೇಳಿದರು. ನಾನು ಅದಕ್ಕೆ ಒಂದು ಉದಾಹರಣೆ ಹೇಳಬೇಕೆಂದಿದ್ದೇನೆ. ನಮ್ಮ ದೇಶಕ್ಕೆ ಬರುತ್ತಿರುವ ಆದಾಯದಲ್ಲಿ ಎರಡನೇ ಬಹುಭಾಗದ ಆದಾಯ ಪನಸಂಪತ್ತಿನಿಂದ ಬರುತ್ತಿದೆ. ಅವರ ಸರ್ಕಾರದವರು ದಾವಣಗೆರೆ ಪೋಲಿಷ್ಡ್ ಬರ್ ಫ್ಯಾಕ್ಟರಿಗೆ ಸೌದೆ ತೆಗೆದುಕೊಂಡು, ಆದರ ಚರ್ಮವೆಲ್ಲ ಸುಲಿದು ಅದನ್ನು ತೆಗೆದುಕೊಂಡು ಹೋಗುವುದಕ್ಕೆ ಬಿರ್ಲಾ ಕಂಪನಿಗೆ ಮೂರು ಟನ್ ಸೌದೆಗೆ 20 ರೂಪಾಯಿ ಕೊಟ್ಟಿದ್ದಾರೆ. ಮಾರುಕಟ್ಟೆಯಲ್ಲಿ ಒಂದು ಟನ್ ಸೌದೆಗೆ 70–80 ರೂಪಾಯಿ ಬೆಲೆ ಇವೆ. ಹೀಗೆ ಕೊಟ್ಟಿರುವುದು ದೂರದೃಷ್ಟಿಯೋ ಅಥವಾ ಆ ದೂರದೃಷ್ಟಿಯೋ ಎನ್ನುವುದನ್ನು ಮಾನ್ಯ ಸದಸ್ಯರು ಯೋಚನೆ ಮಾಡಬೇಕು.

(ಶ್ರೀ ಎ. ಪಿ. ಮುನಿಸ್ವಾಮಿ)

ನಮ್ಮದು ಮಜಾವಾದ, ನವಾಜವಾದವಲ್ಲ ಎಂದು ಮಾಜಿ ಅರ್ಥ ಸಚಿವರು ಹೇಳಿದ್ದಾರೆ. ನಮ್ಮ ಸರ್ಕಾರದವರು ಕ್ಷಾಮ ಪರಿಹಾರಕ್ಕೆ ಬೇಕಾದಷ್ಟು ದುಡ್ಡು ಖರ್ಚುಮಾಡುತ್ತಿದ್ದಾರೆ. ರಸ್ತೆಗಳನ್ನು ಮಾಡಿಸಿದ್ದಾರೆ, ನಾಲೆಗಳನ್ನು ಮಾಡಿಸಿದ್ದಾರೆ. ಒಡ್ಡುಗಳನ್ನು ಹಾಕಿಸಿದ್ದಾರೆ, ದನ ಕರುಗಳಿಗೆ ಮೇವನ್ನು ಸಾಗಿಸಿದ್ದಾರೆ, ಜನಗಳಿಗೆ ಆಹಾರವನ್ನು ಒದಗಿಸಿದ್ದಾರೆ. ವಿರೋಧ ಪಕ್ಷದವರು ಈ ಸರ್ಕಾರ ಏನೂ ಮಾಡಿಲ್ಲ ಎಂದು ಹೇಳುತ್ತಿದ್ದಾರೆ. ಇದಕ್ಕೆ ಮೊದಲು ಇದ್ದ ಸರ್ಕಾರ ಏನೂ ದುಡ್ಡು ಖರ್ಚುಮಾಡಲಿಲ್ಲವೇ? ಇದಕ್ಕಿಂತ ನಾಲ್ಕುಪಟ್ಟು ಹಣಖರ್ಚು ಮಾಡಿದ್ದಾರೆ. ಖರ್ಚು ಮಾಡುವಾಗ ಗುಲ್ಬರ್ಗ ಜಿಲ್ಲೆಯಲ್ಲಿ ಬೇಕಾದಷ್ಟು ಎಲೆಕ್ಟ್ರಿಸಿಟಿ ತೆಗೆದುಕೊಂಡಿದ್ದಾರೆ. ಅದನ್ನು ತೆಗೆದುಕೊಂಡಿರುವುದು ಇರ್ರಿಗೇಷನ್ನಿಗೆ, ಫ್ಯಾನುಗಳಿಗೆ, ರೆಫ್ರಿಜರೇಟರುಗಳಿಗೆ ಇಂಥದಕ್ಕೆ ಉಪಯೋಗಿಸಲು ತೆಗೆದುಕೊಂಡಿದ್ದಾರೆ. ವ್ಯವಸಾಯಕ್ಕೆ ಒಂದು ಚೂರೂ ಉಪಯೋಗಿಸಿಲ್ಲ. ಇದು ಮಜಾವಾದವೋ ಅಥವಾ ನಮ್ಮ ಸರ್ಕಾರದವರು ಮಾಡುತ್ತಿರುವುದು ಮಜಾವಾದವೋ ಎನ್ನುವುದನ್ನು ಸನ್ಮಾನ್ಯ ಸದಸ್ಯರು ವಿಚಾರ ಮಾಡಬೇಕು.

ಒಬ್ಬ ಎಂ.ಇ.ಎಸ್. ಸದಸ್ಯರು ನಿನ್ನೆ ಮಾತನಾಡುತ್ತಿದ್ದರು. ಅವರು ನಮ್ಮ ಸರ್ಕಾರವನ್ನು ಬಹಳವಾಗಿ ಟೀಕಿಸುತ್ತಿದ್ದರು, ಅವರು ಮಹಾರಾಷ್ಟ್ರಕ್ಕೆ ಹೋಗಬೇಕೆಂದು ಹೇಳುತ್ತಿದ್ದರು. ಬೆಳಗಾಂ ಅವರಿಗೆ ಬೇಕು ಎಂದು ಹೇಳುತ್ತಿದ್ದರು. ಬೆಳಗಾಂ ಅವರು ಏಕೆ ಕೇಳುತ್ತಿದ್ದಾರೆನ್ನುವುದನ್ನು ನಾವು ನೋಡಬೇಕಾಗಿದೆ. ಬೆಳಗಾಂ ಒಂದು ಲಷ್ಕರಿ. ಮಹಾರಾಷ್ಟ್ರದವರು ಹಿಂದೆ ಲಷ್ಕರಿಗೆ ಸೇರಿದಾಗ ಅಲ್ಲಿ ಬಂದು ನೆಲೆಸಿ ಈಗ ಬೆಳಗಾಂ ನಮ್ಮದೇ ಎಂದು ಹೇಳುತ್ತಿದ್ದಾರೆ. ಹಾಗೆಯೇ ಬೆಂಗಳೂರು ಕೂಡ ಅವರಿಗೆ ಸೇರಬೇಕೆಂದು ಕೇಳಬಹುದು. ಷಹಜಿ ಬೆಂಗಳೂರಿನಲ್ಲಿ ರಾಜ್ಯಭಾರ ಮಾಡುತ್ತಿದ್ದ ಎನ್ನುವ ಕಾರಣದ ಮೇಲೆ ಬೆಂಗಳೂರನ್ನು ಕೂಡ ಕೇಳಿಯಾರು. ಶ್ರೀಮಾನ್ ಅಯ್ಯಂಗಾರ್ ಅವರು ಕೆ. ಜಿ. ಎಫ್. ಪ್ರದೇಶ ತಮಿಳುನಾಡಿಗೆ ಸೇರಬೇಕೆಂದು ಕೇಳಬಹುದು. ಅಣ್ಣಾತಿಗಳೇ ಹೆಚ್ಚಾಗಿರುವಂಥ ದಂಡು ಪ್ರದೇಶವನ್ನು ಅಲ್ಲಿಂದ ಬಂದಿರುವ ಮಾನ್ಯ ಸದಸ್ಯರಾದ ಪೂನಲಿಂಗಂ ಅವರು ಮದ್ರಾಸಿಗೆ ಸೇರಿಸಬೇಕೆಂದು ಕೇಳಬಹುದು. ಗೋವ ತಮಗೆ ಸೇರಬೇಕು ಎಂದು ಹೇಳುತ್ತಿದ್ದ ಮಹಾರಾಷ್ಟ್ರದವರು ಅದರಲ್ಲಿ ಯಶಸ್ವಿಗಳಾಗಲಲ್ಲ. ನಮ್ಮ ರಾಜ್ಯವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಿರುವುದರಲ್ಲಿಯೂ ಅವರು ಯಶಸ್ವಿಗಳಾಗುವುದಿಲ್ಲ, ಇದರಲ್ಲಿ ಯಾವ ಸಂದೇಹವೂ ಇಲ್ಲವೆಂದು ಹೇಳುತ್ತೇನೆ.

ಇನ್ನೊಬ್ಬ ಎಂ.ಇ.ಎಸ್. ಸದಸ್ಯರು ಮಾತನಾಡುತ್ತ ನಾವು ನಿಮಗೆ ಸಹಾಯ ಹಸ್ತ ನೀಡುತ್ತೇವೆ ಎಂದು ಹೇಳಿದರು. ಚರಿತ್ರೆಯನ್ನು ಹಿಂತಿರುಗಿಸಿ ನೋಡಿದರೆ 1799ರಲ್ಲಿ ಮರಾಠಿಯವರು ನಮಗೆ ಎಷ್ಟು ಸಹಾಯ ನೀಡಿದ್ದಾರೆಂಬುದನ್ನು ಜ್ಞಾಪಕ ಮಾಡಿಕೊಳ್ಳಬಹುದು. ಆಗ ಬ್ರಿಟಿಷರು ಮೈಸೂರಿನ ದೊರೆಯಾಗಿದ್ದ ಟಿಪ್ಪು ಸುಲ್ತಾನರ ಮೇಲೆ ಯುದ್ಧ ಘೋಷಣೆ ಮಾಡಿದಾಗ ಮಹಾರಾಷ್ಟ್ರ ಸ್ನೇಹಿತರು ಇಂಗ್ಲೀಷರ ಜೊತೆಯಲ್ಲಿ ಸೇರಿಕೊಂಡು ನಮ್ಮ ಮೈಸೂರು ರಾಜರನ್ನು ಸೋಲಿಸಿ, ಹೈದರಾಬಾದು ಭಾಗವನ್ನು ಅಲ್ಲಿನ ನಿಜಾಮರಿಗೆ ಕೊಟ್ಟು, ಬೊಂಬಾಯಿ ಭಾಗದ ಕೆಲವು ಜಿಲ್ಲೆಗಳನ್ನು ತಾವು ತೆಗೆದುಕೊಂಡರು. ಇಂಥ ಸಹಾಯ ಮಹಾರಾಷ್ಟ್ರದವರು ಮಾಡುತ್ತಾರೆ. ಇನ್ನೊಂದು ಸಮಯದಲ್ಲಿ ನಾವು ಮೊದಲು ಭಾರತೀಯರು ಎಂದು ಹೇಳುತ್ತಾರೆ. ಹಾಗೆ ಏಕೆ ಹೇಳುತ್ತಾರೆಂದರೆ ಮೈಸೂರು ಸಂಸ್ಥಾನದಲ್ಲಿ ಬಹಳ ಜನ ಮರಾಠಿಯವರು ಇದ್ದಾರೆ. ಅವರನ್ನು ಇಲ್ಲಿಯೇ ಉಳಿಸುವುದಕ್ಕಾಗಿ ನಾವೆಲ್ಲ, ಭಾರತೀಯರು, ಬೆಳಗಾಂ ತೆಗೆದುಕೊಳ್ಳುವುದಕ್ಕೆ ಮಹಾರಾಷ್ಟ್ರದವರು ಎಂದು ಹೇಳುತ್ತಾರೆ. ಬೆಳಗಾಂ ತೆಗೆದುಕೊಳ್ಳುವುದಕ್ಕೆ ನಮ್ಮ ದೇಶದಲ್ಲರುವ ಮರಾಠಿಯವರನ್ನೂ ಬಗಲಲ್ಲಿ ಇಟ್ಟುಕೊಂಡು ಹೋಗುವುದಾದರೆ, ಸ್ವಲ್ಪ ಬಿಟ್ಟು ಕೊಡಬಹುದು. ಅವರನ್ನೆಲ್ಲ ಇಲ್ಲಿಯೇ ಉಳಿಸಿ ಬೆಳಗಾಂ ಮಾತ್ರ ಬೇಕು ಎನ್ನುವುದಾದರೆ ಅದನ್ನು ಕೊಡುವುದಕ್ಕೆ ಸಾಧ್ಯವಾಗಲಾರದು. ಮಹಾರಾಷ್ಟ್ರದವರೇ ಪ್ರೇರೇಪಣೆಮಾಡಿ ನೇಮಿಸಿದಂಥ ಮಹಾಜನ್ ಕಮೀಷನ್ನಿನವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯನ್ನೇ ಇವರು ವಿರೋಧಿಸುತ್ತಿರುವುದು ಬಹಳ ಶೋಚನೀಯವಾದ ವಿಚಾರ.

ಇನ್ನು ಕೋಲಾರ ಜಿಲ್ಲೆಯ ವಿಚಾರವಾಗಿ ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಆಂಧ್ರದವರು ನಾಗಾರ್ಜುನಸಾಗರ ಕ್ರೆಸ್ಟ್ ಗೇಟುಗಳನ್ನು ತಾತ್ಕಾಲಿಕವಾಗಿ ಈಗ ಪಬ್ಲಿಕ್ ವರ್ಕ್ಸ್ ಮಂತ್ರಿಗಳಾಗಿರುವ ಚನ್ನಬಸಪ್ಪನವರು ಬಹಳ ಕಟುವಾಗಿ ಟೀಕೆಮಾಡುತ್ತಿದ್ದರು. ಮೈಸೂರಿಗೂ ಮದ್ರಾಸಿಗೂ ಹಿಂದಿನ ಕಾಲದಲ್ಲಿ ಒಂದು ಒಪ್ಪಂದವಾಗಿತ್ತು. ಆಗ ನಮ್ಮ ಮೈಸೂರು ರಾಜ್ಯದ

ಅರಸರು ಬ್ರಿಟಿಷರಿಗೆ ಅಡಿಯಾಳಾಗಿ ಇದ್ದರು. ರೆಸಿಡೆಂಟರು ಇಲ್ಲಿ ಇದ್ದಾಗ ಮೈಸೂರಿಗೆ ಧಕ್ಕೆ ಬರುವ ರೀತಿಯಲ್ಲಿ ಒಂದು ಒಪ್ಪಂದ ಮಾಡಿಕೊಂಡಿದ್ದಾರೆ. ಮಳೆ ಬೀಳುವುದು ನಮ್ಮಲ್ಲಿ, ನದಿ ಹರಿಯುವುದು ನಮ್ಮಲ್ಲಿ. ಆ ನೀರನ್ನು ನಾವು ಉಪಯೋಗ ಮಾಡಿಕೊಳ್ಳಬೇಕಾದರೆ ಅದಕ್ಕೆ ತಮಿಳುನಾಡು ಸರ್ಕಾರದ ಪರ್ಮಿಷನ್ ಬೇಕು ಎಂದು ಹೇಳುತ್ತಿರುವುದು ಶೋಚನೀಯವಾದ ವಿಚಾರ. ಮಾರ್ಕಾಂಡೇಯ ರಿಸರ್ವಾಯರ್ ಕಟ್ಟುವುದಕ್ಕೆ ನಮ್ಮ ತಾಲ್ಲೂಕಿನಲ್ಲಿ ಭೂಮಿ ಮುಳುಗಡೆಯಾಗಿ ಬಂಗಾರುಪೇಟೆ ತಾಲ್ಲೂಕಿನಲ್ಲಿ ಜಮೀನು ಸಾಗುವಳಿಯಾಗುತ್ತದೆ. ಇನ್ನೊಂದು ವ್ಯಾಲಯಲ್ಲಿ ಮದ್ರಾಸಿನವರು ಆಣೆಕಟ್ಟು ಕಟ್ಟುವುದಕ್ಕೆ ಪ್ರಾರಂಭಮಾಡಿದ್ದಾರೆ. ಅದರಿಂದ ಪೂರ್ತಿ ಅವರಿಗೇ ಸಹಾಯವಾಗುತ್ತದೆ. ಇವೆರಡಕ್ಕೂ ಮಧ್ಯ ಒಂದು ವ್ಯಾಲಿ ಇದೆ. ಅದಕ್ಕೆ ಒಂದು ಆಣೆಕಟ್ಟನ್ನು ಕಟ್ಟಿದರೆ ನಮ್ಮ ತಾಲ್ಲೂಕಿನಲ್ಲಿ ಒಂದು ಸಾವಿರ ಎಕರೆ ಬಂಗಾರಪೇಟೆ ತಾಲ್ಲೂಕಿನಲ್ಲಿ ಒಂದು ಸಾವಿರ ಎಕರೆ ನೀರಾವರಿಯಾಗುತ್ತದೆ. ಅಧಿಕಾರ ವರ್ಗದವರಲ್ಲಿ ಈ ವಿಚಾರಕ್ಕೇಳಿದರೆ ಅಗ್ರಿಮೆಂಟ್ ಜೋನ್‌ನಲ್ಲಿ ಬರುತ್ತದೆ, ನಾವು ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಇದು ನಮ್ಮ ಧರ್ಮವೀರ ಷಾಹಿ ಅಧಿಕಾರಿಗಳ ಧೋರಣೆ. ಇದರಿಂದ ಪ್ರಜಾಪ್ರಭುತ್ವಕ್ಕೆ ಬಹಳ ಧಕ್ಕೆಯಾಗುತ್ತದೆ. ಕೆರೆ ನಾಯಕನಿಗೆ ದೊಣೆ ನಾಯಕನ ಅಪ್ಪಣೆಯೇ ಎನ್ನುವಂತೆ ಮದ್ರಾಸ್ ಸರ್ಕಾರವನ್ನು ಕೇಳಿ ನಮ್ಮ ನೀರನ್ನು ನಾವು ಉಪಯೋಗಿಸಿಕೊಳ್ಳಬೇಕು ಎನ್ನುವುದು ಶೋಚನೀಯ. ನಮ್ಮ ಸರ್ಕಾರದವರು ತಕ್ಕ ಏರ್ಪಾಡುಮಾಡಿ, ನಮ್ಮ ನೀರನ್ನು ನಾವು ಉಪಯೋಗಿಸಿಕೊಳ್ಳುವುದಕ್ಕೆ ಯಾರನ್ನೂ ಕೇಳದೆ ತಕ್ಷಣ ಪ್ರಾಜೆಕ್ಟ್‌ಗಳನ್ನು ಮಾಡಿ ನಮ್ಮ ಜನಗಳಿಗೆ ಅನುಕೂಲ ಮಾಡುವುದಕ್ಕೆ ಪ್ರಯತ್ನ ಪಡಬೇಕು.

ಸಹಕಾರ ವಿಚಾರದಲ್ಲಿ ಮಾತನಾಡುತ್ತ ಒಬ್ಬ ಸದಸ್ಯರು ಸಹಕಾರ ಸಂಘಗಳು ಇಲ್ಲವೇ ಇಲ್ಲ ಎಂದು ಹೇಳಿದರು. ಕೋ ಆಪರೇಟಿವ್ ಸೊಸೈಟಿಗಳು ಇಲ್ಲದೆ ಇರುವಂತೆ ಆಗಿರುವುದಕ್ಕೆ ಕಾರಣ ಸರ್ಕಾರದವರ ಗುಂಪುಗಾರಿಕೆಯ ಧೋರಣೆ. ಸೊಸೈಟಿಗಳಲ್ಲಿ ಅವರ ಗುಂಪಿನವರನ್ನೇ ಸೇರಿಸಿ, ನಾಮಿನೇಟ್ ಮಾಡಿಸಿ, ಸೊಸೈಟಿಗಳನ್ನೆಲ್ಲ ಹಾಳು ಮಾಡಿದರು. ಈಗ ಸೆರಿಕಲ್ಚರ್ ಇಂಡಸ್ಟ್ರಿಯಲ್ ಸೊಸೈಟಿ ಎಂದು ಮಾಡಬೇಕೆಂದು ಸರ್ಕಾರ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಈಗಲಾದರೂ ಅದೇ ಗುಂಪಿನವರನ್ನು ಸೇರಿಸಿಕೊಂಡು ಸೊಸೈಟಿಗಳನ್ನು ಸ್ಥಾಪನೆ ಮಾಡಬೇಕೆನ್ನುವ ಧೋರಣೆಯನ್ನು ಬಿಟ್ಟು ಬೇರೆಯವರಿಗೂ ಅವಕಾಶ ಕೊಟ್ಟು ಚೆನ್ನಾಗಿ ಕೆಲಸ ಮಾಡುವುದಕ್ಕೆ ವ್ಯವಸ್ಥೆಮಾಡಬೇಕು! ನಮ್ಮ ಸರ್ಕಾರದವರು ಈಗಲಾದರೂ ಸೊಸೈಟಿಗಳನ್ನು ಹಾಳು ಮಾಡಿರುವವರನ್ನು ಪತ್ತೆ ಹಚ್ಚಿ ಅವರಿಗೆ ತಕ್ಕ ಶಿಕ್ಷೆ ಕೊಡಬೇಕು, ಮತ್ತು ಹೊಸದಾಗಿ ಮಾಡುವ ಸೊಸೈಟಿಗಳನ್ನು ಇಲಾಖೆಯವರಿಗೆ ಕೊಟ್ಟು ಅವರ ಮುಖಾಂತರ ಕೆಲಸ ಮಾಡಿಸಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶಕೊಟ್ಟು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಾಟಾಳ್ ನಾಗರಾಜ್ (ಚಾಮರಾಜಪೇಟೆ).—ಸನ್ಮಾನ್ಯ ಅಧ್ಯಕ್ಷರೇ, ಈ ಸಭೆಯಲ್ಲಿ ಬಹುಶಃ ಅನೇಕ ಸನ್ಮಿತ್ರರು ರಾಜ್ಯಪಾಲರ ಭಾಷಣದ ಬಗ್ಗೆ ವಿರೋಧ, ಪರ ಎಲ್ಲವನ್ನೂ ಮಾತನಾಡಿದ್ದಾರೆ. ಪ್ರಮುಖವಾದ ಒಂದು ಪ್ರಶ್ನೆ, ನಾನು ತಮ್ಮ ಮುಂದೆ ಒಂದು ಸಲಹೆಯ ರೂಪದಲ್ಲಿ ಹೇಳುತ್ತಿದ್ದೇನೆ. ವಿರೋಧ ಪಕ್ಷದ ನಾಯಕರಾದ ದೇವೇಗೌಡರು ಮೊನ್ನೆ ಮಾತನಾಡುವಾಗ ಈ ಮಂತ್ರಿಮಂಡಲದ ಬಗ್ಗೆ ತನಿಖೆ ನಡೆಯಬೇಕು ಎಂದು ಪ್ರಸ್ತಾಪಮಾಡಿ, ಹಾಗೆ ಮಾಡುವಾಗ ಹಿಂದೆ ಇದ್ದ ಮಂತ್ರಿಮಂಡಲದ ಮೇಲೂ ವಿಚಾರಣೆ ನಡೆಸಿ ಎಂದು ಸಲಹೆ ಹಾಕಿದರು. ನಾನು ಅವರ ನಿಲುವನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಬಹುಶಃ ಈ ಸರ್ಕಾರದ 11 ತಿಂಗಳ ಆಡಳಿತದಲ್ಲಿ, ಮಾನ್ಯ ಮುಖ್ಯಮಂತ್ರಿಗಳು ಆಡಳಿತವನ್ನು ವಹಿಸಿಕೊಂಡಾಗ, ಮಂತ್ರಿಗಳ ಆಸ್ತಿ ಪಾಸ್ತಿಯ ಬಗ್ಗೆ, ಮಂತ್ರಿಗಳ ನಡವಳಿಕೆಯ ಬಗ್ಗೆ ಈ ಸಭೆಗೆ ಲಿಕ್ಕ ಪತ್ರಗಳನ್ನು ಕೊಡುತ್ತೇನೆಂದು ಮೂರು ನಾಲ್ಕು ಬಾರಿ ಹೇಳಿದ್ದಾರೆ. ಈ ಹೊತ್ತಿನವರೆಗೂ ಆ ಲೆಕ್ಕ ಪತ್ರವಾಗಲೀ ಮಂತ್ರಿಗಳ ನಡೆನುಡಿ ನಡವಳಿಕೆಯ ಬಗ್ಗೆಯಾಗಲೀ ಯಾವುದೇ ವಿಧವಾದ ಮಾಹಿತಿಯನ್ನು ಈ ಸಭೆಗೆ ಕೊಟ್ಟಿಲ್ಲ.

ಮಾನ್ಯ ವಿರೋಧ ಪಕ್ಷದ ನಾಯಕರು ಚಾಲೆಂಜ್ ಮಾಡಿದ್ದಾರೆ. ಹಿಂದಿನ ಸರಕಾರ ಮತ್ತು ಈಗಿನ ಸರಕಾರದ ಎಲ್ಲಾ ಮಂತ್ರಿಗಳು ನಡೆಸಿರುತಕ್ಕ ಭ್ರಷ್ಟಾಚಾರಗಳ ಒಂದು ತನಿಖೆ ಆಗಬೇಕು ಎಂದು. ಏತಕ್ಕೆ ಸರಕಾರ ತನಿಖೆ ಮಾಡುವುದಕ್ಕೆ ಹೆದರಬೇಕು ಎಂದು ನಾನು ಕೇಳುತ್ತೇನೆ. ಈ ಸಭೆಯಲ್ಲಿ ಕೆ. ಹೆಚ್. ಪಾಟೀಲರೂ ಕೂತಿದ್ದಾರೆ, ಬನವಲಿಂಗಪ್ಪನವರೂ ಕೂತಿದ್ದಾರೆ. ಬನವಲಿಂಗಪ್ಪನವರು ದಿಟ್ಟ ನಿಲುವನ್ನು ತಳೆದಿರುತಕ್ಕಂಥವರು ಮತ್ತು ಒಳ್ಳೆಯ ಆಡಳಿತವನ್ನು ನಡೆಸುತಕ್ಕ ಮಂತ್ರಿಗಳು ಈ ಚಾಲೆಂಜನ್ನು ಖಂಡಿತ ಒಪ್ಪುತ್ತಾರೆ ಎಂದು ಅನಿಸುತ್ತದೆ. ತನಿಖೆ ನಡೆಸುವುದಕ್ಕೆ ಮುಖ್ಯಮಂತ್ರಿಗಳಲ್ಲಿ ತಾವೇ ಒತ್ತಾಯ ಮಾಡಿ ಈ ತನಿಖೆಯ ಅಯೋಗವನ್ನು ತಾವು

(ಶ್ರೀ ವಾಟಾಳ್ ನಾಗರಾಜ್)

ನೇಮಕ ಮಾಡದಿದ್ದರೆ ಬಹುಶಃ ಮಂಡಲವನ್ನು ಬಿಟ್ಟು ಹೋಗುತ್ತೇನೆ ಎನ್ನುವ ಮಟ್ಟಿಗೆ ಹೋಗಬೇಕು ಎಂದು ಹೇಳುತ್ತೇನೆ. ತಮ್ಮಲ್ಲಿ ಇದೇ ನಂಬಿಕೆ ಇಗಬೇಕಾದರೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಸವಾಲನ್ನು ಸರಕಾರದ ಪರವಾಗಿ ಒಪ್ಪಿ ಮಾನ್ಯ ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡುತ್ತೀರಾ ? ಆ ಸವಾಲನ್ನು ತಾವು ಒಪ್ಪುವುವಾದರೆ ಬಹುಶಃ ಸಮಾಜವಾದದ ಧೋರಣೆಯಲ್ಲಿ ತಾವು ಈ ರಾಜ್ಯದಲ್ಲಿ ಒಳ್ಳೆಯ ಆಡಳಿತವನ್ನು ನಡೆಸುತ್ತೀರಿ ಎಂದು ಜನನಿಮ್ಮನ್ನು ನಂಬುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ. —ನೀವು ಅವರನ್ನು ಹೊಗಳಿ ಹೊಗಳಿ ಶೂಲಕ್ಕೆ ಏರಿಸುತ್ತೀರಿ ?

ಶ್ರೀ ವಾಟಾಳ್ ನಾಗರಾಜ್.—ನಿಮಗೆ ಹೊಗಳುಭಟ್ಟರು ಹಿಂದೆ ಇದ್ದರೆ ನಾನು ನಿಷ್ಠೂರವಾಗಿ ಹೊಗಳುತ್ತೇನೆ. ನಾನು ತಮ್ಮ ಭಾಷಣಗಳನ್ನು ಕೇಳಿದ್ದೇನೆ. ತಾವು ಧಿರೋದತ್ತವಾಗಿ ಭಾಷಣಗಳನ್ನು ಮಾಡುತ್ತೀರಿ. ಆ ಭಾಷಣಗಳಿಗೆ ಬೇಕಾವಷ್ಟು ಟೀಕೆ ಟಿಪ್ಪಣಿಗಳು ಬಂದಿವೆ. ಈ ಒಂದು ಚಾರಿತ್ರಿಕ ಸಂದರ್ಭವನ್ನು ಮಾಡುವುದಕ್ಕೆ ತಾವು ಸಮರ್ಥರು ಎಂದು ಇಡೀ ಮಂತ್ರಿಮಂಡಲದ ಪರವಾಗಿ ಒಪ್ಪಿಕೊಳ್ಳಲೇಬೇಕು ಎಂದು ಹೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ. —ನಾಗರಾಜರವರಿಗಿನ್ನು ಸೋಲಿಸಿದವರನ್ನು ಹಿಂದಿನ ಸರಕಾರ ಜೈಲಿಗೆ ಕಳುಹಿಸುತ್ತೇವೆ ಎಂದು ಹೇಳುತ್ತಿದ್ದರು. ನೀವು ಅವರನ್ನು ಸೋಲಿಸಿ ಬಿಟ್ಟಿರಿ. ಆದುದರಿಂದ ಇವರು ಏನೂ ಹೇಳುವುದಿಲ್ಲ.

ಶ್ರೀ ವಾಟಾಳ್ ನಾಗರಾಜ. —ತಪ್ಪು ಮಾಡಿದವರು ಯಾರೇ ಆಗಿರಲಿ, ಏರೇಂದ್ರ ಪಾಟೀಲರೇ ಆಗಲಿ, ನಿಜಲಿಂಗಪ್ಪನವರೇ ಆಗಲಿ ಅಂಥವರಿಗೆ ಶಿಕ್ಷೆ ಆಗಲೇಬೇಕು ಎಂದು ಹೇಳುತ್ತೇನೆ. ಈ ಮಂತ್ರಿಮಂಡಲದ ಮೇಲೆ ನನಗೆ ಅಪಾರ ಗೌರವ ಇದೆ. ದಕ್ಷಮಂತ್ರಿಗಳು ಇದ್ದಾರೆ ಎಂದು ಅಂದುಕೊಂಡಿದ್ದೇನೆ. ಆ ಗೌರವವನ್ನು ಉಳಿಸಿಕೊಳ್ಳಬೇಕಾದರೆ ಜುಡಿಷಿಯಲ್ ಎನ್‌ಕ್ವೈರಿ ಮಾಡಿ ನೀವು ಲೀಡ್ ಕೊಟ್ಟರೆ, ಬಹುಶಃ ರಾಜ್ಯದಲ್ಲಿ 25 ವರ್ಷಗಳಿಂದ ಕಾಂಗ್ರೆಸ್ ಆಡಳಿತದಲ್ಲಿ ಅಭಿನವ ಅಂಬೇಡ್ಕರ್‌ರವರು ಎಂದು ಅನ್ನಿಸುತ್ತದೆ. ನೀವು ಈ ಚಾರಿತ್ರಿಕವನ್ನು ಒಪ್ಪಿಕೊಳ್ಳದಿದ್ದರೆ, ಅಧಿಕಾರಕ್ಕೋಸ್ಕರ ಏನೋ ಒಂದು ಮುಖವಾಡವನ್ನು ಹಾಕಿಕೊಂಡು ಸರಕಾರದಲ್ಲಿ ಉಳಿದಿದ್ದೀರಿ ಎಂದು ಹೇಳಬೇಕಾಗುತ್ತದೆ. ದಯಮಾಡಿ ಈ ಶಾಸನ ಸಭೆ ನಡೆಯತಕ್ಕ ಒಂದೂವರೆ—2 ತಿಂಗಳೊಳಗೆ ಒತ್ತಾಯ ಮಾಡಿ ಜುಡಿಷಿಯಲ್ ಎನ್‌ಕ್ವೈರಿ ಮಾಡಿ. ಯಾರು ಯಾರು ತಪ್ಪಿತಸ್ಥರು ಇದ್ದಾರೆ ಅವರು ಬಯಲಿಗೆ ಬರಲಿ. ಎಷ್ಟೇ ದೊಡ್ಡ ಮನುಷ್ಯರು ಆಗಿರಲಿ ಅವರು ಸಹ ಬಯಲಿಗೆ ಬರಲಿ. ಆದುದರಿಂದ ಈ ಒಂದು ಚಾರಿತ್ರಿಕವನ್ನು ತಾವು ಒಪ್ಪಿಕೊಳ್ಳಲೇಬೇಕು ಎಂದು ಒತ್ತಾಯ ಮಾಡುತ್ತೇನೆ. ನೀವು ಈ ಸವಾಲನ್ನು ಒಪ್ಪುವುದಾದರೆ ನಾನು ನಿಜವಾಗಿ ನಿಮ್ಮನ್ನು, ಇಡೀ ರಾಜ್ಯದ ಜನತೆಯ ಪರವಾಗಿ ಮುಕ್ತ ಕಂಠದಿಂದ ಯಾರು ಏನು ಟೀಕೆ ಮಾಡಿದ್ದರೂ ಕೈ ಜೋಡಿಸಿ, ಬಸವಲಿಂಗಪ್ಪನವರು ಧೀರ ಮಂತ್ರಿಗಳು ಎಂದು ಒಪ್ಪಿಕೊಳ್ಳುತ್ತೇನೆ. ನೀವು ಹೇಳಿದ ಮಾತನ್ನು ತಪ್ಪಿಸಿಕೊಂಡು ಹೋದರೆ ನಿಮ್ಮನ್ನು ಧೈರ್ಯ ಇಲ್ಲದ ಇರಕಕ್ಕ ಮಂತ್ರಿಗಳು, ಬರೀ ಬಾಯಿ ಮಾತಿನ ಮಂತ್ರಿಗಳು, ಬರೀ ಹೇಳಿಕೆ ಮಂತ್ರಿಗಳು, ಎಂದು ನಾನು ಹೇಳದೇ ಇದ್ದರೂ, ನಿಮ್ಮ ಮೇಲೆ ವಿಶ್ವಾಸ ಎಂದು ಜನ ಸಾಮಾನ್ಯರು ಹೇಳಬಹುದು. ಅಂತಹ ವಾತಾವರಣವನ್ನು ಸೃಷ್ಟಿ ಮಾಡಬಾರದು ಎನ್ನುವ ದೃಷ್ಟಿಯಿಂದ ತಾವು ಈ ಚಾರಿತ್ರಿಕವನ್ನು ಒಪ್ಪಿಕೊಳ್ಳಬೇಕು ಎಂದು ಹೇಳುತ್ತೇನೆ. ನೀವು ಜನತೆಗೆ ಏನು ಚುನಾವಣೆಗೆ ಮುಂಚೆ ಆಶ್ವಾಸನೆಗಳನ್ನು ಕೊಟ್ಟಿದ್ದೀರಿ ಆದನ್ನು ತಾವು ಅಧಿಕಾರಕ್ಕೆ ಬಂದ ಮೇಲೆ ಭ್ರಷ್ಟಾಚಾರದಿಂದ ವಿಮುಕ್ತರಾಗಬೇಕಾದರೆ ಶ್ರೀರಾಮಚಂದ್ರನ ರೀತಿ ನೀತಿಯನ್ನು ಎತ್ತಿಕಟ್ಟಬೇಕಾದರೆ, ಶ್ರೀರಾಮಚಂದ್ರನು ಹೆಂಡತಿಯನ್ನು ಕಾಡಿಗೆ ಕಳುಹಿಸಿ ಅಗ್ನಿ ಪ್ರವೇಶ ಮಾಡಿಸಿದ ರೀತಿಯಲ್ಲಿ ತಾವು ಅಗ್ನಿ ಪ್ರವೇಶ ಮಾಡಿಸಿದಂತಹ ಮಂತ್ರಿಮಂಡಲ ಆಗಬೇಕು. ನೀವು ಕೊಟ್ಟ ಮಾತನ್ನು ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಮುಂದಿನ ಜನರಾಂಗದವರೂ ನಿಮ್ಮನ್ನು ಶಪಿಸುವಂತೆ ಆಗಬಾರದೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನೀವೆಲ್ಲಾ ಅಗ್ನಿ ಪ್ರವೇಶ ಮಾಡಿ [ಅದರಲ್ಲಿ ಅಸತ್ಯವಂತರಾದರೆ ಕಣ್ಣು ಮೂಗು ಉಳಿಯುತ್ತದೆ ಅಸತ್ಯವಂತರಾದರೆ ಸುಟ್ಟು ಹೋಗುತ್ತದೆ. ಬಸವಲಿಂಗಪ್ಪನವರು ಧೀರರು, ಶೂರರು ಎಂದು ಅವರ ಹೆಸರು ಉಳಿಯಬೇಕಾದರೆ ಅವರು ನನ್ನ ಸವಾಲನ್ನು ಒಪ್ಪಬೇಕೆಂದು ಹೇಳುತ್ತೇನೆ.

ಇನ್ನು ಬರಗಾಲದ ಬಗ್ಗೆ ಅನೇಕ ಜನ ಮಾತನಾಡಿದ್ದು ಆಯಿತು. ಹೇಳಿಕೆಗಳನ್ನು ಕೊಟ್ಟಿದ್ದು ಆಯಿತು. ಸಂಸ್ಥಾ ಕಾಂಗ್ರೆಸ್ಸಿನವರು ಧೈರ್ಯಮಾಡಿ 5ನೇ ತಾರೀಖು ಸತ್ಯಾಗ್ರಹ ಮಾಡುತ್ತೇವೆ ಎಂದು ಹೇಳಿದ್ದಾರೆ. ದೇವೇಗೌಡರು ಸತ್ಯಾಗ್ರಹ ಮಾಡುವುದಾದರೆ ಜೈಲು ಸತ್ಯಾಗ್ರಹ ಮಾಡಲಿ ಕೂತುಕೊಂಡು ಸತ್ಯಾಗ್ರಹ ಮಾಡುತ್ತೇನೆ ಎಂದರೆ ನಾನು ಒಪ್ಪುವುದಿಲ್ಲ. ಜೈಲು ಸತ್ಯಾಗ್ರಹ ಮಾಡಿ ಆರು ತಿಂಗಳಕಾಲ ಜೈಲಿಗೆ ಹೋಗಬೇಕು. ಆಗ ಜೈಲಿನಲ್ಲಿ ಹೇಗೆ ನೋಡಿಕೊಳ್ಳುತ್ತಾರೆ ಎಂದು ಅವರಿಗೆ ಗೊತ್ತಾಗಬೇಕು. ಅವರು ನಮ್ಮನ್ನು ಜೈಲಿಗೆ ಕಳುಹಿಸಿದರು ನಾವು ನಿಮ್ಮನ್ನು ಜೈಲಿಗೆ ಹೋಗಿ ಎಂದು ಹೇಳುತ್ತೇನೆ. ಸತ್ಯಾಗ್ರಹ ಎಂದರೆ ಡಿವಿಜನಲ್ ಕಮಿಷನರ್ ಆಫೀಸಿನ ಮುಂದೆ ಕೂತು ಕೊಳ್ಳುವುದು ಅಲ್ಲ, ಜೈಲು ಸತ್ಯಾಗ್ರಹ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಹೆಚ್. ಡಿ. ದೇವೆಗೌಡ.—ಜೈಲಿಗೆ ಹಾಕುವುದು ಅವರಿಗೆ ಸೇರಿದ್ದು!

ಶ್ರೀ ಪಾಟಾಳ್ ನಾಗರಾಜ್.—ನೀವು ಜೈಲಿಗೆ ಹೋಗುವುದಕ್ಕೆ ತಯಾರು ಇದ್ದರೆ, ಅವರು ಜೈಲಿಗೆ ಹಾಕುವುದಕ್ಕೆ ತಯಾರು ಇದ್ದಾರೆ. ಅದಕ್ಕೆ ನೀವು ಇಡೀ ರಾಜ್ಯಾದ್ಯಂತ ಅಂಥೋಲನ ವನ್ನು ನಡೆಸಬೇಕು. ಇವೊತ್ತು ಮೂರು ಜಿಲ್ಲೆಗಳಲ್ಲ ಬಂದಿರುವ ಕ್ಷಾಮ ಪರಿಸ್ಥಿತಿಯನ್ನು ಹೋಗ ರಾಡಿಸುವುದಕ್ಕೆ ಸರಕಾರಕ್ಕೆ ಶಕ್ತಿ ಇಲ್ಲ ಎಂದು ಹೇಳುವುದಾದರೆ, ಇಡೀ ರಾಜ್ಯಕ್ಕೆ ದೈವವಶಾತ್ ಕ್ಷಾಮ ಬಂದರೆ, ಒಂದರ್ಲಾ ಒಂದು ರೀತಿಯಲ್ಲಿ ಬರಗಾಲ ಆವರಿಸಿಕೊಂಡರೆ ಸರಕಾರದವರು ಹೇಗೆ ನೋಡಿಕೊಳ್ಳುತ್ತಾರೆ ?

ಉಪಾಧ್ಯಕ್ಷರು.—ಚರ್ಚೆ ನಾಳೆ ಮುಂದುವರಿಯುತ್ತದೆ. Now The House adjourns and will meet tomorrow at 1-00 P.M.

The House adjourned at Six of the Clock to meet again at One of the Clock on Thursday, the 22nd February 1973.

WD 19687—GPB—500—6-5-1974